ಕರ್ನಾಟಕ ಅಕಾಡೆಮಿ

K-TET SUCCESS SERIES

K-TET

6–8 ಶಿಕ್ಷಕರ ನೇಮಕಾತಿ

ಸಮಾಜ–ವಿಜ್ಞಾನ

ವಿವರಣಾತ್ಮಕ ಪ್ರಶ್ನಾಕೋಶ

ಪರೀಕ್ಷೆಗೆ ಎಷ್ಟು ಬೇಕೋ ಅಷ್ಟೇ ಮಾಹಿತಿ ಒಳಗೊಂಡಿದೆ

ಡಿ.ಎಡ್ + ಡಿಗ್ರಿ / ಬಿ.ಎಡ್ ಅಭ್ಯರ್ಥಿಗಳಿಗಾಗಿ ಮಾತ್ರ

ಪುಸ್ತಕದ ವಿಶೇಷತೆ

- KTBS ಪಠ್ಯ ಪುಸ್ತಕಗಳ ಪರಾಮರ್ಶನದೊಂದಿಗೆ ವಿಶ್ಲೇಷಣೆ
- Blue Print ಆಧಾರಿತ ಪ್ರಶ್ನೋತ್ತರಗಳ ವಿವರಣೆ
- ಬೋಧನಾಶಾಸ್ತ್ರದ ಪ್ರಶ್ನೆಗಳ ಸಮಂಜಸ ವಿವರಣೆ
- K-TETಯಲ್ಲಿ 119 ಗರಿಷ್ಠ ಅಂಕಗಳನ್ನು ಗಳಿಸಿ 5 ಬಾರಿ TET, 2 ಬಾರಿ C-TET ಹಾಗೂ GPSTR ಪರೀಕ್ಷೆಯಲ್ಲಿ ಶೇ 78.91 ಗಳಿಕೆಯ ಅನುಭವದೊಂದಿಗೆ ರಚಿಸಲ್ಪಟ್ಟ ಏಕೈಕ ಕೃತಿ.
- KARTET ಪರೀಕ್ಷೆಯ ಸಂಪೂರ್ಣ ಮಾಹಿತಿ ಒಳಗೊಂಡಿದೆ.

6 KTET ಪ್ರಶ್ನೆ ಪತ್ರಿಕೆಗಳು
2014, 2015, 2017
2019, 2020, 2021

5 K-TET ಐದು ಮಾದರಿ ಪ್ರಶ್ನೆ ಪತ್ರಿಕೆಗಳು

Score More
Target
120+

ಮಾರ್ಗದರ್ಶನ ನಮ್ಮದು, ಯಶಸ್ಸು ನಿಮ್ಮದು

IMAMSAB MULTANI

ಸಂಜೀವ ವಿ ರಾಯ್ಕರ್

Karnataka Academy

ಶಿಕ್ಷಕ ಆಕಾಂಕ್ಷಿಗಳ

ಮೊದಲ ಆಯ್ಕೆ

30/09/2022

ರಿಂದ ಮಾರುಕಟ್ಟೆಯಲ್ಲಿ ಲಭ್ಯ

6–8 ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (K-TET) 2014

ಪತ್ರಿಕೆ - II

ಭಾಷೆ–1: ಕನ್ನಡ, ಭಾಷೆ–2: ಇಂಗ್ಲಿಷ್, ಬಾಲವಿಕಾಸ ಮತ್ತು ಪೆಡಗಾಜಿ, ಸಮಾಜ ವಿಜ್ಞಾನ

B.Ed.: 6 ರಿಂದ 8ನೇ ತರಗತಿ | ಅಂಕಗಳು – 150 | ಗರಿಷ್ಠ ಅವಧಿ : 2.30 ಗಂಟೆಗಳು

PART – I
ಭಾಷೆ – 1 ಕನ್ನಡ

ನೀವು ಜನಪ್ರಿಯರಾಗಬೇಕೆಂದಿರುವಿರಾ? ದಾರಿ ಕಾಣದಾಗಿದೆಯೇ? ಉಪಾಯ ಇಲ್ಲಿದೆ: ಜನರ ವೈಶಿಷ್ಟ್ಯ, ಸಾಮರ್ಥ್ಯ, ದಕ್ಷತೆಗಳನ್ನು ಗಮನಿಸಿ, ಗುರುತಿಸಿ, ಹೃತ್ಪೂರ್ವಕವಾಗಿ ಆನಂದಿಸಬಲ್ಲಿರಾ? ಅವರನ್ನು ಪ್ರೋತ್ಸಾಹಿಸಬಲ್ಲಿರಾ? ತಾಳ್ಮೆಯಿಂದ ಅವರ ಹಿತಚಿಂತನೆ ಮಾಡಬಲ್ಲಿರಾ? ಅವರಿಗಾಗಿ ದೇವರಲ್ಲಿ ಪ್ರಾರ್ಥಿಸಬಲ್ಲಿರಾ? ಎಂದರೆ ನಿಸ್ವಾರ್ಥ ಪ್ರೀತಿಯನ್ನು ನೀಡಬಲ್ಲಿರಾ? ಹೌದು ಎಂದಾದಲ್ಲಿ ನೀವು ಜನರಿಂದ ಅಪಾರ ಪ್ರೀತಿಯನ್ನು ಗಳಿಸಬಲ್ಲಿರಿ.

ನೀವು ಸುಲಭವಾಗಿ ಒಳ್ಳೆಯ ಚಿಂತನಶೀಲ ವ್ಯಕ್ತಿಗಳೂ, ಸಂಶೋಧಕರೂ ಆಗಬೇಕೆಂದಿರುವಿರಾ? ನೀವು ಆರಿಸಿಕೊಂಡ ಅಧ್ಯಯನದ ವಿಷಯವನ್ನು ಮನಸಾರೆ ಪ್ರೀತಿಸಿರಿ, ಆಗ ಎಂಥೆಂಥ ಅದ್ಭುತ ಯೋಚನೆಗಳು ಓಡೋಡಿ ಬರುತ್ತವೆಂದು ನೋಡಿ.

ನೀವು ಆರೋಗ್ಯವಂತರೂ, ಬಲಶಾಲಿಗಳೂ ಆಗಬೇಕೆಂದಿರುವಿರಾ? ಶುಭೇಚ್ಛೆಹಾಗೂ ಪ್ರೀತಿಯ ತರಂಗಗಳನ್ನು ನಿಮ್ಮ ಸುತ್ತಮುತ್ತಲಿನ ಜನ ಮಾತ್ರವಲ್ಲ. ಪಶುಪಕ್ಷಿ, ಕ್ರಿಮಿಕೀಟ, ತರುವೃಕ್ಷ, ಫಲ, ಪುಷ್ಪಗಳೆಡೆಗೆ ಎಂದರೆ ನಿಸರ್ಗದೆಡೆಗೆ ಹರಿಸಿ. ಇದರ ಪರಿಣಾಮ ನಿಮ್ಮ ಅಂತರ್ಮನಸ್ಸಿನ ಮೇಲಾಗಿ ರಕ್ತದ ಕಣಗಳ ಮೇಲೂ ಸತ್ಪರಿಣಾಮ ಉಂಟಾಗುವುದು!

ದ್ವೇಷವನ್ನು ಬೆಳೆಸಿ, ಬಿತ್ತರಿಸಿದಿರಾದರೆ ಶರೀರ ಹಾಗೂ ಮನಸ್ಸು ವಿಷಯುಕ್ತವಾಗುತ್ತವೆ.

ಹೌದು, ಪ್ರೀತಿ ಮಾತ್ರ ಅತ್ಯಂತ ಹಿತಕರ ಹಾಗೂ ಆರೋಗ್ಯವರ್ಧಕ ರಾಸಾಯನಿಕ ಪರಿಣಾಮಗಳನ್ನು ರಕ್ತದಲ್ಲಿ ಉಂಟು ಮಾಡುತ್ತದೆ. ಅಂದ ಮೇಲೆ ನೀವು ಅನುಸರಿಸಬೇಕಾದ ಆದರ್ಶ ಪಥ ಯಾವುದೆಂದು ಬೇರೆ ಹೇಳಬೇಕೆ?

1) "ಜನರಿಂದ ಅಪಾರವಾದ ಪ್ರೀತಿಯನ್ನು ಗಳಿಸಿ, ಜನಪ್ರಿಯರಾಗಲು ಮಾಡಬೇಕಾದ ಪ್ರಮುಖ ಕಾರ್ಯ":

(1) ಜನರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದು.

(2) ಜನರ ಹಿತಚಿಂತನೆಯನ್ನು ಮಾಡುವುದು.

(3) ಜನರ ಅಭ್ಯುದಯಕ್ಕಾಗಿ ದೇವರನ್ನು ಪ್ರಾರ್ಥಿಸುವುದು

(4) ಜನರಿಗೆ ನಿಸ್ವಾರ್ಥ ಪ್ರೀತಿಯನ್ನು ನೀಡುವುದು

Ans: 4

2) ಒಬ್ಬ ಸಂಶೋಧಕನಾಗಬೇಕೆಂಬ ವ್ಯಕ್ತಿಗೆ ಅದ್ಭುತವಾದ ಯೋಚನೆಗಳು ಅವಶ್ಯಕ. ಇಂತಹ ಯೋಚನೆಗಳೊಂದಿಗೆ ಆತನು ಉತ್ತಮ ಸಂಶೋಧಕನಾಗಲು ಮೊದಲು ಹೀಗೆ ಮಾಡಬೇಕು

(1) ಅಧ್ಯಯನದ ವಿಷಯವನ್ನು ಬಲವಾಗಿ ಇಷ್ಟಪಡಬೇಕು

(2) ಅದ್ಭುತವಾದ ಯೋಚನೆಗಳನ್ನು ಮನಸಾರೆ ಪ್ರೀತಿಸಬೇಕು

(3) ಒಳ್ಳೆಯ ಚಿಂತನಶೀಲ ಸಂಶೋಧನೆಗಳನ್ನು ಮಾಡಬೇಕು

(4) ಸಂಶೋಧಕನಾಗಬೇಕೆಂದು ಸದಾ ಯೋಚನಾಮಗ್ನನಾಗಬೇಕು.

Ans: 1

3) ಜಗತ್ತು ಬಲಶಾಲಿಗಳನ್ನು ಗೌರವಿಸುತ್ತದೆ, ಆರಾಧಿಸುತ್ತದೆ. ಅಂತಹ ಗೌರವಕ್ಕೆ ಪಾತ್ರರಾಗಲು ಮೂಲವಾಗಿ ಮಾಡಬೇಕಾದ ಕಾರ್ಯ:

(1) ಸುತ್ತಮುತ್ತಲಿನ ಜನರಿಗೆ ಶುಭೇಚ್ಛೆ ಹಾಗೂ ಪ್ರೀತಿಯನ್ನು ಆಶಿಸುಬೇಕು

(2) ಪಶುಪಕ್ಷಿ, ಕ್ರಿಮಿಕೀಟಗಳಿಗೆ ದಯೆ ಮತ್ತು ಕರುಣೆಯನ್ನು ತೋರಿಸಬೇಕು.

(3) ನಿಸರ್ಗದೆಡೆಗೆ ಒಳ್ಳೆಯ ಹಂಬಲ ಮತ್ತು ಪ್ರೀತಿಯನ್ನು ಪಸರಿಸಬೇಕು

(4) ತರುವೃಕ್ಷ, ಫಲಪುಷ್ಪಗಳಿಗೆ ಪ್ರೀತಿಯ ತರಂಗಗಳನ್ನು ಮುಟ್ಟಿಸಬೇಕು

Ans: 3

4) ಅತ್ಯಂತ ಘೋರ ಪರಿಣಾಮವನ್ನುಂಟು ಮಾಡಬಲ್ಲ ದ್ವೇಷವು ಮನುಷ್ಯರಲ್ಲಿ ಬೆಳೆದು, ಚಿಗುರಿದಾಗ ಹೀಗಾಗುತ್ತದೆ.

(1) ಶರೀರ ಹಾಗೂ ಮನಸ್ಸು ನಂಜುಗೊಳ್ಳುತ್ತವೆ.

(2) ಶರೀರ ಹಾಗೂ ಮನಸ್ಸು ವಿಷಯಾಸಕ್ತವಾಗುತ್ತದೆ

(3) ಶರೀರ ಬೆಳೆದು ಮನಸ್ಸು ವಿಷಯಾಸಕ್ತವಾಗುತ್ತದೆ

(4) ಶರೀರ ಹಾಗೂ ಮನಸ್ಸಿನಲ್ಲಿ ಮರವಾಗುತ್ತದೆ

Ans: 1

5) 'ಮಾನವ ಜನ್ಮ ಬಲು ದೊಡ್ಡದು.... ಎಂಬ ದಾಸರ ವಾಣಿಯಂತೆ ಜೀವನವನ್ನು ಸಾರ್ಥಕಪಡಿಸಿಕೊಳ್ಳಲು ಅನುಸರಿಸಬೇಕಾದ ಮಾರ್ಗ:

(1) ಆರೋಗ್ಯವಂತ ಮತ್ತು ಬಲಶಾಲಿ ವ್ಯಕ್ತಿಗಳಾಗಬೇಕು.

(2) ಸರ್ವಹಿತವಾದ ಮತ್ತು ನಿಸ್ವಾರ್ಥ ಪ್ರೀತಿಯುಳ್ಳವರಾಗಿರಬೇಕು.

(3) ಚಿಂತನ ಶೀಲರಾಗಿ ಪರಹಿತ ಚಿಂತನೆ

(4) ಶರೀರ ಹಾಗೂ ಮನಸ್ಸನ್ನು ವಿಷಯಮುಕ್ತಗೊಳಿಸಿದವರಾಗಬೇಕು.

Ans: 2

6) 'ತಾನು ಆದರ್ಶವಾಗಿ ಬಾಳಬೇಕೆಂಬ ಹಂಬಲ ಹೊಂದಿರುವ ಪ್ರತಿಯೊಬ್ಬ ಮನುಷ್ಯನೂ ಅನುಸರಿಸಬೇಕಾದ ಆದರ್ಶ ಪಥ':

(1) ಜನಪ್ರಿಯ ಪಥ (2) ಆನಂದ ಪಥ

(3) ಪ್ರೀತಿಯ ಪಥ (4) ನಿಸ್ವಾರ್ಥ ಪಥ

Ans: 3

7) 'ಈ ಕೆಳಗಿನವುಗಳಲ್ಲಿ ದ್ವಿರುಕ್ತಿ, ಜೋಡುನುಡಿ ಮತ್ತು ಕ್ರಿಯಾಪದಗಳು ಅನುಕ್ರಮವಾಗಿರುವುದು':

(1) ಕ್ರಿಮಿಕೀಟ, ಎಂಥೆಂಥ, ಗಳಿಸಬಲ್ಲಿರಿ

(2) ಎಂಥೆಂಥ, ಪಶುಪಕ್ಷಿ, ಸತ್ವರಿಣಾಮ

(3) ತರುವೃಕ್ಷ, ಓಡೋಡಿ, ಉಂಟಾಗುವುದು

(4) ಓಡೋಡಿ, ಫಲಪುಷ್ಪ ಮಾಡಬಲ್ಲಿರಿ

ವಿವರಣೆ..

Ans: 4

ಓಡೋಡಿ: (ಓಡಿ + ಓಡಿ) ಹೀಗೆ ಎರಡು ಬಾರಿ ಒಂದೇ ಪದವು ಸೇರಿ ಆಗಿರುವ ಪದವಾಗಿರುವುದರಿಂದ ಇದೊಂದು ದ್ವಿರುಕ್ತಿ ಪದವಾಗಿದೆ.

ಉದಾ: ಎಂಥ + ಎಂಥ = ಎಂಥೆಂಥ, ತುದಿ + ತುದಿ = ತುತ್ತತುದಿ

ಫಲಪುಷ್ಪ: ಅರ್ಥವಿರುವ ಪದದೊಂದಿಗೆ ಮಾತಿನ ಸೊಗಸನ್ನು ಹೆಚ್ಚಿಸಲು ಪ್ರಾಸಬದ್ಧವಾಗಿ

ಉಪಯೋಗಿಸುವ ಪದವನ್ನು ಜೋಡುನುಡಿ ಎನ್ನುವರು. ಇಂತಹ ಪದಗಳನ್ನು ಮಾತಿಗೊಂದು ಗೀತು ಎಂತಲೂ ಕರೆಯುತ್ತಾರೆ.

- ಜೋಡುನುಡಿಯಲ್ಲಿ ಪ್ರಾಸಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ.
- ಮೊದಲ ಪದಕ್ಕೆ ಅರ್ಥವಿದ್ದು, ಇನ್ನೊಂದು ಪದಕ್ಕೆ ಅರ್ಥವಿರಬಹುದು ಅಥವಾ ಅರ್ಥವಿಲ್ಲದೆಯು ಇರಬಹುದು.

ಉದಾ: ಮಕ್ಕಳುಮರಿ, ಸತಿಪತಿ *(ಅರ್ಥವಿರುವ ಪದಗಳು)*

ಕಾಫಿಗೀಫಿ, ಪುಸ್ತಕಗಿಸ್ತಕ *(ಅರ್ಥವಿರದ ಪದಗಳು)*

ಮಾಡಬಲ್ಲಿರಿ: ಎಂಬುದು ವಿಧ್ಯರ್ಥಕ–ಭವಿಷ್ಯದಲ್ಲಿ ಆಶಯವನ್ನು ಹೊಂದಿರುವ (ವಿಧ್ಯರ್ಥಕ ಕ್ರಿಯಾಪದ) ಕ್ರಿಯಾಪದವಾಗಿದೆ.

ಉದಾ: ಮಾಡಲಿ, ಬಾಳು, ಹೋಗಲಿ, ಕಲಿಯೋಣ

ಉದಾ: ಮಾಡಲಿ, ಮಾಡಿ, ಮಾಡಿರಿ, ಮಾಡು, ಮಾಡುವಾ, ಮಾಡೋಣ, ಮಾಡುವೆ

8) 'ನೀವು ಜನರಿಂದ ಅಪಾರ ಪ್ರೀತಿಯನ್ನು ಗಳಿಸಬಲ್ಲಿರಿ' ಈ ಹೇಳಿಕೆಯಲ್ಲಿರುವ ಕ್ರಿಯಾಪದವು ಈ ರೂಪದಲ್ಲಿದೆ.

(1) ನಿಷೇಧಾರ್ಥಕ ರೂಪ (2) ವಿಧ್ಯರ್ಥಕ ರೂಪ

(3) ನಿರ್ದೇಶನಾತ್ಮಕ ರೂಪ (4) ಸಂಭವನಾರ್ಥಕ ರೂಪ

ವಿವರಣೆ..

Ans: 4

ಗಳಿಸಬಲ್ಲಿರಿ: ಎಂಬುದು ಹಾರೈಕೆಯನ್ನು ಸೂಚಿಸವ ವಿಧ್ಯರ್ಥಕ ಪದವಾಗಿದೆ. ವಿಧ್ಯರ್ಥಕ ಎಂದರೆ (ವಿಧಿ + ಅರ್ಥ) ವಿಧಿ ಎಂದರೆ ಆಜ್ಞೆ, ಆಶೀರ್ವಾದ, ಅಪ್ಪಣೆ, ಹಾರೈಕೆ ವಿಧಿ ಎಂದರೆ ಭವಿಷ್ಯದಲ್ಲಿ ಎಂದರ್ಥ. ಹೀಗೆ ಭವಿಷ್ಯದೊಂದಿಗೆ ಆಜ್ಞೆ, ಹಾರೈಕೆ, ಆಶಯ, ಅಪ್ಪಣೆ, ಆಶೀರ್ವಾದವನ್ನು ಸೂಚಿಸುವ ಪದಗಳನ್ನು ವಿಧ್ಯರ್ಥಕ ಕ್ರಿಯಾಪದ ಎನ್ನುವರು.

ಕಿನ್ನರ ಕಿಂಪುರುಷರ ನೌಕೆಗಳಂತೆ
ತೇಲುತಿಹುದು ಬುರುಗಿನ ಬೆಳ್ಳಿ ಶರಧಿಯ ಮೇಲೆ,
ನೂರೊಂದು ಕಡೆಗೆ ತೇಲುತಿಹುದು ನೋಡಾ!
ಬೆಣ್ಣೆ ಕಡೆದ ಮಜ್ಜಿಗೆಯಂತೆ
ಹುಟ್ಟುಕಡೆದು ನೀರು ಅಟ್ಟಿಸುತಿಹುದು ನೋಡಾ!
ತಪತಪನೆ ಕಾಯ್ದು ಕೋಟಿ ಸೂರ್ಯರಂತೆ
ಕಣ್ಣು ಕುಕ್ಕಿಸುವುದು ನೋಡಾ ಸಾಗರವು!
ಹೆಡೆಯಲ್ಲಿ ಪುಷ್ಪರಾಗವಿಹ ಕಾಳಸರ್ಪಗಳಂತೆ
ಸಾಗಿಹುದು ನೋಡಾ ಸಾವಿರ ತೆರೆಗಳ ವೈಭವವು!
ಹಚ್ಚಹಸಿರಿತ್ತು ಹಿಂದೂ ಮಹಾಸಾಗರದ ಬಣ್ಣ
ಕಪ್ಪು ಹಸಿರಿತ್ತು ಮತ್ತೆ!
ಅರಬ್ಬಿಯ ಮುನ್ನೀರಿಗೆ ಕರಿನೀಲಿ ಬಣ್ಣವುಂಟು:
ಮುಂದೆ ಬಂದಿಹುದು ಕೆಂಪು ಸಮುದ್ರವೊಂದು
ನಿನ್ನ ಬಣ್ಣವಾವುದು, ಸಮುದ್ರರಾಜ?
ಸಪ್ತವರ್ಣದ ಇಂದ್ರಧನುಸ್ಸನ್ನು ಹಿಡಿದು
ಆಕಾಶರಾಜನ ಸರಿಗಟ್ಟಿದೆ ನೀನು.
ಚಣಕೊಮ್ಮೆ ಬಣ್ಣನ ಬದಲಿಸಿ ಚೆಲುವಿಕೆಯನಾಂತು
ಭೂದೇವಿಯನು ಪಾತಾಳಕ್ಕೆ ಮೆಟ್ಟಿದೆ ನೀನು!
ಮುಗಿಲಿಗಿಂತ ಮಿಗಿಲು ಸಾಗರದ ನೀಲಿ!
ಸಾಗರದ ತುದಿ ತಟ್ಟಿ ಮುಗಿಲೆಲ್ಲ ನೀಲಿಯಾಗಿಹುದು
ಮುಹಿಲನಂತತೆಯೆಲ್ಲ ಮುನ್ನೀರ ಗರ್ಭಪಿಂಡ!
ಮೋಡಗಳೆಂಬ ಓಡುಗಳು ಬಾಂದಳದಿ ತೇಲುವಲ್ಲಿ
ಹಕ್ಕಿಯೆಂಬ ಚಿಕ್ಕಿ ಮಿನುಗಿದವು ಕಡಲಿನೊಡಲ ಮೇಲ್ಗಡೆಗೆ!
ಗಾಳಿಯಲಿ ರೆಕ್ಕೆ ಬೀಸುತಿದೆ ರೆಕ್ಕೆ ಬಡಿದು!
ನೆಲೆ, ಗಾಳಿ, ಉರಿ, ಮುಗಿಲು,
ಪೆಂಡಂಭೂತಗಳಿವು ನಾಲ್ಕು

ಈ ಮಹಾಭೂತಗಳ ನುಂಗಿ ನೀರ್ಕುಡಿಯುತ್ತ
ಮತ್ತಮದಗಜದಂತೆ ಕ್ರೀಡಿಸುತ ನಿಂತ ಪಂಚಾನನ!
ನಿನ್ನೆದುರು ನರನೆಂಬ ಪಿಳ್ಳಿ, ಬರಿ ನೀರ್ಗುಳ್ಳಿ;
ಕೆರಳದಿರು! ಕರುಣಿಸು! ಶರಣು! ಶರಣು!!

9) 'ಬಲು ಪ್ರಕಾಶಮಾನವಾದ ವಸ್ತುಗಳನ್ನು ದೃಷ್ಟಿನೆಟ್ಟು ನೋಡಲು ಕಷ್ಟ. ಆದರೆ ಸಾಗರನ್ನು ನೋಡಿದಾಗ ಕಣ್ಣುಗಳು ಕುಕ್ಕಲು ಕಾರಣ:

(1) ಸಾಗರವು ಕೋಟಿ ಸೂರ್ಯನಂತೆ ಪ್ರಕಾಶಮಾನವಾಗಿರುವುದು.

(2) ಸಾಗರದ ನೀರಿನಲ್ಲಿ ಸೂರ್ಯನು ಪ್ರತಿಬಿಂಬಿತವಾಗುತ್ತಿರುವುದು.

(3) ಹುಟ್ಟು ಕಡೆದು ಸಮುದ್ರದ ನೀರನ್ನು ಅಟ್ಟಿಸುತ್ತಿರುವುದು.

(4) ಸಮುದ್ರದ ಮೇಲೆ ಬುರುಗು ತೇಲಾಡುತ್ತಿರುವುದು

Ans: 2

10) ಆಕಾಶರಾಜನನ್ನು ಸರಿಗಟ್ಟಿದ ಸಮುದ್ರರಾಜನು ಹಿಡಿದಿರುವ ಬಿಲ್ಲು ಹೀಗಿದೆ:

(1) ಸಪ್ತ ವರ್ಣಗಳಿಂದ ಕೂಡಿದ ಇಂದ್ರ ಧನುಸ್ಸಿನಂತೆ ಇದೆ.

(2) ಹಚ್ಚಹಸಿರು, ಕಪ್ಪು ಬಣ್ಣಗಳಿಂದ ಕೂಡಿದ ಹಿಂದೂ ಮಹಾಸಾಗರದಂತಿದೆ

(3) ಕರಿನೀಲಿ, ಕೆಂಪುಬಣ್ಣಗಳನ್ನು ಹೊಂದಿದ ಅರಬ್ಬೀ ಸಮುದ್ರದಂತಿದೆ.

(4) ಏಳು ಬಣ್ಣಗಳಿಂದ ಅಲಂಕೃತಗೊಂಡಿರುವ ಕಾಮನಬಿಲ್ಲಾಗಿದೆ.

Ans: 2

11) 'ಕವಿಯ ಕಲ್ಪನೆಯಲ್ಲಿ ಆಕಾಶವು ನೀಲಿಯಾಗಿರುವುದು ಈ ಕಾರಣದಿಂದ'

(1) ಸಾಗರದ ನೀಲಿಯ ಮುಗಿಲಿಗಿಂತ ಮಿಗಿಲಾಗಿರುವುದು

(2) ಸಾಗರದ ನೀರಿನಲ್ಲಿ ಪ್ರತಿಬಿಂಬತವಾಗಿ ನೀಲಿಯಾಗಿರುವುದು

(3) ಬಾಗಿದ ಆಕಾಶವು ಸಾಗರದ ಅಂಚನ್ನು ಸ್ಪರ್ಶಿಸಿ ಆಗಿರುವುದು

(4) ಸಹಜವಾಗಿಯೇ ಆಕಾಶವು ನೀಲಿ ಬಣ್ಣವನ್ನು ಹೊಂದಿರುವುದು

Ans: 3

12) 'ಸೂಕ್ಷ್ಮದ ಆನೆಯಂತೆ ಚೆಲ್ಲಾಟವಾಡುತ್ತಿರುವ ಪಂಚಾನನ ಎಂದರೆ ಇದು':

(1) ಮಹಾಭೂತಗಳನ್ನು ನುಂಗಿ ನೀರು ಕುಡಿದಿರುವ ಸಾಗರ

(2) ಬೃಹದಾಕಾರವಾಗಿ ನರ್ತಿಸುತ್ತಿರುವ ಸಾಗರದ ಅಲೆಗಳು

(3) ಅಲೆಗಳ ತಳ್ಳಾಟದಿಂದ ಉಂಟಾಗಿರುವ ನೀರಗುಳ್ಳೆಗಳು

(4) ನೆಲ, ಗಾಳಿ, ಉರಿ, ಮುಗಿಲು, ಸಮುದ್ರ ಈ ಐದು ಭೂತಗಳು

Ans: 4

13) 'ಮನಮೋಹಕ ಮತ್ತು ಅದ್ಭುತವಾದ ಸಾಗರದ ಅಲೆಗಳ ವೈಭವವು ಕವಿಯ ಕಲ್ಪನೆಗೆ ಕಾಣಿಸಿದ್ದು ಹೀಗೆ':

(1) ಚಮುದ್ರದ ತುಂಬ ತೇಲುತ್ತಿರುವ ಬೆಳ್ಳಿಯ ಬುರುಗಿನ ರಥಗಳಂತೆ

(2) ಬಾಂದಳದಿ ಹಕ್ಕಿಗಳಂತೆ ಸಾಗುತ್ತಿರುವ ಬಿಳಿಯ ಮುಗಿಲುಗಳಂತೆ

(3) ಮತ್ತೇರಿ ಸೊಕ್ಕಿ ಮನಬಂದಂತೆ ಚೆಲ್ಲಾಟವಾಡುತ್ತಿರುವ ಆನೆಗಳಂತೆ

(4) ಹೆಡೆಯಲ್ಲಿ ಪುಷ್ಯರಾಗವನ್ನು ಹೊಂದಿರುವ ಕಾಳಸರ್ಪಗಳಂತೆ

Ans: 4

14) 'ಕಿನ್ನರ ಕಿಂಪುರುಷರ ನೌಕೆಗಳಂತೆ ತೇಲುತಿಹುದು ಬುರುಗಿನ ಬೆಳ್ಳಿ ಶರಧಿಯ ಮೇಲೆ' ಎಂಬ ಹೋಲಿಕೆಯಲ್ಲಿ ಉಪಮೇಯ ಉಪಮಾನಗಳು ಅನುಕ್ರಮವಾಗಿ ಇಂತಿವೆ.

(1) ಕಿನ್ನರ ಇಂಪುರುಷರ ನೌಕೆಗಳು. ಶರಧಿಯ ಮೇಲೆ ತೇಲುತ್ತಿರುವ ನೌಕೆ

(2) ಶರಧಿಯ ಮೇಲೆ ತೇಲುತ್ತಿರುವ ನೌಕೆ, ಕಿನ್ನರ ಕಿಂಪುರುಷರ ರಥಗಳು

(3) ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ, ಕಿನ್ನರ ಕಿಂಪುರುಷರ ನೌಕೆಗಳು

(4) ಕಿನ್ನರ ಕಿಂಪುರಷರ ನೌಕೆಗಳು, ಶರಧಿಯ ಮೇಲೆ ತೇಲುತ್ತಿರುವ ಬುರುಗಿನ ಬೆಳ್ಳಿ

Ans: 3

15) 'ಅರಬ್ಬಿಯ ಮುನ್ನೀರಿಗೆ ಕರಿನೀಲಿ ಬಣ್ಣವುಂಟು ಮುಂದೆ ಬಂದಿಹುದು ಕೆಂಪುಸಮುದ್ರವೊಂದು'. ಇಲ್ಲಿಯ ಪದ್ಯದ ಸಾಲುಗಳಲ್ಲಿ ಅಡಿಗೆರೆ ಎಳೆದಿರುವ ಪದಗಳು ಅನುಕ್ರಮವಾಗಿ ಈ ಸಮಾಸಕ್ಕೆ ಸೇರಿವೆ.

(1) ಕರ್ಮಧಾರಯ ಮತ್ತು ಕರ್ಮಧಾರಯ

(2) ದ್ವಂದ್ವ ಮತ್ತು ತತ್ಪುರುಷ

(3) ತತ್ಪುರುಷ ಮತ್ತು ತತ್ತುರುಷ

(4) ಬಹುವ್ರೀಹಿ ಮತ್ತು ಕರ್ಮಧಾರಯ

Ans: 1

ಪೂರ್ವಪದವು ಗುಣವಾಚಕ / ವಿಶೇಷಣವಾಗಿದ್ದು ಉತ್ತರಪದವು ನಾಮಪದ / ವಿಶೇಷ್ಯವಾಗಿದ್ದು ಅವೆರಡೂ ಕೂಡಿ ಆಗುವ ಸಮಾಸಕ್ಕೆ **'ಕರ್ಮಧಾರಯ ಸಮಾಸ'** ಎನ್ನುತ್ತೇವೆ.

ಕರಿದು + ನೀಲಿ = ಕರಿನೀಲಿ

('ಕರಿದು' ವಿಶೇಷಣ ಮತ್ತು 'ನೀಲಿ' ಗುಣವಾಚಕ ನಾಮಪದ ಆದ್ದರಿಂದ ಕರಿನೀಲಿ ಕರ್ಮಧಾರಯ ಸಮಾಸವಾಗಿದೆ)

ಕೆಂಪದು + ಸಮುದ್ರ = ಕೆಂಪುಸಮುದ್ರ

('ಕೆಂಪದು' ವಿಶೇಷಣ ಮತ್ತು 'ಸಮುದ್ರ' ನಾಮಪದ ಆದ್ದರಿಂದ ಕೆಂಪುಸಮುದ್ರ ಕರ್ಮಧಾರಯ ಸಮಾಸವಾಗಿದೆ)

ಆದ್ದರಿಂದ ಆಯ್ಕೆ 1 ಸರಿಯಾಗಿದೆ.

16) 'ಭಾಷಾ ಕಲಿಕೆಯ ಅನುಕ್ರಮಣಕೆ ತತ್ವದನ್ವಯ ಕಲಿಕೆಯ ರೀತಿ ಹೀಗಿರುತ್ತದೆ':

(1) ಬಿಡಿ ಪದಗಳು ಮೊದಲು ಅನಂತರ ಪೂರ್ಣ ವಾಕ್ಯಗಳ ಕಲಿಕೆ

(2) ಮಾತುಗಾರಿಕೆಯ ಕೌಶಲದಿಂದ ನಂತರ ಓದುವ ಕೌಶಲದ ಕಲಿಕೆ

(3) ಮೌನ ಓದಿನ ನಂತರ ಬಾಯ್ದೆರೆ ವಾಚನದ ಕಲಿಕೆ

(4) ಸರಳದಿಂದ ಸಂಯುಕ್ತ, ಅಪರಿಚಿತದಿಂದ ಪರಿಚಿತ ಪದಗಳ ಕಲಿಕೆ

Ans: 2

- ಭಾಷಾ ಕೌಶಲ್ಯಗಳನ್ನು ಕ್ರಮವಾಗಿ ಹೆಸರಿಸುವುದಾದರೆ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು.
- ಇದರಲ್ಲಿ ಆಲಿಸುವುದು ಮತ್ತು ಓದುವುದು ಸ್ವೀಕೃತ ಕೌಶಲಗಳು.

- ಮಾತನಾಡುವುದು ಮತ್ತು ಬರೆಯುವುದು ಉತ್ಪಾದಕ ಕೌಶಲಗಳು.
- ವಿದ್ಯಾರ್ಥಿಗಳು ಮಾತು ಕಲಿತ ನಂತರ ಓದನ್ನು ಕಲಿಯುತ್ತಾರೆ.

17) 'ಭಾಷಾ ಕಲಿಕೆಯ ಆರಂಭ ಮತ್ತು ಅದು ಬಲಗೊಳ್ಳುವುದು ಅನುಕ್ರಮವಾಗಿ ಭಾಷಾ ಬೋಧನೆಯ ಈ ತತ್ವಗಳಿಂದ:

(1) ಸಿದ್ಧತಾ ತತ್ವ, ಅಭ್ಯಾಸ ತತ್ವ

(2) ಅನುಕರಣ ತತ್ವ, ಪುನರ್ಬಲನ ತತ್ವ

(3) ಸಿದ್ಧತಾ ತತ್ವ, ಅನುಕರಣ ತತ್ವ

(4) ಅನುಕರಣ ತತ್ವ, ಅಭ್ಯಾಸ ತತ್ವ

Ans: 4

- ಅನುಕರಣೆಯಿಂದ ಭಾಷಾ ಕಲಿಕೆಯು ಪ್ರಾರಂಭವಾಗಿ ಅಭ್ಯಾಸದಿಂದ ಅದು ಬಲಗೊಳ್ಳುತ್ತದೆ.
- ಅನುಕರಣೆ ಮಾನವನ ಸಹಜ ಪ್ರವೃತ್ತಿ. ಅನುಕರಣೆಯಿಂದ ಮಾನವ ಏನು ಬೇಕಾದರೂ ಕಲಿಯಬಲ್ಲ. ಲಿಬ್ನಿಜ್ ಎಂಬ ಭಾಷಾ ವಿಜ್ಞಾನಿ ಈ ವಾದವನ್ನು ಪ್ರತಿಪಾದಿಸಿದ್ದಾನೆ.
- ಭಾಷೆಯು ಪ್ರಮುಖವಾಗಿ ಮನಸ್ಸಿನ ಸ್ಥಿತಿಯನ್ನು ಪ್ರಕಟಿಸುವ ಒಂದು ಶಾಬ್ದಿಕ ಕ್ರಿಯೆ.
- ಭಾಷೆಯು ಮೊದಲು ಅನುಕರಣೆ, ಸಂಜ್ಞೆಗಳು, ಮಾತು, ಲಿಪಿ, ಗ್ರಂಥ ನಿರ್ಮಾಣ, ಸಾಹಿತ್ಯ ಸೃಷ್ಟಿ ಈ ರೀತಿ ಕಾಲಕ್ಕೆ ಅನುಗುಣವಾಗಿ ತನ್ನ ಜಾಯಮಾನಕ್ಕೆ ತಕ್ಕಂತೆ ರೂಪಾಂತರ ಹೊಂದುತ್ತಾ ಲಿಪಿ ಬದ್ಧ, ವ್ಯಾಕರಣ ಶುದ್ಧವಾಗಿ ಸಫಲತೆ ಪಡೆದಿದೆ.

18) 'ಒಬ್ಬ ಸಾಮಾನ್ಯ ವಿದ್ಯಾರ್ಥಿಯ ಪರಿಣಾಮಾಕಾರಿ ಕಲಿಕಾ ಪ್ರಕ್ರಿಯೆಯ ನಂತರ, ಆ ಪ್ರಕ್ರಿಯೆಗೆ ಸಂಬಂಧಿಸಿದ ಸಾಮಾನ್ಯ ಅಂಶಗಳಿಗೆ ಆತ ಸಮರ್ಪಕವಾಗಿ ಪ್ರತಿಕ್ರಿಯಿಸುತ್ತಿಲ್ಲ ಎಂದರೆ ಅದಕ್ಕೆ ಪ್ರಮುಖ ಕಾರಣ

(1) ಆತನು ಪ್ರಮುಖ ಅಂಶಗಳನ್ನು ಪಟ್ಟಿ ಮಾಡಿಕೊಂಡಿಲ್ಲ

(2) ಆತ ತನ್ನನ್ನು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿಲ್ಲ

(3) ಆತ ವಿಷಯವನ್ನು ಸರಿಯಾಗಿ ಆಲಿಸಿಲ್ಲ

(4) ಆತನಿಗೆ ಸ್ಪಷ್ಟವಾಗಿ ಓದಲು ಗೊತ್ತಿಲ್ಲ

Ans: 3

- ಆಲಿಸುವಿಕೆ ಭಾಷೆಯ ಪ್ರಥಮ ಹಾಗೂ ಮೂಲ ಕೌಶಲ. ಧ್ವನಿ ಸಂಕೇತಗಳನ್ನು ಆಲಿಸುವುದು ಮತ್ತು ಅನುಸರಿಸುವುದರಿಂದ ಭಾಷೆಯನ್ನು ಕಲಿಯಲಾಗುತ್ತದೆ. ಆಲಿಸುವಿಕೆ ಸಾಮಾನ್ಯವಾಗಿ ಎಲ್ಲಾ ಆರೋಗ್ಯವಂತ ಜನರಲ್ಲಿ ನಡೆಯುವ ಸ್ವಾಭಾವಿಕ ಕ್ರಿಯೆ.
- ಆಲಿಸುವಿಕೆ ಮತ್ತು ಮಾತುಗಾರಿಕೆಯ ಕೌಶಲಗಳು ಔಪಚಾರಿಕವಾಗಿ ಅಕ್ಷರ ಕಲಿಯದೇ ಇದ್ದವರಲ್ಲಿಯೂ ನಡೆಯುತ್ತದೆ.
- ಆಲಿಸುವುದನ್ನು ಕಲಿಯದ ವ್ಯಕ್ತಿ ಭಾಷೆಯ ಉಳಿದ ಕೌಶಲಗಳಾದ ಮಾತನಾಡುವುದು ಓದುವುದು ಮತ್ತು ಬರೆಯುವುದು ಕಲಿಯುವುದು ಕಷ್ಟ.
- ಶಿಕ್ಷಣದಲ್ಲಿ ಆಲಿಸುವ ಕ್ರಿಯೆಯಿಂದ ಮಕ್ಕಳು ಹೆಚ್ಚು ಕಲಿಯುತ್ತಾರೆ.

19) ಈ ಹೇಳಿಕೆಗಳಲ್ಲಿ ಉತ್ತಮ ಮಾತುಗಾರಿಕೆಯ ಪ್ರಮುಖ ಲಕ್ಷಣಗಳು ಇವು:

(1) ಸ್ಪಷ್ಟವಾದ ಉಚ್ಚಾರಣೆಯೊಂದಿಗೆ ಸರಾಗವಾಗಿ ಮಾತುನಾಡುವುದು

(2) ಮಾತಿನ ಧಾಟಿಯಲ್ಲಿ ಏರಿಳಿತದೊಂದಿಗೆ

ಮಾತುನಾಡುವುದು

(3) ಭಾವಪೂರ್ಣವಾಗಿ ಏಕತಾನತೆಯಿಂದ ಮಾತುನಾಡುವುದು

(4) ಅರ್ಥಪೂರ್ಣವಾಗಿ, ವ್ಯಾಕರಣಭದ್ಧವಾಗಿ ಮಾತುನಾಡುವುದು

(1) ಎ, ಬಿ, ಮತ್ತು ಡಿ (2) ಎ, ಸಿ ಮತ್ತು ಡಿ

(3) ಬಿ, ಸಿ ಮತ್ತು ಡಿ (4) ಎ, ಬಿ ಮತ್ತು ಸಿ

Ans: 1

- ಮಾತು ಒಂದು ಶಾಬ್ದಿಕ ಹಾಗೂ ಮಾನಸಿಕ ಕ್ರಿಯೆ ಆಗಿದ್ದು ಒಂದು ನಿರ್ದಿಷ್ಟ ಭಾಷೆಯ ಧ್ವನಿ ಸಂಕೇತಗಳ ಮೂಲಕ ಮಾತಿನ ಕ್ರಿಯೆ ನಡೆಯುತ್ತದೆ. ವ್ಯಕ್ತಿಯು ತನ್ನ ಭಾವನೆ, ಯೋಚನೆ, ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ನಿರ್ದಿಷ್ಟ ಧ್ವನಿ ಸಂಕೇತಗಳ ಮೂಲಕ ಅರ್ಥಪೂರ್ಣವಾಗಿ, ವ್ಯವಸತವಾಗಿ ಪ್ರಕಟಿಸುವುದೇ ಮಾತುಗಾರಿಕೆ.
- ಸ್ಪಷ್ಟವಾದ ಉಚ್ಚಾರ ಹಾಗೂ ಅರ್ಥಕ್ಕೆ ಅನುಗುಣವಾದ ಧ್ವನಿಗಳ ಏರಿಳಿತಗಳೊಂದಿಗೆ ನಿರರ್ಗಳವಾಗಿ ಮತ್ತು ಸಹಜವಾಗಿ ಮಾತನಾಡುವ ಸಾಮರ್ಥ್ಯ ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು.

20) 'ಕ್ರಿಯಾತ್ಮಕ ವ್ಯಾಕರಣ ಬೋಧನೆಯ ಮುಖ್ಯ ಲಕ್ಷಣ ಇದಾಗಿದೆ' :

(1) ಭಾಷೆಗಿಂತ ಮೊದಲು ವ್ಯಾಕರಣದ ಕಲಿಕೆ

(2) ಪ್ರತ್ಯೇಕವಾಗಿ ಶಾಸ್ತ್ರೀಯ ರೀತಿಯ ಕಲಿಕೆ

(3) ಭಾಷೆಯ ಜೊತೆಯಲ್ಲಿಯೇ ಪ್ರಯೋಗದ ಮೂಲಕ ವ್ಯಾಕರಣ ಕಲಿಕೆ

(4) ವ್ಯಾಕರಣ ಸೂತ್ರಗಳ ಅನ್ವಯದಿಂದ ಭಾಷೆಯ ಕಲಿಕೆ

Ans: 3

ಕ್ರಿಯಾತ್ಮಕ ವ್ಯಾಕರಣವನ್ನು ಪ್ರಾಯೋಗಿಕ ವ್ಯಾಕರಣ ಮತ್ತು ಸಾಂದರ್ಭಿಕ ವ್ಯಾಕರಣ ಎಂದು ಕರೆಯಬಹುದು. ಶಿಕ್ಷಕರಾದವರು ಶಾಲೆಗಳಲ್ಲಿ ತಾವು ಭೋದಿಸುವ ಪಠ್ಯ ವಿಷಯಕ್ಕೆ ಅನುಗುಣವಾಗಿ ವ್ಯಾಕರಣವನ್ನು ಬೋಧಿಸಬೇಕೆ ಹೊರತು ಪ್ರತ್ಯೇಕವಾದ ಅವಧಿಗಳಲ್ಲಿ ವ್ಯಾಕರಣವನ್ನು ಬೋಧಿಸಬಾರದು. ಸಂದರ್ಭದಲ್ಲಿ ತಕ್ಕಂತೆ ವಿದ್ಯಾರ್ಥಿಗಳಿಗೆ ಅಧ್ಯಾಯವಾರು ಬರುವ ವ್ಯಾಕರಣಾಂಶಗಳನ್ನು ಕಲಿಸುತ್ತಾ ಕಲಿಕೆನ್ನು ಸರಿದೂಗಿಸುವ ಪ್ರಯತ್ನ ಮಾಡಬೇಕು.

21) ಬಹುಭಾಷಾ ಮಕ್ಕಳಿರುವ ತರಗತಿಯಲ್ಲಿ ಭಾಷಾ ಶಿಕ್ಷಕ ಹೊಂದಬೇಕಾದ ಅಪೇಕ್ಷಿತ ಧೋರಣೆ ಇರಬೇಕಾಗಿದ್ದು ಹೀಗೆ.

(1) ಬಹುಭಾಷಾ ವಿದ್ಯಾರ್ಥಿಗಳು ಭಾಷಾ ಬೋಧನೆಗೆ ಒಂದು ತೊಡಕು

(2) ಬಹುಭಾಷಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಬೋಧನೆ ಮಾಡುವುದು

(3) ಬಹುಭಾಷಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಬೋಧನೆ ಮಾಡುವುದು

(4) ವಿವಿಧ ಭಾಷೆಗಳಿಗೆ ಪ್ರತ್ಯೇಕ ಬೋಧನಾ ವ್ಯವಸ್ಥೆ ಮಾಡುವುದು

Ans: 2

ಬಹು ಭಾಷೆ ಮಾತನಾಡುವ ವಿದ್ಯಾರ್ಥಿಗಳನ್ನು ಹೊಂದಿರುವ ವರ್ಗ ಕೋಣೆಯಲ್ಲಿ ಶಿಕ್ಷಕರು ಸಂಪನ್ಮೂಲ ಎಂದು ಭಾವಿಸಿ, ಸಮನ್ವಯ ಕಾಯ್ದುಕೊಂಡು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತೇಜಿಸಬೇಕು. ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ವಿದ್ಯಾರ್ಥಿಗಳಿಂದ ತರಗತಿಯು ಸಂಪನ್ಮೂಲವಾಗಿರುವುದಲ್ಲದೆ ಎಲ್ಲ ವಿದ್ಯಾರ್ಥಿಗಳು ಅನುಕರಣೆಯ ಮೂಲಕ ಇನ್ನುಳಿದ ಭಾಷೆಗಳನ್ನು ಕಲಿಯಲು ಸಹಾಯಕಾರಿಯಾಗುತ್ತದೆ.

22) 'ಭಾಷಾ ಕಲಿಕಾ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಘಟಕಗಳನ್ನು ಅಗತ್ಯ ಸಿದ್ಧತೆಯೊಂದಿಗೆ ಈ ರೀತಿಯಾಗಿ ಅನುಕೂಲಿಸುವುದು ಹೆಚ್ಚು ಸೂಕ್ತ:

(1) ವೈವಿಧ್ಯ ಚಟುವಟಿಕೆಗಳ ಮೂಲಕ

(2) ವಿವಿಧ ಬೋಧನಾ ವಿಧಾನ ಬಳಸಿ

(3) ಸಾಕಷ್ಟು ಕಲಿಕಾ ಸಾಮಗ್ರಿಗಳೊಂದಿಗೆ

(4) ತರತರದ ಸನ್ನಿವೇಶಗಳಲ್ಲಿ

Ans: 1

ವೈವಿಧ್ಯಮಯ ಕಲಿಕಾ ಚಟುವಟಿಕೆಗಳು ತರಗತಿಯನ್ನು ಆಸಕ್ತಿದಾಯಕವನ್ನಾಗಿಸುವುದಲ್ಲದೇ ಪರಿಣಾಮಕಾರಿ ಕಲಿಕೆಯನ್ನು ಉಂಟುಮಾಡಲು ಶಿಕ್ಷಕನಿಗೆ ಸಹಾಯಕಾರಿಯಾಗುತ್ತದೆ. ಇತ್ತೀಚಿನ ಬೋಧನಾ ವಿಧಾನಗಳಾದ ಮಾಡಿ ಕಲಿ, ನೋಡಿ ಕಲಿ, ನಲಿ ಕಲಿ, ಡಾಲ್ಟನ್ ಪದ್ಧತಿ, ವಿನೆಟ್ಕಾ ಪದ್ಧತಿ, ಪಠ್ಯಪುಸ್ತಕ ಪದ್ಧತಿಯಲ್ಲಿ ಬರುವ ವಿವಿಧ ಚಟುವಟಿಕೆಗಳು ವಿದ್ಯಾರ್ಥಿಗಳು ಸ್ವಯಂ ಕಲಿಯಲು ಹಾಗೂ ಶಿಕ್ಷಕನಿಗೆ ಮಾರ್ಗದರ್ಶಿಸಲು ಸಹಾಯಕಾರಿಯಾಗಿದೆ.

23) 'ಭಾಷೆಯ ಮೇಲಿನ ಪ್ರಭುತ್ವ ಸಾಧನೆಯೆಂದರೆ ಮುಖ್ಯವಾಗಿ ಇವುಗಳನ್ನು ಹೊಂದುವುದೇ ಆಗಿದೆ':

(1) ಭಾಷಾ ಬಳಕೆಯ ವಿಶೇಷ ಸಾಮರ್ಥ್ಯಗಳು

(2) ಭಾಷಾ ಕಲಿಕೆಯ ವಿವಿಧ ಸಾಮರ್ಥ್ಯಗಳು

(3) ಭಾಷಾ ಬಳಕೆಯ ಮೂಲ ಕೌಶಗಳು

(4) ಭಾಷಾ ಬಳಕೆಯ ವಿವಿಧ ಕೌಶಗಳು

Ans: 4

ಆಲಿಸುವಿಕೆ, ಮಾತನಾಡುವಿಕೆ, ಓದುವುದು ಮತ್ತು ಬರೆಯುವುದನ್ನು ಭಾಷಾ ಕೌಶಲಗಳು ಎಂದು ಕರೆಯುತ್ತಾರೆ. ಯಾವುದೇ ಶಿಕ್ಷಕ ವಿಷಯವನ್ನು ಪರಿಣಾಮಕಾರಿಯಾಗಿ ಮಂಡಿಸಬೇಕಾದರೆ ಭಾಷಾ ಕೌಶಲ್ಯಗಳ ಮೇಲೆ ಪ್ರಭುತ್ವವನ್ನು ಹೊಂದಿರಬೇಕು ಅಂದಾಗ ಮಾತ್ರ ಕಲಿಕೆಯುವುದಕ್ಕೂ ವಿದ್ಯಾರ್ಥಿಗಳ ಆಸಕ್ತಿಯನ್ನು ಹಿಡಿದಿಡಲು ಸಾಧ್ಯವಾಗುವುದಲ್ಲದೆ ಕಲಿಸಬೇಕಾದ ವಿಷಯದ ಸಂಪೂರ್ಣ ಜ್ಞಾನ ವಿದ್ಯಾರ್ಥಿಗಳಿಗೆ ಸಿಗುವುದು.

24) ಭಾಷಾ ಕಲಿಕೆಯಲ್ಲಿ ನೈಪುಣ್ಯ ಸಾಧಿಸಲು ಈ ರೀತಿಯ ಕಲಿಕೆಯು ಸ್ಪಷ್ಟತೆ ಮತ್ತು ಪರಿಪೂರ್ಣತೆಯನ್ನು ಒದಗಿಸಬಲ್ಲದು.

(1) ಸ್ವಯಂ ಕಲಿಕೆ (2) ಗುಂಪು ಕಲಿಕೆ

(3) ಸಂಘಟಿತ ಕಲಿಕೆ (4) ಸಾಂದರ್ಭಿಕ ಕಲಿಕೆ

Ans: 1

- ಸ್ವಯಂ ಕಲಿಕೆಯಿಂದ ವಿದ್ಯಾರ್ಥಿಗಳು ಗರಿಷ್ಠ ಮಟ್ಟದ ಜ್ಞಾನವನ್ನು ಹೊಂದಲು ಸಾಧ್ಯವಾಗುತ್ತದೆ ಎಂಬುದನ್ನು ಎಡ್ಗರ್ ಡೇಲ್ ರವರ ಕಲಿಕಾ ಅನುಭವ ಶಂಕುವಿನಲ್ಲಿ ನೋಡಬಹುದು. ಕೇಳುವಿಕೆಯಿಂದ ಕೇವಲ 10% ಹಾಗೂ ನೋಡುವುದರಿಂದ ಕೇವಲ 20% ಮತ್ತು ಕೇಳಿ ಮಾಡುವುದರಿಂದ 30% ಸ್ವತಃ ಪ್ರಾತ್ಯಕ್ಷಿಕೆ ಕೊಟ್ಟರೆ 50% ಹಾಗೂ ತಾನೇ ಸ್ವತಃ ಬೋಧಿಸಿದರೆ 90% ಕಲಿಕೆಯಾಗುತ್ತದೆ ಎಂಬುದನ್ನು ತಿಳಿಸಿದ್ದಾರೆ.
- ಅದರಂತೆ ವಿದ್ಯಾರ್ಥಿಗಳು ಸ್ವಯಂ ಬೋಧಿನಿ ಸಾಮಗ್ರಿಗಳಿಂದ ಸ್ವತಃ ತಾವೇ ಕಲಿಯಲು ಶಿಕ್ಷಕರು ಮಾರ್ಗದರ್ಶಿಸಬೇಕು.

25) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಆಶಯದಲ್ಲಿ ಮೌಲ್ಯಮಾಪನವು ಹೀಗಿರಬೇಕೆಂದು ಅಂಶವನ್ನು ಒತ್ತಿ ಹೇಳಿದೆ

(1) ಬೋಧನಾ ವಿಧಾನ (2) ಅರ್ಹತಾ ಮಾಪನ

(3) ಪರೀಕ್ಷಾ ವಿಧಾನ (4) ಕಲಿಕಾ ವಿಧಾನ

Ans: 4

ನಿರಂತರ ಮೌಲ್ಯಮಾಪನ – ನಿರಂತರ ಮೌಲ್ಯಮಾಪನ ಎಂದರೆ ತರಗತಿಯ ಪ್ರಾರಂಭದಿಂದ ತರಗತಿಯ ಕೊನೆಯವರೆಗೆ ನಡೆಯುವ ಮೌಲ್ಯಮಾಪನ ಪ್ರಕ್ರಿಯೆಯಾಗಿದೆ.

ಮೌಲ್ಯಮಾಪನವನ್ನು ಬೋಧನೆಯ ಪೂರ್ವದಲ್ಲಿ, ಬೋಧನಾ ಅವಧಿಯಲ್ಲಿ ಮತ್ತು ಬೋಧನೆಯ ನಂತರ ಮಾಡುವುದಾಗಿದೆ.

ವ್ಯಾಪಕ ಮೌಲ್ಯಮಾಪನ – ವ್ಯಾಪಕ ಮೌಲ್ಯಮಾಪನ ಎಂದರೆ ಪಠ್ಯ ವಿಷಯಗಳನ್ನು ಮಾತ್ರ ಪರಿಗಣಿಸದೆ ಪಠ್ಯೇತರ ವಿಷಯಗಳನ್ನು ಪರಿಗಣಿಸಿ ಮೌಲ್ಯಮಾಪನ ಮಾಡುವುದಾಗಿದೆ.

26) 'ಮಾತನಾಡುವ ಕೌಶಲಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಕಾರ್ಯದಲ್ಲಿ ಈ ಚಟುವಟಿಕೆಗಳು ಹೆಚ್ಚು ಪರಿಣಾಮಕಾರಿ':

(1) ಸಂದರ್ಶನ, ಅಭಿನಯ, ಸಂಭಾಷಣೆ, ಚರ್ಚೆ

(2) ಆಶುಭಾಷಣ, ಸಂದರ್ಶನ, ಚರ್ಚೆ, ಸಂಭಾಷಣೆ

(3) ಚರ್ಚೆ, ಆಶುಭಾಷಣ, ಸಂದರ್ಶನ, ಯೋಜನೆ

(4) ಸಂಭಾಷಣೆ, ಸಂದರ್ಶನ, ಗುಂಪು ಕಾರ್ಯ, ಆಶುಭಾಷಣ

Ans: 2

ಮಾತುಗಾರಿಕೆಯನ್ನು ಕಲಿಸುವ ಮತ್ತು ಪೋಷಿಸುವ ಭಾಷಾ ಅಭ್ಯಾಸಗಳು – ಸಂಭಾಷಣೆಗಳನ್ನು ಏರ್ಪಡಿಸುವುದು, ಪುಟಾಣಿಗಳ ಭಾಷಣವನ್ನು ಏರ್ಪಡಿಸುವುದು, ಕಥೆ ಹೇಳಿಸುವುದು ಮತ್ತು ಕೇಳಿಸುವುದು, ಗಟ್ಟಿ ವಾಚನದ ಅಭ್ಯಾಸಗಳು, ಕ್ರೀಡೆಗಳು ಮತ್ತು ನಾಟಕ ಅಭ್ಯಾಸಗಳು, ಚಿತ್ರಪಟಗಳ ಮೂಲಕ ಮಾತನಾಡುವುದನ್ನು ಕಲಿಯುವುದು, ಚರ್ಚೆ ಮತ್ತು ತರ್ಕ ಕೂಟಗಳ ಮೂಲಕ ಕಲಿಯುವುದು, ಆಶುಭಾಷಣಗಳ ಮೂಲಕ ಕಲಿಯುವುದು, ಪ್ರಶ್ನೋತ್ತರ ಕಾರ್ಯಕ್ರಮಗಳು, ಏಕ ಪಾತ್ರ ಅಭಿನಯ ಮತ್ತು ಬಹು ಪಾತ್ರ ಅಭಿನಯ ಹಾಗೂ ಗಾಯನಗಳು, ಪತ್ರಿಕೆಗಳು ಮತ್ತು ವರದಿಗಳನ್ನು ಓದಿಸುವ ಅಭ್ಯಾಸಗಳನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಕೊಡಬೇಕು ಇದರಿಂದ ವಿದ್ಯಾರ್ಥಿಗಳಲ್ಲಿ ಮಾತನಾಡುವ ಕೌಶಲ್ಯ ಪರಿಣಾಮಕಾರಿಯಾಗಿ ಬಲಗೊಳ್ಳುತ್ತದೆ.

27) ಭಾಷಾ ಪ್ರಯೋಗಾಲಯವು ಭಾಷಾ ಶಿಕ್ಷಣದಲ್ಲಿ ಈ ರೀತಿ ನೆರವಾಗುತ್ತದೆ.

(1) ವ್ಯಾಕರಣ ಬದ್ಧವಾಗಿ ಭಾಷೆಯನ್ನು ಕಲಿಯಲು

(2) ಅಂತರ್ಜಾಲ ನೆರವಿನಿಂದ ಭಾಷೆಯನ್ನು ಕಲಿಯಲು

(3) ಭಾಷೆಯನ್ನು ಶಾಸ್ತ್ರೀಯ ಕ್ರಮದಲ್ಲಿ ಪ್ರಯೋಗಿಸಲು

(4) ಸೂಕ್ತ ಅಭ್ಯಾಸಗಳ ಮೂಲಕ ಭಾಷಾ ದೋಷಗಳನ್ನು ಪರಿಹರಿಸಿಕೊಳ್ಳಲು

Ans: 4

ವಿದ್ಯಾರ್ಥಿಗಳಿಗೆ ಭಾಷಾ ಕೌಶಲ್ಯಗಳನ್ನು ಬೋಧಿಸಲು ಮತ್ತು ಭಾಷಾ ಕೌಶಲ್ಯಗಳನ್ನು ದೋಷಗಳನ್ನು ಪರಿಹರಿಸಲು ಮತ್ತು ವಿವಿಧ ಭಾಷಾ ಕೌಶಲ್ಯಗಳನ್ನು ಅಭ್ಯಾಸ ಮಾಡಿಸುವ ಉದ್ದೇಶದಿಂದ ವೈಜ್ಞಾನಿಕವಾಗಿ ವ್ಯವಸ್ಥೆಗೊಳಿಸಲಾಗಿರುವ ಪ್ರಯೋಗಾಲಯವೇ ಭಾಷಾ ಪ್ರಯೋಗಾಲಯ.

ತಾಂತ್ರಿಕ ಸಲಕರಣೆಗಳು ಮತ್ತು ಬೋಧನಾ ಉಪಕರಣಗಳಿಂದ ಸೂಸಜ್ಜಿತವಾಗಿರುವ ಭಾಷಾ ಪ್ರಯೋಗಾಲಯದಲ್ಲಿ ಭಾಷಾ ಕೌಶಲ್ಯಗಳನ್ನು ಕಲಿಸಲು ಮತ್ತು ಅಭ್ಯಾಸ ಮಾಡಲು ಅಗತ್ಯವಿರುವ ಎಲ್ಲ ಸಾಧನಗಳನ್ನು ವ್ಯವಸ್ಥೆಗೊಳಿಸಿರುತ್ತದೆ.

ಮಕ್ಕಳ ಭಾಷಾ ದೋಷಗಳನ್ನು ಸರಿಪಡಿಸಲು ಇಲ್ಲಿ ವ್ಯವಸ್ಥೆ ಇರುತ್ತದೆ. ಭಾಷಾ ಕೌಶಲಗಳ ಬೋಧನೆ ಮತ್ತು ಕಲಿಕೆಯ ಬಗ್ಗೆ ಕ್ರಿಯಾ ಸಂಶೋಧನೆ ಕೈಗೊಳ್ಳಲು ಅಗತ್ಯವೆನಿಸುವ ಎಲ್ಲಾ ಅನುಕೂಲಗಳು ಸಲಕರಣೆಗಳು ಇರುತ್ತವೆ.

28) 'ಓದುವ ಪರಿಹಾರಾತ್ಮಕ ಕಾರ್ಯದಲ್ಲಿ ಈ ರೀತಿಯಾದ ಪರಿಹಾರಾತ್ಮಕ ಚಟುವಟಿಕೆಯನ್ನು ನಡೆಸುವುದು ಹೆಚ್ಚು ಸೂಕ್ತ':

(1) ವಿಶೇಷ ತರಗತಿ, ತರಗತಿ ಶಿಕ್ಷಕರಿಂದ, ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ

(2) ವಿಶೇಷ ತರತಗಿ, ವಿಶೇಷ ಶಿಕ್ಷಕರಿಂದ, ಓದುಗಾರಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ

(3) ವಿಶೇಷ ತರಗತಿ, ವಿಶೇಷ ಶಿಕ್ಷಕರಿಂದ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ

(4) ಸಾಮಾನ್ಯ ತರಗತಿ, ತರಗತಿ ಶಿಕ್ಷಕರಿಂದ, ಓದುಗರಿಕೆಯಲ್ಲಿ ಹಿಂದುಳಿದ ವಿದ್ಯಾರ್ತಿಗಳಿಗೆ

Ans: 2

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಅಥವಾ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳಿಗೆ ಶಿಕ್ಷಕರು ಪರಿಹಾರ ಬೋಧನೆ ಕೈಗೊಳ್ಳುತ್ತಾರೆ. ಇದರಲ್ಲಿ ವಿದ್ಯಾರ್ಥಿಗಳಲ್ಲಿ ಇರುವ ಕಲಿಕಾ ಸಮಸ್ಯೆಗಳನ್ನು ನಿವಾರಿಸಿ ಪ್ರಸ್ತುತ ಕಲಿಕೆಯೊಂದಿಗೆ ಸರಿದೂಗಿಸಲು ಪ್ರಯತ್ನಿಸಲಾಗುತ್ತದೆ. ಇಂಥ ಸಂದರ್ಭದಲ್ಲಿ ವಿಶೇಷ ತರಗತಿ ಮತ್ತು ವಿಶೇಷ ಶಿಕ್ಷಕರು ಈ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

29) 'ಒಂದು ಘಟಕದ ಕಲಿಕಾ ಪ್ರಕ್ರಿಯೆಯ ನಂತರ ಭಾಷಾ ಕೌಶಗಳು ಪ್ರಗತಿಗೆ ಭಾಷಾ ಶಿಕ್ಷಕರು ಪರಿಹಾರ ಬೋಧನೆ ನಡೆಸಬೇಕಾಗಿರುವುದು ಇವರಿಗೆ':

(1) ತರಗತಿಯ ಆಯ್ದವಿದ್ಯಾರ್ಥಿಗಳಿಗೆ

(2) ತರಗತಿಯ ಪ್ರತಿಭಾವಂತ ಮಕ್ಕಳಿಗೆ

(3) ತರಗತಿಯ ಶೇ. 5ರಷ್ಟು ಮಕ್ಕಳಿಗೆ

(4) ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ

Ans: 4

- ಒಂದು ಘಟಕದ ಕಲಿಕೆಯ ನಂತರ ಭಾಷಾ ಕೌಶಲಗಳು ಪ್ರಗತಿಗೆ ಭಾಷಾ ಶಿಕ್ಷಕರು ಪರಿಹಾರ ಬೋಧನೆಯನ್ನು ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ ಕೈಗೊಳ್ಳುತ್ತಾರೆ.
- ಒಂದು ವೇಳೆ ಪರೀಕ್ಷೆಯಲ್ಲಿ ಕಡಿಮೆ ಅಂಕ ಗಳಿಸಿದ ಅಥವಾ ಅನುತ್ತೀರ್ಣರಾದ ವಿದ್ಯಾರ್ಥಿಗಳು ಇದ್ದಲ್ಲಿ ಅಂತ ವಿದ್ಯಾರ್ಥಿಗಳು ಶಿಕ್ಷಕರು ಒಟ್ಟಾರೆಯಾಗಿ ಪರಿಗಣಿಸಿ ಬೋಧಿಸುತ್ತಾರೆ.

30) 'ಕಲಿಕೆ ಸ್ವಾಧೀನಗೊಳ್ಳಲು ಈ ಅಂಶಗಳು ಬಲು ಮುಖ್ಯ'

(1) ಭಾಷಾ ಕೌಶಗಳ ಗಳಿಕೆ ಮತ್ತು ಬಳಕೆ

(2) ತಂತ್ರಜ್ಞಾನದ ಕಲಿಕೆ ಮತ್ತು ಸಂಪರ್ಕ

(3) ನಿರಂತರ ಪರಿಶ್ರಮ ಮತ್ತು ಗ್ರಹಿಕೆ

(4) ಜ್ಞಾನ ಸಂಗ್ರಹ ಮತ್ತು ರಚನೆ

Ans: 1

- ಕಲಿಕೆ ಸ್ವಾಧಿನಗೊಳ್ಳಲು ಭಾಷಾ ಕೌಶಲಗಳ ಮೇಲೆ ಪ್ರಭುತ್ವ ಹೊಂದಬೇಕು ಜೊತೆಗೆ ಕಲಿಕಾ ಚಟುವಟಿಕೆಗಳಲ್ಲಿ ತನ್ನ ಜ್ಞಾನವನ್ನು ವಿದ್ಯಾರ್ಥಿಗಳ ಜೊತೆಗೆ ಹಂಚಿಕೊಳ್ಳುವ ಸಂದರ್ಭವನ್ನು ಸರಿಯಾಗಿ ಬಳಸಿದಲ್ಲಿ ಉತ್ತಮ ಶಿಕ್ಷಕನಾಗಿ ವಿದ್ಯಾರ್ಥಿಗಳ ಸರತೋಮುಖ ಪ್ರಗತಿಗೆ ಶ್ರಮಿಸಲು ಸಾಧ್ಯವಾಗುತ್ತದೆ.
- ಆಲಿಸುವಿಕೆ, ಮಾತನಾಡುವುದು, ಬರೆಯುವುದು ಮತ್ತು ಓದುವುದು ಇವುಗಳನ್ನು ಭಾಷಾ ಕೌಶಲಗಳೆಂದು ಹೆಸರಿಸಲಾಗಿದೆ.

PART – II
SECOND LANGUAGE ENGLISH

Directions: **Read the given passage and answer the questions that follow by selecting the most appropriate option.**

According to Greek Mythology, Atlas was a Titan of enormous strength. After being defeated by the God Zeus, Atlas was forced to carry the earth and the sky for eternity. In depictions of atlas, he is known as a stooped figure carrying the globe on his shoulders. Because of his association with globe, maps began to be decorated with this image nickname for a collection of maps. Today, an atlas refers to any book that consists of a bound collection of maps. For example, an atlas can be made up of the countries of the world. Sometimes an atlas will also contain graphs and charts with other statistical information about religion, temperature, languages or population of a given area.

31) This passage focuses on

(1) Greek Mythology
(2) Culture, Religion and Climate of certain areas
(3) How the term 'Atlas' is derived
(4) The enormous strength of Atlas

Ans: 3
How the term 'Atlas' is derived
('ಅಟ್ಲಾಸ್' ಎಂಬ ಪದವನ್ನು ಹೇಗೆ ಪಡೆಯಲಾಗಿದೆ)

ಪದಸಂಪತ್ತು (ಪರೀಕ್ಷಾ ದೃಷ್ಟಿಯಿಂದ ಪದಗಳನ್ನು ಕಲಿಯಿರಿ)

Mythology (n) = ಪುರಾಣ: a collection of myths, especially one belonging to a particular religious or cultural tradition.

Religious *(adj) = ಧಾರ್ಮಿಕ (religious, spiritual)*

Religion *(n) = ಧರ್ಮ (affiliation, persuasion, faith)*

Enormous *(adj) = ಅಗಾಧ (huge, vast, extensive, boundless)*

32) Atlas supported the earth and the sky because

(1) He was punished after losing to Zeus
(2) He was a titan of enormous strength
(3) He was associated with maps and globes
(4) He was a slave to the God Zeus

Ans: 2

- *Atlas supported the earth and the sky because*

(ಅಟ್ಲಾಸ್ ಭೂಮಿ ಮತ್ತು ಆಕಾಶವನ್ನು ಬೆಂಬಲಿಸಿದ ಕಾರಣ)

- *He was a titan of enormous strength*

(ಅವನು ಅಗಾಧ ಶಕ್ತಿಯುಳ್ಳ ಟೈಟಾನ್ ಆಗಿದ್ದನು)

ಪದಸಂಪತ್ತು (ಪರೀಕ್ಷಾ ದೃಷ್ಟಿಯಿಂದ ಪದಗಳನ್ನು ಕಲಿಯಿರಿ)

Titan *(n) = ದೈತ್ಯ (ogre, giant, giant)*

Supported *= ಬೆಂಬಲಿಸಿದರು (help, keep up)*

33) As used in the passage, which is the best synonym for 'accordingly'?

(1) consequently (2) however
(3) logically (4) naturally

Ans: 1
ಈ ಮೇಲಿನ ವಾಕ್ಯದಲ್ಲಿ ನೀಡಲಾದ 'Accordingly' ಪದದ ಅರ್ಥ 'ಅದರಂತೆ' ಆಗಿದೆ. ಈ ಅರ್ಥಕ್ಕೆ

ಸರಿಹೊಂದುವ ಸಮನಾರ್ಥಕ ಪದ (Synonym) consequently (ಪರಿಣಾಮವಾಗಿ) ಎಂದಾಗುತ್ತದೆ. ಆದ್ದರಿಂದ ಆಯ್ಕೆ 1 ಸರಿಯಾಗಿದೆ.

ಪದಸಂಪತ್ತು (ಪರೀಕ್ಷಾ ದೃಷ್ಟಿಯಿಂದ ಪದಗಳನ್ನು ಕಲಿಯಿರಿ)

(1) consequently – ಪರಿಣಾಮವಾಗಿ

(2) however – ಆದಾಗ್ಯೂ

((3) logically – ತಾರ್ಕಿಕವಾಗಿ (4) naturally – ಸ್ವಾಭಾವಿಕವಾಗಿ

34) Based on the passage, it can be inferred that the additional charts and graphs in an atlas can include information about

i) Major languages

ii) Average temperature

iii) Historical events

(1) i) and ii) only

(2) ii) and iii) only

(3) i) only

(4) i), ii) and iii) only

Ans: 1

Inferred = ಊಹಿಸಲಾಗಿದೆ

(Infer (v) = ಊಹಿಸಿ deduce, decide)

Temperature (n) = ತಾಪಮಾನ

35) In the above passage, the word 'stoop' means

(1) Stand straight

(2) To kneel down

(3) To bend one's shoulder forwards

(4) Having the arms backwords

Ans: 3

Stoop: *bend one's head or body forwards and downwards.*

(ಒಬ್ಬರ ತಲೆ ಅಥವಾ ದೇಹವನ್ನು ಮುಂದಕ್ಕೆ ಮತ್ತು ಕೆಳಕ್ಕೆ ಬಗ್ಗಿಸಿ.)

36) Which of the of the following words from the passage is closer in meaning to 'gigantic'?

(1) Atlas (2) Zeus

(3) Titan (4) Globe

Ans: 2

ಈ ಮೇಲಿನ ವಾಕ್ಯದಲ್ಲಿ ನೀಡಲಾದ ' gigantic' ಪದದ ಅರ್ಥ 'ದೈತ್ಯಾಕಾರದ' ಆಗಿದೆ. ಈ ಪದದ ಅರ್ಥಕ್ಕೆ ಸಮೀಪವರ್ತಿ ಪದವೆಂದರೆ Titan (ಪರಿಣಾಮವಾಗಿ) ಎಂದಾಗುತ್ತದೆ. ಆದ್ದರಿಂದ ಆಯ್ಕೆ 1 ಸರಿಯಾಗಿದೆ.

ಪದಸಂಪತ್ತು (ಪರೀಕ್ಷಾ ದೃಷ್ಟಿಯಿಂದ ಪದಗಳನ್ನು ಕಲಿಯಿರಿ)

(1) Atlas – ಭೂಪಟಗಳ ಪುಸ್ತಕ

(2) Zeus – ಗ್ರೀಕರ ರಾಜ

(3) Titan – ದೈತ್ಯ (decuman, giant, giant-like, goliath, leviathan, titan)

(4) Globe – ಗೋಳ (sphere, orb, ball, spheroid)

Directions: Read the given passage and answer the questions that follow by selecting the most appropriate option.

One day, a guru foresaw in a flash of vision that he would die shortly and what he would be in his next life. So, he called his favorite disciple and asked him what he would do for his guru in return for all he had received. The disciple said that he would do whatever his guru asked him to do.

Having received this promise, the guru said, "Then, this is what I would like you to do for me. I have just learned that when I die, which will be very soon. I am going to be reborn as a pig. Do you see that cow eating garbage there in the yard? I am going to be reborn as the fourth piglet of its next litter.

You will recognize me by a mark on my brow and with one stroke of your knife, slaughter it I will be released from a pig's life. Will you do this for me?" The disciple was sad to hear all this but he agreed to do as he had promised.

Soon after this conversation, the guru died. And the sow did have litter of four little pigs. One day, the disciple sharpened his knife and picked out the fourth little pig, suddenly spoke "spoke "Stop! Don't kill me". Before the disciple could recover from the shock of hearing the little pig speak in human voice, it said, "Don't Kill me. I want to live on as a pig. When I asked you to dispatch me, I didn't know what a pig's life would be like. It is great. Just let me go".

37) The guru foresaw that

(1) Hit and his disciple's next life
(2) He, being reborn as a pig
(3) What a pig's life is like
(4) What his disciple would do

Ans: 4
The guru foresaw that
(ಗುರುಗಳು ಅದನ್ನು ಮುನ್ಸೂಚಿಸಿದರು)

ಪದಸಂಪತ್ತು (ಪರೀಕ್ಷಾ ದೃಷ್ಟಿಯಿಂದ ಪದಗಳನ್ನು ಕಲಿಯಿರಿ)

Foresaw (v) = ಮುಂದಾಲೋಚನೆ (anticipate)

Disciple (n) = ಶಿಷ್ಯ

Reborn (adj) = ಮರುಹುಟ್ಟು

38) When the disciple was about to kill the pig, why did the guru say 'Stop'?

(1) The disciple has picked up a wrong pig.
(2) He had changed his mind
(3) He didn't want to be reborn
(4) He wanted to live as a pig

Ans: 4
ಪದಸಂಪತ್ತು (ಪರೀಕ್ಷಾ ದೃಷ್ಟಿಯಿಂದ ಪದಗಳನ್ನು ಕಲಿಯಿರಿ)

Picked up = ತೆಗೆದುಕೊಂಡೆ (Pick up – ಎತ್ತಿಕೊಳ್ಳಿ)

Wrong = ತಪ್ಪು

39) The guru wanted to be killed in his next life because

(1) He didn't want to live any longer
(2) He wished to be killed by his disciple
(3) He wanted to have salvation
(4) He didn't want to live like a pig

Ans: 3
salvation (n): ಮೋಕ್ಷ, ಮತಾಂತರ

40) The disciple was shocked as

(1) The Guru refused to be killed
(2) The Guru wanted to remain like a pig
(3) He couldn't believe pig speaking
(4) the Guru was not reborn

Ans: 4
Disciple (n): ಶಿಷ್ಯ, ಅನುಯಾಯಿ

The Guru was not reborn
(ಗುರು ಮರುಜನ್ಮ ಪಡೆಯಲಿಲ್ಲ)

41) One of the following statements is true in the context of the passage:

(1) The Guru was to die immediately
(2) The Guru didn't want to remain like a pig
(3) The fourth piglet didn't have the mark
(4) The disciple was sad to know that his guru would be reborn as a pig

Ans: 4
The disciple was sad to know that his guru would be reborn as a pig.
(ಶಿಷ್ಯನು ತನ್ನ ಗುರುವು ಹಂದಿಯಾಗಿ ಮರುಜನ್ಮ ಪಡೆಯುತ್ತಾನೆ ಎಂದು ತಿಳಿದು ದುಃಖಿತನಾದನು.)

42) The word 'Dispatch' in the context means

(1) Send (2) Dissect
(3) Haste (4) Kill

Ans: 4

ಪದಸಂಪತ್ತು (ಪರೀಕ್ಷಾ ದೃಷ್ಟಿಯಿಂದ ಪದಗಳನ್ನು ಕಲಿಯಿರಿ)

Dispatch (v) = ರವಾನೆ, Send (v)= ಕಳುಹಿಸು

Dissect (v) / hew ಛೇದಿಸಿ, ತುಂಡರಿಸು, ಚೂರುಚೂರಾಗಿ ಕಡಿ

Haste (n) = ಆತುರ, ಅವಸರ

43) The Guru realized that a pig's life is

(1) Full of miseries
(2) Full of joy
(3) Full of dirt
(4) Full of tensions

Ans: 4

ಪದಸಂಪತ್ತು (ಪರೀಕ್ಷಾ ದೃಷ್ಟಿಯಿಂದ ಪದಗಳನ್ನು ಕಲಿಯಿರಿ)

Miseries (n) = ಸಂಕಟಗಳು

(unhappiness, agony, grieve, grievance, affliction, anxiety)

***Joy** = ಸಂತೋಷ, dirt = ಕೊಳಕು*

***Tensions** (n) = ಉದ್ವಿಗ್ನತೆಗಳು (pressure, stress)*

44) "You will recognise me". The correct passive form of the sentence is

(1) I am recognised by you
(2) You will be recognised by me
(3) I will be recognised by you
(4) You are recognised by me

Ans: 3

ವಿಶ್ಲೇಷಣೆ: ಈ ಮೇಲಿನ ಪ್ರಶ್ನೆಯಲ್ಲಿ Active voice (ಕರ್ತರಿ ಪ್ರಯೋಗ) ನಲ್ಲಿ ನೀಡಲಾದ ಹೇಳಿಕೆಯನ್ನು Passive Voice (ಕರ್ಮಣಿ ಪ್ರಯೋಗ) ಗೆ ಬದಲಾಯಿಸಿ ಗುರುತಿಸಬೇಕು.

Step 1: ಮೊದಲು *(helping Verb)* ಸಹಾಯಕ ಕ್ರಿಯಾ ಪದ will ನ್ನು be ಗೆ ಬದಲಾಯಿಸಬೇಕು. *be **(is / are / am / was / were / being / been)** Active Voice Statement– Simple future* ನಲ್ಲಿ ಇರುವುದರಿಂದ – *ಸಹಾಯಕ ಕ್ರಿಯಾಪದ **will be** ಎಂದಾಗುತ್ತದೆ.*

Step 2: ವಾಕ್ಯವನ್ನು Active Voice ನಿಂದ Passive Voice ಗೆ ಬದಲಿಸುವಾಗ ವಾಕ್ಯದಲ್ಲಿರುವ ಮುಖ್ಯ ಕ್ರಿಯಾಪದವನ್ನು ಕ್ರಿಯಾಪದದ ಮೂರನೇ ರೂಪಕ್ಕೆ (Past Participle) ಬದಲಾಯಿಸಬೇಕು.

Ex: recognise – recognised

Step 3: Subject ನ ಸ್ಥಾನದಲ್ಲಿ Object ಮತ್ತು Object ನ ಸ್ಥಾನದಲ್ಲಿ Subject ಬದಲಾವಣೆ.

- me (object ಸ್ಥಾನದಲ್ಲಿ) ಅಥವಾ ನೇರವಾಗಿ I (Subject ಸ್ಥಾನದಲ್ಲಿ) ಬಳಸಬಹುದು.
- Subject ನ ಸ್ಥಾನದಲ್ಲಿರುವ 'Pronoun' Object ನ ಸ್ಥಾನಕ್ಕೆ ಸ್ಥಳಾಂತರ ಗೊಂಡಾಗ ಹೀಗೆ ಬದಲಾಗುತ್ತದೆ. You – You

Step 4: Past Participle ನ ನಂತರ by ನ್ನು ಬಳಸಬೇಕು.

Sub	*(Hv+be) +PP*	*by+Obj*
I	*will be recognised*	*by you*

Object = in the place of subject

***Active Voice:** You will recognise me.*
ನೀನು ನನ್ನನ್ನು ಗುರುತಿಸುವೆ.

***Passive Voice:** I will be recognised by you.*
ನಾನು ನಿಮ್ಮಿಂದ ಗುರುತಿಸಲ್ಪಡುತ್ತೇನೆ.

45) "Don't kill me", It said. The correct indirect speech is

(1) It requested do not kill it
(2) It shouted not to kill it
(3) It told that is should not be killed
(4) It said that it can't be killed

Ans: 2

ಪ್ರತ್ಯಕ್ಷ (Direct) – ಅಪ್ರತ್ಯಕ್ಷ (Indirect)/ ಪರೋಕ್ಷ ನಿರೂಪಣೆ ಇಲ್ಲಿ ನಾವು ಮಾತುಗಳನ್ನು ಎರಡು ರೀತಿಯಲ್ಲಿ ದಾಖಲಿಸಬಹುದು. ಮಾತನಾಡಿದ ವ್ಯಕ್ತಿಯ ಮಾತುಗಳನ್ನು ಯಥಾವತ್ತಾಗಿ ಬಳಸಿದರೆ ಅದನ್ನು ಪ್ರತ್ಯಕ್ಷ (Direct Speech) ಆಗುತ್ತದೆ. ಆ ಪದಗಳನ್ನು ಇನ್ನೊಬ್ಬರು ಮತ್ತೊಬ್ಬರಿಗೆ ತಿಳಿಸಲು ತಮ್ಮದೇ ಮಾತುಗಳ ಮೂಲಕ ಹೇಳಿದರೆ ಅದು ಅಪ್ರತ್ಯಕ್ಷ ವಾಕ್ಯ (Indirect Speech) ಆಗುತ್ತದೆ. ಹೀಗೆ ನಾವು ವಾಕ್ಯಗಳನ್ನು ಎರಡು ರೀತಿಯಲ್ಲಿ ಬಳಸಬಹುದು.

ಈ ಮೇಲಿನ ವಾಕ್ಯವನ್ನು Direct Speech ನಿಂದ Indirect Speech ಗೆ ಬದಲಾಯಿಸಲು ಈ ನಿಯಮಗಳನ್ನು ಪಾಲಿಸಿ.

Step 1 – Reporting Verb ನ ಬದಲಾವಣೆ: Inverted Commas ನ ಒಳಗಿರುವ "Don't kill me" ವಾಕ್ಯವು Negative / ಋಣಾತ್ಮಕ ವಾಕ್ಯ ಆಗಿರುವುದರಿಂದ reporting Verb 'said' ಬದಲಾಗಿ Shouted ಎಂದು ಬಳಸಬೇಕು.

Example: It shouted

Step 2: Personal Pronoun ನ ಬದಲಾವಣೆ: It ನ ಸ್ಥಾನದಲ್ಲಿ it ನ್ನೇ ಬಳಸಬೇಕು ಹಾಗೂ 'me' Objective Pronoun ನ ಬದಲಾಗಿ it ನ್ನು ಬಳಸಬೇಕು ಏಕೆಂದರೆ ನಿರ್ದಿಷ್ಟವಾಗಿ Pronoun ಯಾವುದಕ್ಕೆ ಸಂಬಂಧಿಸಿದುದು ಎಂಬುದು ತಿಳಿಯದಿರುವುದರಿಂದ it ನ್ನೇ ಬಳಸಲಾಗುತ್ತದೆ.

ಇತರೆ **Pronouns** ಗಳು ಬಂದಾಗ ಅಥವಾ ಹೆಸರುಗಳು ಬಂದಾಗ ಈ ಕೆಳಗಿನಂತೆ ಬದಲಾಯಿಸಿ.

Direct	Indirect
I / We	He / She / it / They
You / You	He / She / it / They
He/She/it/They	He / She / it / They
me	he / she/ it
Name	He / She / it

Step 3: Tense ನ ಬದಲಾವಣೆ: AV ನಿಂದ PVಗೆ ಬದಲಾಯಿಸುವಾಗ Reporting Verb ಭೂತಕಾಲದಲ್ಲಿದ್ದು (Past Tense), Inverted Commas ನ ಒಳಗಿರುವ ವಾಕ್ಯವು Present Tense ನಲ್ಲಿ ಇದ್ದರೆ, Don't ನ ಬದಲಾಗಿ not ಬಳಸಬೇಕು ಹಾಗು 'kill' Present Verb ಇರುವುದರಿಂದ ಅದರ ಹಿಂಬಾಗದಲ್ಲಿ to ಸೇರಿಸಿ to kill ಎಂದು ಬದಲಾಯಿಸಿದರೆ ಆಯಿತು.

Step 4: Inverted Commas ನಲ್ಲಿರುವ ವಾಕ್ಯವು Negetive (ಋಣಾತ್ಮಕ) ವಾಕ್ಯ ಆಗಿರುವುದರಿಂದ ಈ ಕೆಳಗಿನ ಸೂತ್ರದಂತೆ ಬಳಸಿ.

ಸೂತ್ರ:



Sub + RV + not + to + Present Verb + Obj

Answer the Following Questions by Selection the most appropriate option.

46) A teacher provides some learning materials like dictionary, flow charts, story cards etc, so as to

(1) Please pupils and make them happy

(2) Make learning enjoyable
(3) Build self-learning skill
(4) Make his job less burdensome

Ans: 3

Listen to music and learn all the lyrics. ...
Watch English videos about your interests.
Watch English movies and TV shows. ...
Learn how to get the most out of English media. ...
Test your grammar with online English quizzes. ...
Chat with friends online. ...
Read e-books, articles and online magazines.

47) An invitation paper, which contains some information, Is given to a learner. The learner

(1) Reads thoroughly
(2) Scans the information
(3) Skims the information
(4) reads it casually

Ans: 2

- ***Skimming** refers to the process of reading only main ideas within a passage to get an overall impression of the content of a reading selection*
- ***Scanning** is a reading technique to be used when you want to find specific information quickly. In scanning you have a question in your mind and you read a passage only to find the answer, ignoring unrelated information.*
- ***Skipping***: It's a technique to read the text quickly only to focus on specific points rather than reading the whole.

48) Factors that affect language learning include

(1) Age and attitude only
(2) Age and aptitude
(3) Age, Attitude and aptitude
(4) Age, maturity and health condition

Ans: 3

9 Factors that Influence Language Learning for Kids Motivation. Is the child being forced to learn, or do they want to learn the language? ...
Support at Home. Is another language spoken at the child's home? ...
Prior Linguistic Knowledge. ...
Learning Environment. ...
Teaching Strategies. ...
Comprehensible Input. ...
Student Personality. ...
Age.

49) The spoken skill in a language teaching class room can be developed through

(1) Enabling activities with a focus on conversation skill leading to communicative competence
(2) Group activities where learners can talk in whichever language they would like to
(3) Engaging in small talk as confident learners.
(4) Emotionally connecting with learners

Ans: 1

Speaking is a major skill in communication.
what are the prominent beliefs about the speaking skill; what are the principles of learning and teaching speaking skills; the different activities and tasks associated to enhance the communication skill and

finally, how to teach pronunciation to the learners of communication.
Finally Speaking is an interactive process where information is shared, and if necessary, by enabling all these activities speaking skills can be improve.

50) Reading fluency is

(1) Ability to read aloud
(2) Concentration on the meaning
(3) Focussing on the words
(4) Comprehending the theme

Ans: 4
Reading fluency is the ability to read accurately, smoothly and with expression. Fluent readers recognize words automatically, without struggling over decoding issues.

51) A good teacher of English

(1) Provides needed materials to his pupils
(2) Converses with his pupils in the native language only
(3) Finds only mistakes
(4) Creates an 'English Atmosphere' around his pupils

Ans: 4
- *Focuses on educational needs of the students*
- *Works with passion*
- *Enthusiastic about work and about teaching*
- *Encourages and appreciates diversity*
- *Nurtures and encourages diversity*
- *Communicates effectively with others*
- *Acts with integrity*
- *Provides a model of high ethical standards*
- *Shows a caring attitude*
- *Encourages students to achieve their goals*
- *Monitors progress of students and fosters their success*

52) The best way for a teacher to teach grammar is

(1) Inductive method
(2) Deductive method
(3) Structural method
(4) Communicative method

Ans: 1
In the inductive approach in teaching, teachers provide learners with examples and allow them to arrive at their own conclusions. Discussion and course correction, where necessary, follow this. It's the opposite of the deductive teaching method, where rules are explained first.

53) The teacher completely avoids using the mother tongue in which of the following method?

(1) Bilingual method
(2) Grammar translation method
(3) Direct method
(4) Dr. West's method

Ans: 3
The direct method: *is also known as the natural method. It was developed as a reaction to the* ***grammar-translation*** *method and is designed to take the learner into the domain of the target language in the most natural manner. The main objective is to impart a perfect command of a foreign language.*
Bilingual method: *Is also known as two language method in which the teacher and students use two languages. This method is commonly used in the teaching of foreign language where the teacher takes the help of the mother tongue of the students and help students to understand and comprehend the target language. Bilingual*

Method is suitable to Indian multicultural context where people speak different regional languages.

- ***Michael Phillip West's 'New Method'*** *of teaching English is a method that was based on three elements namely reading, readers with vocabulary, and the use of native language judiciously.*
- ***Substitution method:*** *Words are substituted with other words. It is of three types- simp…*
- ***Grammar cum translation method****: In this method, the learner first learns grammatical …*
- ***Situational method:*** *The Situational Approach is organized in terms of the purposes for …*
- ***Direct method:*** *The direct method, also known as the natural method is the method of …*

54) If the mother tongue of a learner and a teacher is different, It

(1) Affect learning the target language negatively
(2) Doesn't bear any affect
(3) Makes learner as he must use the target language
(4) helps the learner as he must use the target language

Ans: 4

When the mother tongue of the learner and the mother tongue of the teacher are different, both Student and Teacher use the target language as the intermediate language to communicate each other.

Target language: *a language other than one's native language that is being learned.*

55) Language acquisition is a process which

(1) Involves imitation from others
(2) Involves forming own grammar
(3) Consists of making errors
(4) contains craming rules

Ans: 1

Language learning begins with imitation and is strengthened by practice.

B.F. Skinner argued that the behavior of language acquisition has to do with positive and negative behavior reinforcement. For example, a child might point at their favorite toy; then the parent smiles at the child and retrieves the toy, calling it a "teddy bear." The child has heard "teddy bear" and learns that "teddy bear" is the correct way to refer to the object.

56) Which of the following is known as detailed study?

(1) Loud reading (2) Intensive reading
(3) Silent reading (4) Library reading

Ans: 2

- ***Intensive Reading:*** *is a reading method wherein learners are supposed to read the short text carefully and deeply so as to gain maximum understanding*
  Intensive reading focuses on reading a specific detail from the text and aims for significant objectives and tasks. In this process readers use dictionary and a grammar book, which helps to consolidate what they learned in the past.
- ***Extensive reading:*** *is an approach to language learning in which long text and*

a large number of materials such as novels, journals, newspaper and magazines.

- ***Loud reading:*** *Is method of reading the text loudly which develops a ability to focus on vocabulary.*
  It also helps the learners to pronounce the words correctly and accurately.
  Builds connections between the spoken and written word.
  Increase more attention power.
- ***Silent reading:*** *improves students' understanding because it helps them concentrate on reading rather than pronunciation. This practice also allows children to read faster and improve comprehension. Silent reading also helps develop reading skills for a purpose, as the focus is on understanding the content*

57) Kumar is in the habit of pronouncing the word 'John' like 'Jo-hn'. What will you do?

(1) Nothing because he belongs to rural belt
(2) It is heredity
(3) He is not an intelligent boy
(4) Arrange remedial class for him

Ans: 4
Here are six top tips for you to practice and perfect your pronunciation.
1 - Listen! Listening to examples of authentic speech is the most obvious way to improve your own pronunciation. ...
Record yourself. ...
Get to know the phonemic chart. ...
Use a dictionary. ...
Do some exercise! ...
Get to know your minimal pairs

58) Study of meaning in a language is known as

(1) Syntax (2) Semantics
(3) Morphology (4) Linguistics

Ans: 2

- ***Semantics***: structure is a fancy term for an organization that represents meaning. For example, an English sentence is a semantic structure. Consider the following sentence structure: subject - verb - object.
- ***Syntax*:** refers to the study of a sentence structure, specifically the grammatical relations established between words and other units that make up a sentence.
- ***Morphology*:** is the study of word structure, specifically the relations established between morphemes (the smallest individual unit) and meaning.
- ***Linguistics*:** Linguistics is the systematic and scientific study of language.

59) For effective communication one has to master

(1) Vocabulary
(2) Structure
(3) Both vocabulary and structure
(4) Mechanics of writing

Ans: 3

- ***Vocabulary*** *is very important because it improves all areas of communication, we can not express our feelings without it.*
  Vocabulary is the key to learning the English language because, without

sufficient Vocabulary, students cannot express their ideas or understand others.

- ***Structure*** *Communication is an instructional approach that provides a simulated dialogue between an speaker of instructional materials and the listener.*
- *That's way both Vocabulary and Structure is very important for effective communication*

60) Language is primarily

(1) Speech (2) Sound
(3) Words (4) Signals

Ans: 1

language, a system of conventional spoken, manual (signed), or written symbols by means of which human beings, as members of a social group and participants in its culture, express themselves. The functions of language include communication, the expression of identity, play, imaginative expression, and emotional release.)

PART – III
ಶೈಕ್ಷಣಿಕ ಮನೋವಿಜ್ಞಾನ

61) ಈ ಕೆಳಗಿನವುಗಳಲ್ಲಿ ಯಾವುದು ಬೆಳವಣಿಗೆಯ ಗುಣಲಕ್ಷಣ?

(1) ಪ್ರಗತಿಪರತೆ (2) ಚಲನಾತ್ಮಕತೆ
(3) ನಿಶ್ಚಲತೆ (4) ನಿರಂತರತೆ

Ans: (3)

- ಮಗುವಿನಲ್ಲಿ ಕಂಡುಬರುವ ಪರಿಮಾಣಾತ್ಮಕ ಬದಲಾವಣೆಯನ್ನು ಬೆಳವಣಿಗೆ ಎಂದು ಕರೆಯುತ್ತಾರೆ. ಬೆಳವಣಿಗೆಯು ನಿರ್ದಿಷ್ಟ ಹಂತದವರೆಗೆ ಮಾತ್ರ ನಡೆಯುತ್ತದೆ. ಇದು ಯಾವಾಗಲೂ ಚಲನಾ ಸ್ಥಿತಿಯಲ್ಲಿ ಇರುವುದಿಲ್ಲ. ಇದರ ವ್ಯಾಪ್ತಿ ಸೀಮಿತವಾಗಿರುತ್ತದೆ.
- ವಿಕಾಸವು ಬೆಳವಣಿಗೆಯನ್ನು ಒಳಗೊಂಡಿದೆ.
- ವಿಕಾಸವು ನಿರಂತರವಾಗಿ, ಪ್ರಗತಿಪರವಾಗಿ, ಗರ್ಭದಿಂದ ಗೋರಿಯವರಿಗೆ ನಡೆಯುವ ಪ್ರಕ್ರಿಯೆ ಆಗಿದೆ.

62) ಒಬ್ಬ ಪೋಷಕನು ತಮ್ಮ ಐದು ವರ್ಷದ ಮಗುವನ್ನು ಒಂದನೇ ತರಗತಿಗೆ ಪ್ರವೇಶ ದಾಖಲಾತಿ ಮಾಡಲು ಬಯಸಿದರೆ, ಅವನಿಗೆ ನೀವು ನೀಡುವ ಸಲಹೆಯು ಈ ಕೆಳಗಿನ ಯಾವ ಅಂಶದ ಮೇಲೆ ಅವಲಂಬಿತವಾಗಿರುತ್ತದೆ?

(1) ಅಭಿಪ್ರೇರಣೆ (2) ಪಕ್ವತೆ
(3) ಸ್ಮೃತಿ (4) ಆಸಕ್ತಿ

Ans: (2)

- ಸಿದ್ಧತೆಯ ಕಡೆಗೆ ಕೊಂಡೊಯ್ಯುವ ಆಂತರಿಕ ಬದಲಾವಣೆ / ಅಭ್ಯಾಸ ಮತ್ತು ಅನುಭವಗಳಿಲ್ಲದೇ ಜನ್ಮದತ್ತವಾಗಿ ಬಂದ ಲಕ್ಷಣಗಳು / ವಿಕಾಸ & ಬೆಳವಣಿಗೆಯನ್ನು ಪ್ರಭಾವಿಸುವ ಜೈವಿಕ ಅಂಶ.

63) ವಿದ್ಯಾರ್ಥಿ ಮೋಹನನ ದೈಹಿಕ ವಯಸ್ಸು 10 ವರ್ಷಗಳಾಗಿದ್ದು, ಅವನ ಮಾನಸಿಕ ವಯಸ್ಸು 8 ವರ್ಷಗಳಾಗಿದ್ದರೆ, ಅವನ ಬುದ್ಧಿ ಶಕ್ತಿ ಸೂಚ್ಯಂಕವು

(1) 80 (2) 120
(3) 140 (4) 100

Ans: (1)

- ಬುದ್ಧಿ ಸೂಚ್ಯಂಕವನ್ನು ಕಂಡು ಹಿಡಿಯುವ ಸೂತ್ರ
  IQ = M.A × 100 ÷ C. A
- ಸೂತ್ರದ ಪ್ರಕಾರ 8 × 100 ÷ 10
- = 80

64) ಅನುವಂಶೀಯ ಗುಣಗಳನ್ನು ತಲೆಮಾರಿಗೆ ಕೊಂಡೊಯ್ಯುವ ನಿಜವಾದ ಜೈವಿಕ ಅಂಶಗಳು:

(1) ವರ್ಣ ತಂತುಗಳು (2) ಬೀಜಾಣುಗಳು

(3) ಗುಣಾಣುಗಳು (4) ಅಂಡಾಣುಗಳು

Ans: (3)

- ಗುಣಾಣುಗಳನ್ನು ವಂಶವಾಹಿನಿಗಳು/Genesಗಳು ಎಂದು ಕರೆಯಬಹುದು.
- ಡಗ್ಲಾಸ್ ಮತ್ತು ಹಾಲೆಂಡ್ ರವರು ವಂಶವಾಹಿನಿಗಳನ್ನು ಕುರಿತು ಅಧ್ಯಯನ ಮಾಡಿ 'ಜೀವಿಯು ತನ್ನ ತಂದೆ ತಾಯಿಯರ ಮತ್ತು ಪೂರ್ವಜರ ದೈಹಿಕ ಗುಣ, ರಚನೆ, ಅರ್ಹತೆ, ಸಾಮರ್ಥ್ಯ ಮುಂತಾದವುಗಳನ್ನು ಪಡೆಯುವುದೇ ಅನುವಂಶೀಯತೆ ಎಂದು ಕರೆದಿದ್ದಾರೆ.
- ಒಂದು ಸಂತತಿಯಿಂದ ಇನ್ನೊಂದು ಸಂತತಿಗೆ ಹರಿದುಬರುವ ಗುಣವಿಶೇಷಗಳ ವರ್ಗಾವಣೆಯನ್ನು ಅನುವಂಶೀಯತೆ ಎಂದು ಕರೆಯಬಹುದು.
- ವೀರ್ಯಾಣುಗಳು ಮತ್ತು ಅಂಡಾಣುಗಳು ಸಂಯೋಗ ಹೊಂದಿ ಜೀವಾಣುಗಳು ಸೃಷ್ಟಿಯಾಗುತ್ತವೆ ಇದನ್ನು ಸೈಟೋಪ್ಲಾಸಂ ಎಂದು ಕರೆಯುವರು.

65) ವರ್ತನೆಯನ್ನು ಅತ್ಯಂತ ವಸ್ತುನಿಷ್ಠ ಹಾಗೂ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ವಿಧಾನ:

1) ಅವಲೋಕನ 2) ವ್ಯಕ್ತಿ ಅಧ್ಯಯನ

3) ಪ್ರಾಯೋಗಿಕ ವಿಧಾನ 4) ಅಂತರಾವಲೋಕನ

Ans: (3)

- ಜರ್ಮನಿ ದೇಶದ ಮನೋವಿಜ್ಞಾನಿ ವಿಲ್ ಹೆಲ್ಮ್ ವೂಂಟ್ 1879ರಲ್ಲಿ ಲಿಪ್ಜಿಗ್ ನಲ್ಲಿ ಪ್ರಯೋಗ ಶಾಲೆಯನ್ನು ಸ್ಥಾಪಿಸಿ ಪ್ರಾಯೋಗಿಕ ವಿಧಾನದ ಮೇಲೆ ಆಳವಾದ ಅಧ್ಯಯನ ಕೈಗೊಂಡು ಪ್ರಾಯೋಗಿಕ ವಿಧಾನದ ಪಿತಾಮಹ ಎನಿಸಿಕೊಂಡರು.
- ಪ್ರಾಯೋಗಿಕ ವಿಧಾನ ಎಂದರೆ – ವರ್ತನೆಯನ್ನು ಅಧ್ಯಯನ ಮಾಡುವ ಸಲುವಾಗಿ ಒಬ್ಬ ವ್ಯಕ್ತಿಯನ್ನು ಪ್ರಯೋಗಕ್ಕೆ ಒಳಪಡಿಸಿ ವೈಜ್ಞಾನಿಕ ಉಪಕರಣಗಳನ್ನು ಬಳಸಿ ಆ ವ್ಯಕ್ತಿಯ ದೇಹದ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.
- ಪ್ರಾಯೋಗಿಕ ವಿಧಾನದ ಹಂತಗಳು – ಸಮಸ್ಯೆಯನ್ನು ನಿರೂಪಿಸುವುದು, ಪ್ರಾಕಲ್ಪನೆಗಳನ್ನು ರೂಪಿಸುವುದು, ಚರಾಂಶಗಳನ್ನು ಗುರುತಿಸುವುದು, ಬದಲಾವಣೆಗಳನ್ನು ಅಳತೆ ಮಾಡುವುದು, ಮಾಹಿತಿಯನ್ನು ಆಧರಿಸಿ ತೀರ್ಮಾನವನ್ನು ಕೈಗೊಳ್ಳುವುದು.

66) ಸಾಮಾಜಿಕ – ಸಾಂಸ್ಕೃತಿಕ ಸಿದ್ಧಾಂತವನ್ನು ನೀಡಿದವರು

(1) ಬಂಡೂರ (2) ಬ್ರೂನರ್

(3) ಆಲ್‌ಬರ್ಟ್ ಎಲ್ಲಿಸ್ (4) ವೈಗೋಟ್‌ಸ್ಕಿ

Ans: (4)

- ರಷ್ಯಾ ದೇಶದ ಮನೋವಿಜ್ಞಾನಿ.
- ಸಾಂಸ್ಕೃತಿಕ ಮತ್ತು ಐತಿಹಾಸಿಕ ಸಿದ್ಧಾಂತ / ಸಾಮಾಜಿಕ ಮತ್ತು ಐತಿಹಾಸಿಕ ಸಿದ್ಧಾಂತ ದ ಪ್ರವರ್ತಕರು.
- ಸಾಮಾಜಿಕ ಪ್ರಕ್ರಿಯೆಯಲ್ಲಿ ಜ್ಞಾನವನ್ನು ಸಹ ರಚಿಸಲಾಗುತ್ತದೆ ಎಂದು ಹೇಳಿದರು KARTET
- **ZPD** ಅಂದರೆ ಜೋನ್ ಆಫ್ ಪ್ರಾಕ್ಸಿಮಲ್ ಡೆವಲಪ್ಮೆಂಟ್ ಎಂಬ ಪರಿಕಲ್ಪನೆಯನ್ನು ಪ್ರತಿಪಾದಿಸಿದರು.
- ಇದನ್ನು ಸ್ಕಫೊಲ್ಡಿಂಗ್ ಎಂದು ಕರೆಯುತ್ತಾರೆ. ಇದರ ಅರ್ಥ ಶಿಕ್ಷಕರ, ಸ್ನೇಹಿತರ, ಪಾಲಕ–ಪೋಷಕರು, ಬಂಧುಗಳ ಸಹಕಾರವನ್ನು ಪಡೆದು ಕಲಿಯುವ ವ್ಯಕ್ತಿ ಮತ್ತು ಯಾವುದೇ ನೆರವಿಲ್ಲದೆ ಕಲಿಯುವ ವ್ಯಕ್ತಿಯ ನಡುವಿನ ವ್ಯತ್ಯಾಸವನ್ನು ಹೇಳಲಾಗುತ್ತದೆ.

- ಇದನ್ನು ಸಹಕಾರಿ ಕಲಿಕೆ ಎಂದು ಪರೀಕ್ಷೆಯಲ್ಲಿ ಕೇಳಬಹುದಾಗಿದೆ.

67) ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದವರು

(1) ಕೊಹ್ಲ್‌ಬರ್ಗ್ (2) ಪಿಯಾಜೆ
(3) ಬ್ರೂನರ್ (4) ಗ್ಯಾನೆ

Ans: (1)

ಕೋಹ್ಲ್‌ಬರ್ಗ್‌ರವರು ನೈತಿಕ ವಿಕಾಸ ಸಿದ್ಧಾಂತವನ್ನು ಮಂಡಿಸಿದ್ದು ಮಗುವಿನಲ್ಲಿ ನೈತಿಕ ವಿಕಾಸವು ಕೇವಲ ತಂದೆ–ತಾಯಿಯಿಂದ ಮತ್ತು ಹಿರಿಯರಿಂದ ಬಂದಿರುವುದಿಲ್ಲ. ಈಗಾಗಲೇ ವ್ಯಕ್ತಿಯಲ್ಲಿರುವ ಜ್ಞಾನಾತ್ಮಕ ಪ್ರಕ್ರಿಯೆಗಳಾದ ಆಲೋಚನೆ ಮತ್ತು ಕಾರಣೀಕರಿಸುವಿಕೆ/ತಾರ್ಕಿಕತೆ ಮಗುವಿನ ನೈತಿಕ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಕೋಹ್ಲ್‌ಬರ್ಗ್‌ರವರು ಸೂಚಿಸಿದ ನೈತಿಕ ವಿಕಾಸದ ಹಂತಗಳು

1) ಸಾಂಪ್ರದಾಯಿಕ ಪೂರ್ವ ನೈತಿಕತೆಯ ಹಂತ (4–10ವರ್ಷ)

2) ಸಾಂಪ್ರದಾಯಿಕ ನೈತಿಕತೆಯ ಹಂತ (10–13ವರ್ಷ)

ಸ್ವಯಂ ಸ್ವೀಕೃತ ನೈತಿಕ ತತ್ವಗಳ ಹಂತ (13 ವರ್ಷಗಳ ಮೇಲ್ಪಟ್ಟು)

68) ಲಿಂಗ ತಾರತಮ್ಯಕ್ಕೆ ಕಾರಣವಾದ ಪ್ರಮುಖ ಅಂಶವೆಂದರೆ

(1) ಸ್ನೇಹಿತರು (2) ಸಂಬಂಧಿಗಳು
(3) ಪೋಷಕರು (4) ಪೋಷಕರು ಮತ್ತು ಶಿಕ್ಷಕರು

Ans: (4)

- ಲಿಂಗ ತಾರತಮ್ಯ ಭಾರತದಂಥ ಪುರುಷಪ್ರಧಾನ ದೇಶದಲ್ಲಿ ಸರ್ವೇಸಾಮಾನ್ಯ. ಮನೆಯಲ್ಲಿ ಗಂಡು ಮತ್ತು ಹೆಣ್ಣಿಗೆ ನೋಡುವ ಅಥವಾ ನಡೆಸಿಕೊಳ್ಳುವ ರೀತಿ ತಂದೆ–ತಾಯಿಯರ, ಶಿಕ್ಷಕರ ಮನೋಧೋರಣೆಯನ್ನು ತೋರಿಸುತ್ತದೆ. ಇಂದಿನ ಆಧುನಿಕ ಸಂಕೀರ್ಣ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ ಗಣನೀಯವಾಗಿ ಏರಿಕೆ ಕಂಡಿದೆ.
- ಸರ್ಕಾರವು ಮಹಿಳೆಯರಿಗಾಗಿ ವಿಶೇಷ ಸೌಲತ್ತುಗಳನ್ನು ನೀಡುವುದರ ಮೂಲಕ ವಿವಿಧ ಕಾರ್ಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತಿದೆ.

69) ಬಡಮಕ್ಕಳನ್ನು ಶಾಲೆಗೆ ಆಕರ್ಷಿಸಲು ಅನುಸರಿಸುವ ಪರಿಣಾಮಕಾರಿ ವಿಧಾನವೆಂದರೆ

(1) ಉಚಿತ ಶಿಕ್ಷಣ
(2) ಉಚಿತ ಮಧ್ಯಾಹ್ನದೂಟ ವ್ಯವಸ್ಥೆ
(3) ಉಚಿತ ಪುಸ್ತಕ ಮತ್ತು ಸಮವಸ್ತ್ರವಿತರಣೆ
(4) ಮೇಲಿನ ಎಲ್ಲವೂ

Ans: (4)

ಭಾರತೀಯ ಸಂವಿಧಾನದ ಆನುಚ್ಛೇದ–45ರ ಪ್ರಕಾರ 14 ವರ್ಷದ ವರೆಗಿನ ಮಕ್ಕಳಿಗೆ ಕಡ್ಡಾಯವಾಗಿ ಉಚಿತ ಪ್ರಾಥಮಿಕ

ಶಿಕ್ಷಣ ನೀಡುವುದು ರಾಜ್ಯಸರ್ಕಾರಗಳ ನಿರ್ದೇಶಿತ ಪ್ರಮುಖ ಕಾರ್ಯನೀತಿಗಳಲ್ಲಿ ಒಂದಾಗಿರುತ್ತದೆ. ಪ್ರಮುಖವಾಗಿ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಕಡ್ಡಾಯ ಪ್ರಾಥಮಿಕ ಶಿಕ್ಷಣದಲ್ಲಿ ಮಹತ್ವದ ಗುರಿಯನ್ನು ಸಾಧಿಸಲು ಅನುಕೂಲವಾಗುವ ಉದ್ದೇಶದಿಂದ ಕೇವಲ ಹಾಜರಾತಿಯ ಕ್ರಮವನ್ನು ಶಿಕ್ಷಣ ಸಾರ್ವತ್ರೀಕರಣದ ಮೂರು ಮುಖ್ಯ ದಿಕ್ಕುಗಳಾಗಿ ವಿಂಗಡಿಸಿದೆ.

ಅವು:

1. ಮಕ್ಕಳ ದಾಖಲಾತಿ,
2. ಕಲಿಕೆಯಲ್ಲಿನ ಗುಣಮಟ್ಟ ಹಾಗೂ

3. ಧಾರಣಾ ಶಕ್ತಿ ಎಂದು ಮೂರು ಅಳತೆಗೋಲಾಗಿ ನಿರ್ಧರಿಸಲಾಗಿದೆ.

ಉಚಿತ ಸಮವಸ್ತ್ರ ವಿತರಣೆಯ ಮುಖ್ಯ ಉದ್ದೇಶಗಳು

- 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವುದು.
- 14 ವರ್ಷದ ಒಳಗಿನ ಎಲ್ಲಾ ಮಕ್ಕಳೂ ಶಾಲೆಗೆ ಕಡ್ಡಾಯವಾಗಿ ದಾಖಲಾಗಲು ಆಕರ್ಷಿಸುವುದು.
- ದಾಖಲಾದ ಮಕ್ಕಳು ಮಧ್ಯದಲ್ಲಿ ಶಾಲೆ ತೊರೆಯದಂತೆ ನೋಡಿಕೊಳ್ಳುವುದು
- ಎಲ್ಲಾ ಮಕ್ಕಳಲ್ಲಿ ಏಕತೆ ಮತ್ತು ಶಿಸ್ತು ರೂಪಿಸುವುದು.
- ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಒಪ್ಪಂದದಲ್ಲಿ ಘೋಷಿಸಲ್ಪಟ್ಟಿರುವಂತೆ ಪ್ರತಿಯೊಬ್ಬ ಹಸಿದ ಮಗುವಿಗೂ ಆಹಾರವನ್ನು ಒದಗಿಸಬೇಕಾಗಿದೆ.
- ಮಧ್ಯಾಹ್ನ ಉಪಹಾರ ಯೋಜನೆಯು ಒಂದು ಪ್ರತಿಷ್ಠಿತ ಯೋಜನೆಯಾಗಿದ್ದು, ಮಕ್ಕಳು ಆರೋಗ್ಯ ಪೂರ್ಣವಾಗಿ ಶಕ್ತಿವಂತರು ಹಾಗೂ ದೃಢಕಾಯರಾಗಿ ಬೆಳೆಯಲು ಒಂದು ಸದವಕಾಶ ಕಲ್ಪಿಸುವ ಬದ್ಧತೆಯಿಂದ ಕೂಡಿದ್ದು, ಸಹಕಾರಿಯಾಗಿದೆ.

70) ಜೀನ್ ಪಿಯಾಜೆಯವರ ಜ್ಞಾನಾತ್ಮಕ ಬೆಳವಣಿಗೆಯ ಮೂರನೇ ಹಂತವು

(1) ಮೂರ್ತಕಾರ್ಯಗಳ ಹಂತ
(2) ಕಾರ್ಯಪೂರ್ವ ಹಂತ
(3) ಸಂವೇದನಾ ಗತಿ ಹಂತ
(4) ಔಪಚಾರಿಕ ಕಾರ್ಯಗಳ ಹಂತ

Ans: (1) ಮೂರ್ತಕಾರ್ಯಗಳ ಹಂತ

Ans: (1)

ಜೀನ್ ಪಿಯಾಜೆಯವರು ಒಟ್ಟು 4 ಜ್ಞಾನಾತ್ಮಕ ಬೆಳವಣಿಗೆಯ ಹಂತಗಳನ್ನು ತಿಳಿಸಿದ್ದಾರೆ. ಅವುಗಳು

1ನೇಯ ಹಂತ – ಸಂವೇದನಾ ಗತಿ ಹಂತ (0–2)
2ನೇಯ ಹಂತ – ಕಾರ್ಯ ಪೂರ್ವ ಹಂತ (2–7)
3ನೇಯ ಹಂತ – ಮೂರ್ತ ಕಾರ್ಯಗಳ ಹಂತ (7–11)
4ನೇಯ ಹಂತ – ಔಪಚಾರಿಕ ಕಾರ್ಯಗಳ ಹಂತ (11 +)

ಮೂರ್ತಕಾರ್ಯಗಳ ಹಂತ (7–11) ರ ಪ್ರಮುಖ ಅಂಶಗಳು

- ತಾರ್ಕಿಕ ಆಲೋಚನಾ ಸಾಮರ್ಥ್ಯ ಮೂಡುವುದು
- ಮೂರ್ತ ಸಮಸ್ಯೆಗಳಿಗೆ ಪರಿಹಾರ
- ಸ್ಥಾಯಿತ್ವದ ಪರಿಕಲ್ಪನೆ (ವಸ್ತುವಿನ ಬಾಹ್ಯರೂಪ ಬದಲಾದರೂ ಮೂಲ ಅಂಶಗಳು ಹಾಗೇ ಇರುವುದು) 6ನೇ ವಯಸ್ಸಿನಲ್ಲಿ ಸಂಖ್ಯೆ, 7ನೇ ವಯಸ್ಸಿನಲ್ಲಿ ದ್ರವ್ಯರಾಶಿ, 9ನೇ ವಯಸ್ಸಿನಲ್ಲಿ ತೂಕ
- ವಸ್ತುಗಳ ವರ್ಗೀಕರಣ ಸಾಮರ್ಥ್ಯ

71) ಶಾಸ್ತ್ರೀಯ ಕಲಿಕೆಯನ್ನು ಪ್ರತಿಪಾದಿಸಿದವರು

(1) ಪಾವ್‌ಲೋವ್ (2) ಸ್ಕಿನ್ನರ್
(3) ಥಾರ್ನ್‌ಡೈಕ್ (4) ಕೋಹ್ಲರ್

Ans: (1)

- ರಷ್ಯಾ ದೇಶದ ಶರೀರಶಾಸ್ತ್ರದ ಪಾವ್ಲೋ ಪ್ರಾಣಿಗಳ ಜೀರ್ಣಾಂಗ ಪ್ರಕ್ರಿಯೆನ್ನು ಕುರಿತು ಅಧ್ಯಯನ ಮಾಡಿ 1904ರಲ್ಲಿ ಪ್ರಾಣಿ ಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದರು.
- ಇವರು ನಾಯಿಯ ಮೇಲೆ ಕೈಗೊಂಡ ಪ್ರಯೋಗದ ಪ್ರಕಾರ ಕೃತಕ ಸನ್ನಿವೇಶಗಳನ್ನು ಸೃಷ್ಟಿಸಿ ಸ್ವಾಭಾವಿಕ ಅನುಭವ ನೀಡಿ ಕಲಿಕೆಯ ಫಲಿತಾಂಶವನ್ನು ಪಡೆಯುವುದು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿತು.

72) ಸ್ಮೃತಿಯ ಪ್ರಕ್ರಿಯೆಯಲ್ಲಿನ ಹಂತಗಳ ಅನುಕ್ರಮವು

(1) ಧಾರಣೆ, ದಾಖಲೆ, ಸ್ಮರಿಸುವುದು, ಗುರುತಿಸುವುದು

(2) ದಾಖಲೆ, ಧಾರಣೆ, ಸ್ಮರಿಸುವುದು, ಗುರುತಿಸುವುದು

(3) ಸ್ಮರಿಸುವುದು, ದಾಖಲೆ, ಗುರುತಿಸುವುದು, ಧಾರಣೆ

(4) ಗುರುತಿಸುವುದು, ದಾಖಲೆ, ಧಾರಣೆ, ಸ್ಮರಿಸುವುದು

Ans:

Ans: (2)

- ಸ್ಮೃತಿ ಎಂದರೆ ಕಲಿತದ್ದನ್ನು ಪುನಃ ಸ್ಮರಿಸಿಕೊಳ್ಳುವ ಸಾಮರ್ಥ್ಯವೇ ಸ್ಮೃತಿ.
- ಸ್ಮೃತಿಯಲ್ಲಿ ಕಲಿಯುವ ವಿಧಾನಗಳು, ತಂತ್ರಗಳು, ಕಲಿಕೆಯ ವಾತಾವರಣ, ಕಲಿಯುವಿಕೆಯ ಪದ್ಧತಿ, ಸಮಯ, ಕಲಿಯುವವನ ಸಿದ್ಧತೆ, ಇಚ್ಛೆ ಮುಂತಾದವುಗಳು ಪ್ರಭಾವ ಬೀರುವ ಅಂಶಗಳು.

73) ಬುದ್ಧಿಶಕ್ತಿ ಸೂಚ್ಯಾಂಕದ ಹಂಚಿಕೆಯನ್ನು ಪ್ರತಿನಿಧಿಸುವ ರೇಖೆಯು

(1) ಸಾಮಾನ್ಯ ಸಂಭಾವ್ಯತಾ ವಕ್ರರೇಖೆ

(2) ಧನಾತ್ಮಕ ವಿಷಯ ವಕ್ರರೇಖೆ

(3) ಋಣಾತ್ಮಕ ವಿಷಯ ವಕ್ರರೇಖೆ

(4) ದ್ವಿಬಹುಲಕ ವಕ್ರರೇಖೆ

Ans: (1) ಸಾಮಾನ್ಯ ಸಂಭಾವ್ಯತಾ ವಕ್ರರೇಖೆ

- ಇದನ್ನು ಇಂಗ್ಲಿಷಿನಲ್ಲಿ Normal Probability Curve – NPC ಎಂದು ಕರೆಯುತ್ತಾರೆ.
- ಇದು ಘಂಟಾಕಾದವಾಗಿದೆ.
- ಇದನ್ನು ಟರ್ಮನ್ ಅವರು ಬಳಸಿದ್ದಾರೆ.

ಸಾಮಾನ್ಯ ಸೂಚ್ಯಂಕದ ವಕ್ರರೇಖೆಯನ್ನು ಕಂಡುಹಿಡಿದವರು ಡಿಮೋವಿಯರ್, ಲಾಪ್ಲಾಸ್ ಮತ್ತು ಗಾಸ್.

74) ಜ್ಞಾನಾತ್ಮಕ ವಿಕಾಸದ ಯಾವ ಹಂತದಲ್ಲಿ ತಾರ್ಕಿಕ ಚಿಂತನೆ ಸಂಪೂರ್ಣವಾಗಿ ವಿಕಾಸಗೊಳ್ಳುತ್ತದೆ?

(1) ಸಂವೇದನಾಗತಿ ಹಂತ

(2) ಮೂರ್ತಕಾರ್ಯಗಳ ಹಂತ

(3) ಔಪಚಾರಿಕ ಕಾರ್ಯಗಳ ಹಂತ

(4) ಕಾರ್ಯಪೂರ್ವ ಹಂತ

Ans: (3)

ಇದು ಜೀನ್ ಪಿಯಾಜೆಯವರ ಜ್ಞಾನಾತ್ಮಕ ಹಂತಗಳಲ್ಲಿ 4ನೇಯ ಹಂತವಾಗಿದೆ (12 +)

ಈ ಹಂತದ ಪ್ರಮುಖ ಲಕ್ಷಣಗಳು

- ತಾರ್ಕಿಕ ಆಲೋಚನಾ ಸಾಮರ್ಥ್ಯದ ಸಂಪೂರ್ಣ ವಿಕಾಸ
- ವೈಜ್ಞಾನಿಕ ಚಿಂತನೆ
- ಅಮೂರ್ತ ಆಲೋಚನಾ ಸಾಮರ್ಥ್ಯದ ವಿಕಾಸ
- ನಿಜವಾದ ನೈತಿಕ ಪ್ರಜ್ಞೆ
- ನಿಜವಾದ ಸಾಮಾಜಿಕ ಪ್ರಜ್ಞೆ
- ಸಮಸ್ಯೆಗಳನ್ನು ಪರಿಹರಿಸುವ ಕೌಶಲ
- ಬೌದ್ಧಿಕ ಮತ್ತು ಭಾವನಾತ್ಮಕ ಪಕ್ವತೆ
- ನಾಯಕತ್ವದ ಪೂಜೆ
- ಅನುಗಮನ ಮತ್ತು ನಿಗಮನಾತ್ಮಕ ಆಲೋಚನೆ
- ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ
- ಸೃಜನಶೀಲತೆ

75) ತರುಣದ ಸಾಮಾಜಿಕ ವಿಕಾಸಕ್ಕೆ ಉದಾಹರಣೆ ಎಂದರೆ

1) ಸಾಹಸ ಪ್ರವೃತ್ತಿ 2) ಗುಂಪು ರಚನೆ

3) ಲೈಂಗಿಕ ಆಸಕ್ತಿ 4) ವಿಮರ್ಶಾತ್ಮಕ ಸಾಮರ್ಥ್ಯ

ಉತ್ತರ (2) ಗುಂಪು ರಚನೆ

Ans: (2)

ಗುಂಪು ರಚನೆಗೊಳ್ಳುವುದಕ್ಕೆ ಸಹಾಯಕವಾದ ಅಂಶಗಳು

1. ಸಾಮೀಪ್ಯ
2. ಸಮಾನಮನಸ್ಕರು

3. ಸಮಾನ ಗುರಿ ಅಥವಾ ಸಮಾನ ಪ್ರೇರಣೆ, ಉತ್ತಮ ಮನಸ್ಸು, ಉತ್ತಮ ಬುದ್ಧಿ ಶಕ್ತಿ, ಸಹಾಯ ಮಾಡುವ ಗುಣ, ಪ್ರಾಮಾಣಿಕತೆ, ಜವಾಬ್ದಾರಿಯುತ ಹಾಗೂ ನಂಬಲರ್ಹವಾದ ವ್ಯಕ್ತಿಗಳು ಬೇಗ ಒಂದುಗೂಡಿ ತಮಗೆಲ್ಲರಿಗೂ ಬೇಕಾದ ಗುರಿ–ಸಾಧನೆಯಲ್ಲಿ ತೊಡಗುತ್ತಾರೆ.

ಗುಂಪು ರಚನೆಯ ಹಂತಗಳು

ಟಕ್‌ಮನ್ ರವರ ಪ್ರಕಾರ ಗುಂಪು ರಚನೆಯು ನಾಲ್ಕು ಹಂತಗಳ ಮುಖಾಂತರ ನಡೆಯುತ್ತದೆ. ಅವುಗಳೆಂದರೆ,

1. ರೂಪುಗೊಳ್ಳುವ ಹಂತ
2. ಬಿಸಿಬಿಸಿ ಚರ್ಚೆ
3. ಕಟ್ಟುಪಾಡುಗಳು ಅಥವಾ ನೀತಿ ನಿಯಮಗಳು ಕಾರ್ಯನಿರ್ವಹಣೆಯ ಹಂತ
4. ಸಮೂಹದಲ್ಲಿ ಒಗ್ಗಟ್ಟು ಇರುವುದನ್ನು ಸಂಲಗ್ನತೆ / ಸಂಸಕ್ತತೆ ಎನ್ನುವರು.

76) ಮಾನಸಿಕ ವಯಸ್ಸಿನ ಪರಿಕಲ್ಪನೆಯನ್ನು ಮೊಟ್ಟ ಮೊದಲು ಪರಿಚಯಿಸಿದವರು ಯಾರು?

(1) ಟರ್ಮನ್ (2) ಆಲ್‌ಫ್ರೆಡ್ ಬೀನೆಟ್
(3) ವಿಲಿಯಂ ಸ್ಟರ್ನ್ (4) ರೇವನ್

ಉತ್ತರ (2) ಆಲ್‌ಫ್ರೆಡ್ ಬೀನೆಟ್

- ಅಲ್ಫ್ರೆಡ್ ಬಿನೆಟ್ ಅವರನ್ನು ಬುದ್ಧಿಶಕ್ತಿಯ ಪಿತಾಮಹ ಎಂದು
- 1905ರಲ್ಲಿ ಬಿನೆ ತಮ್ಮ ಸ್ನೇಹಿತನಾದ ಸೈಮನ್ ರವರ ಜೊತೆಗೂಡಿ ನಿಜವಾದ ವಯಸ್ಸಿಗೆ ಅನುಗುಣವಾಗಿ ಪ್ರಶ್ನಾವಳಿಗಳನ್ನು ತಯಾರಿಸಿದರು. ಇವು ಮೊಟ್ಟಮೊದಲನೆಯದಾಗಿ ಅಮೆರಿಕದಲ್ಲಿ ಉಪಯೋಗಿಸಲ್ಪಟ್ಟವು.
- ಬುದ್ಧಿಶಕ್ತಿ ಸೂಚ್ಯಂಕದ ಪಿತಾಮಹ ವಿಲಿಯಂ ಸ್ಟರ್ನ್

77) "ಅತ್ಯಹಂ" ಈ ತತ್ವದಿಂದ ಪ್ರಭಾವಿಸಲ್ಪಟ್ಟಿದೆ.

(1) ಸುಖಾನುಭವ (2) ವಾಸ್ತವಿಕತೆ
(3) ನೈತಿಕತೆ (4) ತಾರ್ಕಿಕತೆ

Ans: ಉತ್ತರ (3)

- ಆಸ್ಟ್ರಿಯಾ ದೇಶದ ಮನೋವಿಜ್ಞಾನಿ ಸಿಗ್ಮಂಡ್ ಫ್ರೈಡ್ ಇದರ ಪ್ರತಿಪಾದಕರು.
- ಮನುಷ್ಯನಿಗೆ ಕೇವಲ ಪ್ರಜ್ಞಾವಸ್ಥೆ ಅಷ್ಟೇ ಮುಖ್ಯವಲ್ಲ, ಅರೆಪ್ರಜ್ಞಾವಸ್ಥೆ ಮತ್ತು ಸುಪ್ತಪ್ರಜ್ಞಾವಸ್ಥೆ ವ್ಯಕ್ತಿತ್ವದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂಬುದವುದನ್ನು ಪ್ರತಿಪಾದಿಸಿದರು.
- ಮನೋವಿಶ್ಲೇಷಣೆ ಎಂದರೆ, ಮನಸ್ಸಿನಲ್ಲಿರುವ ಗುರಿ, ಆಸೆ ಮತ್ತು ಆಲೋಚನೆಗಳನ್ನು ಹೊರಗೆಳೆದು ಅಧ್ಯಯನ ಮಾಡುವುದು.

Id – ಸುಖಾನ್ವೇಷಣೆ, Ego ಸಾಮಾಜಿಕ ಪ್ರಜ್ಞೆ,
Super Ego – ನೈತಿಕ ಪ್ರಜ್ಞೆಯನ್ನು ಸೂಚಿಸುತ್ತದೆ.

78) ವರ್ತನಾ ಸಮಸ್ಯೆಯ ಮಕ್ಕಳನ್ನು ಅಧ್ಯಯನ ಮಾಡುವ ವಿಧಾನ ಯಾವುದು?

(1) ಅಂತರಾವಲೋಕನ (2) ಪ್ರಾಯೋಗಿಕ ಪದ್ಧತಿ
(3) ವೀಕ್ಷಣೆ (4) ವ್ಯಕ್ತಿ ಅಧ್ಯಯನ

ಉತ್ತರ (4)

- ವ್ಯಕ್ತಿ ಅಧ್ಯಯನದ ಪ್ರತಿಪಾದಕರು ಡಿ.ಎಫ್.ಡಿ. ಬುಕ್ಸ್
- ಶಿಕ್ಷಕ ಶಾಲಾ ಕಾರ್ಯಚಟುವಟಿಕೆಯಲ್ಲಿ ತೊಡಗಿದಾಗ ವರ್ತನಾ ಸಮಸ್ಯೆಯ ಮಕ್ಕಳನ್ನು ಗುರುತಿಸಿ ಅನಪೇಕ್ಷಿತ ವರ್ತನೆಗಳಿಗೆ ಕಾರಣಗಳನ್ನು ಪತ್ತೆ ಹಚ್ಚಿ ಅಪೇಕ್ಷಿತ ವರ್ತನೆಯನ್ನು ಉಂಟುಮಾಡಲು ವ್ಯಕ್ತಿ ಅಧ್ಯಯನವನ್ನು ಬಳಸಬಹುದು.
- ಇದು ವ್ಯಕ್ತಿನಿಷ್ಠ ವಿಧಾನವಾಗಿದೆ.
- ಪ್ರಾಯೋಗಿಕ ವಿಧಾನದ ಪಿತಾಮಹ – ವಿಲ್ ಹೆಲ್ಮ್ ವುಂಟ್

- ವೀಕ್ಷಣಾ ವಿಧಾನದ ಪಿತಾಮಹ – ಜೆ.ಬಿ.ವ್ಯಾಟ್ಸನ್

79) ಬುದ್ಧಿಶಕ್ತಿಯ ಕಾರ್ಯನಿರ್ವಹಣಾ ಪರೀಕ್ಷೆಯ ಮೂಲಕ ಅಳೆಯಲ್ಪಡುವ ಸಾಮರ್ಥ್ಯ

(1) ಕೈಚಳಕ (2) ಭಾಷೆ

(3) ಸೃಜನಶೀಲತೆ (4) ಸಂಖ್ಯಾ ಸಂಬಂಧಿತ

ಉತ್ತರ (1) ಕೈಚಳಕ

Ans: (1)

ಮನೋಕ್ರಿಯಾಜನ್ಯ ವಲಯದ ಪ್ರತಿಪಾದಕರು ಹ್ಯಾರೋ. ಮನೋ ಕ್ರಿಯಾಜನ್ಯ ವಲಯವು ಕೈಚಳಕ ಮತ್ತು ಸ್ನಾಯು ಕೌಶಲ್ಯಗಳಿಗೆ ಸಂಬಂಧಿಸಿದ ಉದ್ದೇಶಗಳನ್ನು ಒಳಗೊಂಡಿರುತ್ತದೆ.

ಮನೋಕ್ರಿಯಾಜನ್ಯವಲಯದ ಹಂತಗಳು

1. ಪ್ರೇರಣೆ
2. ಅನುಕರಣೆ
3. ಕೈಚಳಕ
4. ಖಚಿತತೆ
5. ಸ್ಪಷ್ಟ ಉಚ್ಚಾರಣೆ
6. ಸ್ವಾಭಾವಿಕತೆ

80) ಮೆದುಳನ್ನು ಕಾರ್ಯಪಟುಗೊಳಿಸುವ ತಂತ್ರವನ್ನು ಈ ವಿದ್ಯಾರ್ಥಿಗಳಿಗೆ ಉಪಯೋಗಿಸುವರು

(1) ನಿಧಾನವಾಗಿ ಕಲಿಯುವವರು

(2) ಸೃಜನಶೀಲ ಮಕ್ಕಳು

(3) ಮಾನಸಿಕ ಸವಾಲುಗಳುಳ್ಳ ಮಕ್ಕಳು

(4) ಅಪೂರ್ಣ ಸಾಧಕರು

Ans: (2)

- ಜೆ.ಫಿ.ಗಿಲ್ಫರ್ಡ್ ರವರು ಬಹುಮುಖ ಚಿಂತನೆ ಸೃಜನಶೀಲತೆಯ ಪ್ರಧಾನ ಲಕ್ಷಣ ಎಂದು ಹೇಳಿದ್ದಾರೆ.
- ಅಲ್ಲದೆ ಸ್ವಂತಿಕೆ, ನಿರರ್ಗಳತೆ ಮತ್ತು ಮೌಲಿಕತೆ ಕ್ರಿಯಾಶೀಲತೆಯ ಜ್ಞಾನಾತ್ಮಕ ಕಾರಕಗಳು.
- ಇ.ಪಿ. ಟಾರೆನ್ಸ್ ರವರು ಸೃಜನಶೀಲತೆಯ 84 ಲಕ್ಷಣಗಳನ್ನು ಗುರುತಿಸಿದ್ದಾರೆ.
- ಸೃಜನಶೀಲತೆಯೂ ಮಕ್ಕಳಿಗೆ ಸ್ವತಂತ್ರವಾಗಿ ಆಲೋಚಿಸಲು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ.
- ಸೃಜನಶೀಲತೆ ನಾಲ್ಕು ಹಂತಗಳನ್ನು ಒಳಗೊಂಡಿದೆ ಅವುಗಳೆಂದರೆ, ಸಿದ್ಧತೆ, ಸೂಪ್ತತೆ, ಅಂತಃಸ್ಫೂರಣೆ ಮತ್ತು ಪರಿಶೀಲನೆ

81) ವಿಷಯ ಪ್ರಚೋದಕ ಪರೀಕ್ಷೆಯ (TAT) ಅಳೆಯುವುದು

(1) ಮನೋವೃತ್ತಿ (2) ಸೃಜನಶೀಲತೆ

(3) ಬುದ್ಧಿಶಕ್ತಿ (4) ವ್ಯಕ್ತಿತ್ವ

ಉತ್ತರ (4) ವ್ಯಕ್ತಿತ್ವ

Ans: (4)

ವ್ಯಕ್ತಿತ್ವ ಎಂಬ ಪದವನ್ನು ಇಂಗ್ಲೀಷಿನ 'ಪರ್ಸನಾಲಿಟಿ' ಎಂದು ಕರೆಯುತ್ತಾರೆ. ಮೂಲತಃ ಈ ಪದವು ಲ್ಯಾಟಿನ್ ಭಾಷೆಯ "ಪರ್ಸೋನಾ' ಎಂಬ ಪದದಿಂದ ಬಂದಿದೆ. ಇದರ ಅರ್ಥ 'ಮುಖವಾಡ.

ವ್ಯಕ್ತಿತ್ವದ ಪರೀಕ್ಷೆಗಳಲ್ಲಿ ಮೂರು ವಿಧಗಳು ಅವುಗಳೆಂದರೆ,

1) ವ್ಯಕ್ತಿನಿಷ್ಠ ಪರೀಕ್ಷೆಗಳು – ಆತ್ಮಚರಿತ್ರೆ, ವ್ಯಕ್ತಿ ಅಧ್ಯಯನ ಸಂದರ್ಶನ.

2) ವಸ್ತುನಿಷ್ಠ ಪರೀಕ್ಷೆಗಳು – ವೀಕ್ಷಣೆ, ದರ್ಜಾಮಾಪನಗಳು, ತಪಶೀಲುಪಟ್ಟಿಗಳು, ಸಾಂದರ್ಭಿಕ ಪರೀಕ್ಷೆಗಳು, ಕ್ಯೂ ವಿಂಗಡನೆ ತಂತ್ರಗಳು

3) ಪಕ್ಷೇಪಣಾ ತಂತ್ರಗಳು ವಿಷಯ ಪ್ರಚೋದಕ ಪರೀಕ್ಷೆ thematic apperception test ಇದನ್ನು 1935ರಲ್ಲಿ ಮತ್ತೆ ಮತ್ತು ಮಾರ್ಗನ್ ರೂಪಿಸಿದರು. ರೋರ್ಷಾಕ್ ರವರ ಮಸಿ ಗುರುತು ಪರೀಕ್ಷೆ, ವಾಕ್ಯ ಪೂರೈಕೆ ಪರೀಕ್ಷೆ, ಪದ ಸಂಯೋಜನಾ ಪರೀಕ್ಷೆ

82) ಈ ಕೆಳಗಿನ ಯಾವ ಉದಾಹರಣೆಯು ಕ್ರಿಯಾ ಪ್ರಸೂತ ಅನುಬಂಧ ಕಲಿಕೆಯನ್ನು ಒಳಗೊಂಡಿದೆ?

(1) ವರ್ತನೆಯ ಮಾರ್ಪಾಟು

(2) ಅಭ್ಯಾಸಗಳನ್ನು ಬಿಡಿಸುವುದು

(3) ಕೇಳದೆಯೇ ಪ್ರತಿಕ್ರಿಯಿಸುವುದು

(4) ಪರಿಕಲ್ಪನೆ ಮೂಡಿಸುವುದು

ಉತ್ತರ (3) ಕೇಳದೆಯೇ ಪ್ರತಿಕ್ರಿಯಿಸುವುದು

Ans: (3)

ಸಾಧಕ ಅನುಬಂಧ ಕಲಿಕೆ ಪರಿಸರದ ಪ್ರಭಾವದಿಂದ ಸ್ವಯಂ ಪ್ರೇರಿತವಾಗಿ ವ್ಯಕ್ತಗೊಳ್ಳುತ್ತದೆ. ಉದಾಹರಣೆ ದೂರವಾಣಿ ಕರೆ ಗಂಟೆ ಕೇಳುತ್ತಿದ್ದಂತೆ ದೂರವಾಣಿ ಬಳಿ ಹೋಗಿ ಸಂಭಾಷಣೆಯಲ್ಲಿ ನಿರತರಾಗುತ್ತೇವೆ. ಹೀಗೆ ದೂರವಾಣಿ ಕರೆಗೆ ಪ್ರತಿಕ್ರಿಯಿಸುವುದು ಕ್ರಿಯಾಜನ್ಯ ಅಥವಾ ಸಾಧಕ ಅನುಬಂಧ ಕಲಿಕೆ.

83) ಕೆಳಗಿನ ಯಾವ ಒಂದು ಜೊತೆಯ ಅಂಶಗಳನ್ನು "ಒಂದೇ ನಾಣ್ಯದ ಎರಡು ಮುಖಗಳು" ಎಂದು ಪರಿಗಣಸಲಾಗಿದೆ?

(1) ಆಸಕ್ತಿ ಮತ್ತು ಅವಧಾನ

(2) ಆಸಕ್ತಿ ಮತ್ತು ಪರಿಕಲ್ಪನೆ

(3) ಪರಿಪಕ್ವತೆ ಮತ್ತು ಪ್ರೇರಣೆ

(4) ಮನೋಭಾವ ಮತ್ತು ಪರಿಪಕ್ವತೆ

Ans: (1)

- ಕ್ರೋ ಮತ್ತು ಕ್ರೋ ರವರ ಪ್ರಕಾರ – ಒಬ್ಬ ವ್ಯಕ್ತಿ, ಒಂದು ಚಟುವಟಿಕೆ ಅಥವಾ ವಸ್ತುವಿನ ಕಡೆಗೆ ಗಮನಹರಿಸುವಂತೆ ಮಾಡುವ ಪ್ರೇರಕ ಶಕ್ತಿಯೇ ಆಸಕ್ತಿ.
- ಯಾವುದೇ ಕಾರ್ಯವನ್ನು ಮಾಡಬೇಕಾದ ಸಂದರ್ಭದಲ್ಲಿ ಆಸಕ್ತಿಯೂ ಬೇಕೇಬೇಕು. ಇಲ್ಲದಿದ್ದರೆ ಕಲಿಕೆಯು ಯಶಸ್ವಿಯಾಗಲು ಸಾಧ್ಯವಿಲ್ಲ.
- ಆಸಕ್ತಿಯನ್ನು ಅವಧಾನದ ತಾಯಿ ಎಂದು ಕರೆಯುತ್ತಾರೆ.
- ಅವಧಾನ ಎಂದರೆ ಯಾವುದೇ ವಿಷಯವನ್ನು ಕಲಿಯುವವ ವ್ಯಕ್ತಿ ತನ್ನ ಗಮನವನ್ನು ಕಲಿಯಬೇಕಾದ ವಿಷಯದ ಮೇಲೆ ಕೇಂದ್ರೀಕರಿಸುವದನ್ನು ಅವಧಾನ ಎಂದು ಕರೆಯುತ್ತಾರೆ.
- ಗ್ರಹಿಕೆಗೆ ಅಗತ್ಯವಾದ ಪೂರ್ವಸಿದ್ಧತಾ ಸ್ಥಿತಿಯನ್ನು ಅವಧಾನ ಎಂದು ಕರೆಯಲಾಗುತ್ತದೆ.

84) ಸೈಕಲ್ ಕಲಿಕೆಯು ಈ ಕೆಳಗಿನ ಯಾವ ಕಲಿಕಾ ವಿಧಾನಕ್ಕೆ ಉದಾಹರಣೆಯಾಗಿದೆ?

(1) ಶಾಸ್ತ್ರೋಕ್ತ ಕಲಿಕೆ

(2) ಕ್ರಿಯಾಜನ್ಯ ಕಲಿವು

(3) ಒಳನೋಟ ಕಲಿವು

(4) ಪ್ರಯತ್ನ – ಪ್ರಮಾದ ಕಲಿವು

Ans: (4)

ನಮ್ಮ ಎಲ್ಲ ಕಲಿಕೆಗಳು ಪ್ರಯತ್ನ ದೋಷ ವಿಧಾನದಿಂದಲೇ ನಡೆಯುತ್ತವೆ ಎಂಬುದು ಥಾರ್ನ್‌ಡೈಕ್‌ನ ವಾದ. ಮಗು ಹೊಸದೇನಾದರೂ ಕಲಿಯುವಾಗ ಮೊದಮೊದಲು ತಪ್ಪುಗಳನ್ನು ಮಾಡುತ್ತಾನೆ. ನಂತರ ಪ್ರಯತ್ನಗಳು ಮುಂದುವರೆದಂತೆ ತಪ್ಪುಗಳ ಪ್ರಮಾಣ ಕಡಿಮೆಯಾಗುತ್ತಾ ಬಂದು ಅಂತಿಮವಾಗಿ ಪ್ರಚೋದನೆಗೆ ಸೂಕ್ತ ಪ್ರತಿಕ್ರಿಯೆ ವ್ಯಕ್ತಪಡಿಸುವುದು ಕಂಡುಬರುತ್ತದೆ.

85) ಒಂದು ಯಂತ್ರವನ್ನು ರಿಪೇರಿ ಮಾಡುವ ತಂತ್ರವು, ಒಂದು ಕಾರನ್ನು ಓಡಿಸಲು ನೆರವಾಗುವುದಿಲ್ಲ, ಇದು ಯಾವ ರೀತಿಯ ಕಲಿಕೆಯ ವರ್ಗಾವಣೆ?

1) ಧನಾತ್ಮಕ ವರ್ಗಾವಣೆ 2) ಋಣಾತ್ಮಕ ವರ್ಗಾವಣೆ

3) ಶೂನ್ಯ ವರ್ಗಾವಣೆ 4) ಮೇಲಿನ ಎಲ್ಲವೂ

Ans: (3)

ಶೂನ್ಯ ವರ್ಗಾವಣೆ ಇದೊಂದು ಕಲಿಕೆಯ ವರ್ಗಾವಣೆಗಳಲ್ಲಿ ಒಂದಾಗಿದೆ.

- **ಶೂನ್ಯ ವರ್ಗಾವಣೆ ಎಂದರೆ:** ಹಿಂದಿನ ಸನ್ನಿವೇಶದಲ್ಲಿ ಪಡೆದ ಜ್ಞಾನ ಮುಂದಿನ ಸನ್ನಿವೇಶದಲ್ಲಿ ಯಾವುದೇ ರೀತಿಯ ಸಹಾಯ ಅಥವಾ ತೊಂದರೆಯನ್ನು ಉಂಟು ಮಾಡದೆ ಇದ್ದರೆ ಅದು ಶೂನ್ಯ ವರ್ಗಾವಣೆ.
- ಉದಾಹರಣೆ – ಕಾರು ಓಡಿಸಲು ಕಲಿತ ವ್ಯಕ್ತಿ ವಿಮಾನ ಓಡಿಸಲು ಯಾವುದೇ ರೀತಿಯಾದಂತಹ ಪ್ರಭಾವ ಬೀರುವುದಿಲ್ಲ.

86) ಶಾಲೆಗಳಲ್ಲಿ ಸಾಮಾನ್ಯ ಮಕ್ಕಳೊಡನೆ ವಿಶೇಷ ಮಕ್ಕಳನ್ನು ಸೇರಿಸಿ ನೀಡುವ ಶಿಕ್ಷಣವು

(1) ವಿಶೇಷ ಶಿಕ್ಷಣ (2) ಔಪಚಾರಿಕ ಶಿಕ್ಷಣ
(3) ಅನೌಪಚಾರಿಕ ಶಿಕ್ಷಣ (4)ಸಮನ್ವಯ ಶಿಕ್ಷಣ

Ans: (4)

ಸಾಮಾನ್ಯ ಶಾಲೆ ಮತ್ತು ವರ್ಗಕೋಣೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಾಮಾನ್ಯ ಮಕ್ಕಳೊಂದಿಗೆ ಶಿಕ್ಷಣವನ್ನು ಒದಗಿಸುವುದನ್ನು *'ಸಮನ್ವಯ ಶಿಕ್ಷಣ/ಸಂಯೋಜನಾ ಶಿಕ್ಷಣ/ಒಳಗೊಳ್ಳುವ ಶಿಕ್ಷಣ'* ಎಂದು ಕರೆಯುತ್ತಾರೆ.

ವಿಶೇಷ ಅಗತ್ಯವುಳ್ಳ ಮಕ್ಕಳೆಂದರೆ

1. ದೈಹಿಕ ಸವಾಲುಗಳುಳ್ಳ ಮಕ್ಕಳು
2. ಬೌದ್ಧಿಕ ಸವಾಲುಗಳುಳ್ಳ ಮಕ್ಕಳು
3. ಸಾಮಾಜಿಕ ಮತ್ತು ಸಂವೇಗಾತ್ಮಕ ಸವಾಲುಗಳುಳ್ಳ ಮಕ್ಕಳು
4. ಶೈಕ್ಷಣಿಕ ಸವಾಲುಗಳುಳ್ಳ ಮಕ್ಕಳು

87) ಡಿಸ್‌ಕ್ಯಾಲ್ಕುಲಿಯಂ ಎಂಬ ಸಮಸ್ಯೆಯು ಯಾವುದಕ್ಕೆ ಸಂಬಂಧಿಸಿದೆ?

(1) ಓದುವುದು (2) ಬರೆಯುವುದು
(3) ಅಂಕಗಣಿತ (4) ಕಾಗುಣಿತ

Ans: (3)

- ಒಂದು ಮಗು 1050 ಎಂಬುವುದನ್ನು 100050 ಎಂದು ಬರೆಯುತ್ತದೆ ಇದನ್ನು ಡಿಸ್ ಕ್ಯಾಲ್ಕ್ಯುಲಿಯಾ ಎಂದು ಕರೆಯಬಹುದು. ಡಿಸ್ ಕ್ಯಾಲ್ಕ್ಯುಲಿಯಾ ಅಂಕಗಣಿತದ ದೋಷವನ್ನು ಸೂಚಿಸುತ್ತದೆ.
- ಡಿಸ್ ಗ್ರಾಫಿಯಾ ಬರವಣಿಗೆ ದೋಷವನ್ನು, ಡಿಸ್ಲೆಕ್ಸಿಯಾ ಓದುವ ದೋಷವನ್ನು ಸೂಚಿಸುತ್ತದೆ.

88) ಸೃಜನಶೀಲತೆಯು ಯಾವ ಅಂಶದ ಮೇಲೆ ಅವಲಂಬಿತವಾಗಿದೆ?

(1) ಬಹುಮುಖ ಚಿಂತನೆ 2) ಏಕಮುಖ ಚಿಂತನೆ
(3) ವಿವೇಚನಾತ್ಮಕ ಚಿಂತನೆ 4) ಅಮೂರ್ತ ಚಿಂತನೆ

ಉತ್ತರ (1)

- ಸೃಜನಶೀಲತೆಯನ್ನು ಕ್ರಿಯಾಶೀಲತೆ ಎಂದು ಕರೆಯುತ್ತಾರೆ. ಹೊಸದನ್ನು ಸೃಷ್ಟಿ ಮಾಡುವುದನ್ನು ಸೃಜನಶೀಲತೆ ಎಂದು ಕರೆಯಬಹುದು.
- ಸೃಜನಶೀಲತೆಯಲ್ಲಿ ಸ್ವಂತಿಕೆ, ನಿರರ್ಗಳತೆ ಮತ್ತು ಮೌಲಿಕತೆ ಎಂಬ ಪ್ರಮುಖ ಲಕ್ಷಣಗಳಿವೆ ಎಂದು ಗಿಲ್ಫರ್ಡ್ ರವರು ವಾದಿಸುತ್ತಾರೆ.
- ಸೃಜನಶೀಲತೆಗೆ ಪೂರಕವಾದ ಘಟನೆಗಳು – ಶಾಬ್ದಿಕ ಪ್ರವಾಹ, ಮೂಲ ಕಲ್ಪನೆ.
- ಸೃಜನಶೀಲತೆಯ ಜ್ಞಾನಾತ್ಮಕ ಕಾರಕಗಳು – ಸ್ವಂತಿಕೆ, ನಿರರ್ಗಳತೆ ಮತ್ತು ನಮ್ಯತೆ, ಬಹುಮುಖ ಚಿಂತನೆ, ವಿಸ್ತೃತಗೊಳಿಸುವಿಕೆ.

89) ತರುಣರ ವಿಕಾಸಾತ್ಮಕ ಕಾರ್ಯಗಳನ್ನು ಪರಿಚಯಿಸಿದವರು ಯಾರು?

(1) ಹ್ಯಾವಿಗ್ ಹರ್ಸ್ಟ್ (2) ಸ್ಟ್ಯಾನ್ಲಿಹಾಲ್
(3) ಹರ್ ಲಾಕ್ (4) ಹ್ಯಾಡ್ ಫೀಲ್ಡ್

ಉತ್ತರ (1) ಹ್ಯಾವಿಗ್ ಹರ್ಸ್ಟ್

Ans: (1)

ವಿಕಾಸಾತ್ಮಕ ಕಾರ್ಯಗಳನ್ನು ವಿಕಾಸ ಸಂಬಂಧ ಕ್ರಿಯೆಗಳು ಎಂದು ಕೂಡ ಕರೆಯುತ್ತಾರೆ.

90) ಈ ಕೆಳಗಿನ ಯಾವುದನ್ನು ಕ್ರಿಯಾ ಸಂಶೋಧಕನ ಕಣ್ಣು ಎಂದು ಕರೆಯುತ್ತಾರೆ?

(1) ಸಂಭವನೀಯ ಕಾರಣಗಳ ವಿಶ್ಲೇಷಣೆ

(2) ನಿರ್ದಿಷ್ಟಗೊಳಿಸಿದ ಸಮಸ್ಯೆ

(3) ಕಾರ್ಯ ಯೋಜನೆ

(4) ಕ್ರಿಯಾ ಪ್ರಾಕಲ್ಪನೆ

Ans: (4)

- ಪೂರ್ವ ಸಿದ್ಧಾಂತ ಅಥವಾ ಕ್ರಿಯಾ ಪ್ರಾಕಲ್ಪನೆಯನ್ನು ಕ್ರಿಯಾ ಸಂಶೋಧಕನ ಕಣ್ಣು ಎಂದು ಕರೆಯುತ್ತಾರೆ.
- ಕ್ರಿಯಾ ಸಂಶೋಧನೆ ಎಂದರೆ ತಮ್ಮ ಕಾರ್ಯಚಟುವಟಿಕೆಯಲ್ಲಿ ಎದುರಾಗುವ ಸಮಸ್ಯೆಗಳಿಗೆ ತಕ್ಷಣ ಪರಿಹಾರ ಕಂಡುಕೊಳ್ಳಲು ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ವೈಜ್ಞಾನಿಕ ಕ್ರಮದ ಮೂಲಕ ಪರಿಹಾರವನ್ನು ಕಂಡುಕೊಳ್ಳುವ ಪ್ರಕ್ರಿಯೆಯಾಗಿದೆ.
- ಕ್ರಿಯಾಸಂಶೋಧನೆಯ ಪಿತಾಮಹ **ಕರ್ಟ್ ಲೇವಿನ್**
- ಸ್ಟೀಫನ್ **ಕೋರೆ** ಕ್ರಿಯಾ ಸಂಶೋಧನಾ ಕ್ಷೇತ್ರದಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ.

ಕ್ರಿಯಾ ಸಂಶೋಧನೆಯ ಹಂತಗಳು

1. ಸಮಸ್ಯೆಯನ್ನು ಗುರುತಿಸುವಿಕೆ
2. ಸಮಸ್ಯೆಯ ವಿಶ್ಲೇಷಣೆ
3. ಸಮಸ್ಯೆಗೆ ಕಾರಣಗಳನ್ನು ತಿಳಿದುಕೊಳ್ಳುವುದು
4. ಕ್ರಿಯಾ ಪ್ರಾಕ್ಕಲ್ಪನೆಯನ್ನು ನಿರೂಪಿಸುವುದು
5. ಸಂಶೋಧನೆ

PART – IV

ಸಮಾಜ ವಿಜ್ಞಾನ ವಿಭಾಗ

91) 'ಹಲ್ಮಿಡಿ' ಶಾಸನದಿಂದ ಈ ರಾಜನ ಬಗ್ಗೆ ಐತಿಹ್ಯ ತಿಳಿದು ಬರುತ್ತದೆ.

(1) ಮಯೂರವರ್ಮ (2) ಕಾಕುತ್ಸ್ಥವರ್ಮ

(3) ದಂತಿದುರ್ಗ (4) ಸ್ಕಂದವರ್ಮ

Ans: (2)

- ಕಾಕುತ್ಸವರ್ಮ (ಸಾಮಾನ್ಯ ಶಕ 435 – 450) ಈತನು ಹೊರಡಿಸಿದ ಹಲ್ಮಿಡಿ ಮತ್ತು ಹಲಸಿ ಶಾಸನಗಳು ಪ್ರಮುಖವಾಗಿವೆ.
- ಹಲ್ಮಿಡಿ ಶಾಸನವು ಕನ್ನಡದ ಮೊದಲ ಮತ್ತು ಪ್ರಾಚೀನ ಶಾಸನವಾಗಿದೆ. ಇದರಕಾಲ ಸಾಮಾನ್ಯ ಶಕ 450. ಇದು ಪೂರ್ವದ ಹಳೆಗನ್ನಡ ಭಾಷೆಯಲ್ಲಿದೆ. ಇದು 16 ಸಾಲುಗಳನ್ನು ಒಳಗೊಂಡಿದ್ದು ಇದರಲ್ಲಿ 23 ಕನ್ನಡ ಪದಗಳಿವೆ. ಪ್ರಸ್ತುತ ಹಲ್ಮಿಡಿ ಶಾಸನವು ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಹಲ್ಮಿಡಿ ಎಂಬ ಗ್ರಾಮದಲ್ಲಿ ಕಾಣಬಹುದು. ಇದನ್ನು 1936ರಲ್ಲಿ ಡಾ.ಎಮ್.ಎಚ್ ಕೃಷ್ಣ ಪತ್ತೆ ಹಚ್ಚಿದ್ದಾರೆ.
- ಈ ಶಾಸನದಲ್ಲಿ ಕೆಕೆಯ ಪಲ್ಲವರ ಮೇಲೆ ಹೋರಾಡಿ ಗೆದ್ದ ವಿಜಯ ಅರಸ ಎಂಬ ಯೋಧನಿಗೆ ನರಿದವಾಳೆ ಎಂಬ ಪ್ರಾಂತ್ಯಾಧಿಕಾರಿ ಮೃಗೇಶನು ಹಲ್ಮಿಡಿ ಗ್ರಾಮವನ್ನು ಉಂಬಳಿಯಾಗಿ ಬಿಟ್ಟುಕೊಟ್ಟ ಮಾಹಿತಿ ಇದೆ.
- ಕೀರ್ತಿವರ್ಮನೆಗೆ ಇದ್ದ ಬಿರುದುಗಳು – ಕದಂಬ ಕುಲ ಶಿರೋಮಣಿ, ಕೀರ್ತಿ ಸೂರ್ಯ, ಕದಂಬ ಕುಲದ ಅನರ್ಘ್ಯ ರತ್ನ

92) ಸಿಂಧೂ ನಾಗರಿಕತೆ ಮತ್ತು ಮೆಸಪಟೋಮಿಯಾ ನಾಗರಿಕತೆಯು ವ್ಯಾಪಾರ ಸಂಪರ್ಕ ಹೊಂದಿದೆ ಎಂದು ಸೂಚಿಸುವ ಐತಿಹ್ಯ:

(1) ಮುದ್ರೆಗಳು (2) ಶಿಲಾ ಶಾಸನ

(3) ದೇಶಿ ಸಾಹಿತ್ಯ (4) ವಿದೇಶಿ ಸಾಹಿತ್ಯ

Ans: (1)

- ಸಿಂಧೂ ನಾಗರಿಕತೆಯ ವ್ಯಾಪಾರ ಸಾಧನಗಳಾದ ಮುದ್ರೆಗಳು ಪಶ್ಚಿಮ ಏಷ್ಯಾ ಹಾಗೂ ಮಧ್ಯ ಏಷ್ಯಾಗಳ ಅನೇಕ ನೆಲೆಗಳಲ್ಲಿ ಸಿಕ್ಕಿವೆ ಆದ್ದರಿಂದ ಆ ರಾಷ್ಟ್ರಗಳೊಡನೆ ಸಿಂಧೂ ವ್ಯಾಪಾರ ಸಂಪರ್ಕ ಹೊಂದಿತ್ತು ಎಂದು ನಂಬಲಾಗಿದೆ.
- ಸಾಮಾನ್ಯ ಶಕ ಪೂರ್ವ 2350ರ ಮೆಸಪೋಟೆನಿಯದ ದಾಖಲೆಗಳ ಪ್ರಕಾರ ಸಿಂಧೂ ನಾಗರಿಕತೆಯ ಮೆಲುಹ ಎನ್ನುವ ನಾಗರಿಕತೆಯ ಜೊತೆಗೆ ಮೆಸಪೋಟೆನಿಯವು ವ್ಯಾಪಾರ ಸಂಪರ್ಕ ಹೊಂದಿತ್ತು. ಸಿಂಧೂ ನಾಗರಿಕತೆಯನ್ನು ಪ್ರಾಚೀನ ಮೆಸಪೋಟಮಿಯದ ನಾಗರಿಕತೆಯ ಜನರು ಮೆಲುಹ ಎಂದು ಕರೆಯುತ್ತಿದ್ದರು.

93) ಭಾರತದಲ್ಲಿ ಮೊಟ್ಟಮೊದಲಿಗೆ ಸಾಮ್ರಾಜ್ಯ ಕಟ್ಟಿ ಏಕತೆಯನ್ನು ಮೂಡಿಸಿದ ವಂಶ:

(1) ಕುಶಾನರು (2) ಗುಪ್ತರು

(3) ಶಾತವಾಹನರು (4) ಮೌರ್ಯರು

Ans: (4)

- ಮೌರ್ಯ ಸಾಮ್ರಾಜ್ಯ ಭಾರತ ಕಂಡ ಮೊಟ್ಟ ಮೊದಲ ಸಾಮ್ರಾಜ್ಯ. ಇವರು ಮಗಧ ಪ್ರದೇಶದಿಂದ ರಾಜ್ಯವನ್ನು ಆಳಿದರು. ಚಂದ್ರಗುಪ್ತ ಮೌರ್ಯ, ಬಿಂದುಸಾರ ಹಾಗೂ ಅಶೋಕ ಈ ಮನೆತನದ ರಾಜರುಗಳಲ್ಲಿ ಪ್ರಮುಖರು.
- ಈ ಮನೆತನದ ಸ್ಥಾಪಕ ಚಂದ್ರಗುಪ್ತ ಮೌರ್ಯ. ಮೆಗಾಸ್ತನಿಸನು ಗ್ರೀಕ್‌ನ ರಾಯಭಾರಿಯಾಗಿ ಚಂದ್ರಗುಪ್ತನ ಆಸ್ಥಾನಕ್ಕೆ ಬಂದಿದ್ದನು ಈತನ ಕೃತಿ ಇಂಡಿಕಾ.

94) ದಿಲ್ಲಿ ಸುಲ್ತಾನರು ಸ್ವತಃ ಪ್ರೋತ್ಸಾಹಿಸಿದ ಬೃಹತ್ ಉದ್ಯಮ:

(1) ಪಶುಪಾಲನೆ (2) ನೇಯ್ಗೆ

(3) ವ್ಯವಸಾಯ (4) ತೋಟಗಾರಿಕೆ

Ans: (2)

- ದೆಹಲಿಯ ಸುಲ್ತಾನರ ಕಾಲದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿದ್ದವು ಅವುಗಳಲ್ಲಿ ಹತ್ತಿ, ರೇಷ್ಮೆ ಹಾಗೂ ಉಣ್ಣೆ ಬಟ್ಟೆಗಳ ತಯಾರಿಕೆ ಸೇರಿದ್ದವು.
- ದೆಹಲಿಯ ಸುಲ್ತಾನರು ತಮ್ಮ ಸ್ವಂತ ರಾಜಕೀಯ ಹಾಗೂ ಆಡಳಿತದ ಅಗತ್ಯತೆಗಳಿಗೆ ವ್ಯಾಪಾರ ಹಾಗೂ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿದರು.

95) ಅಶ್ವಘೋಷ, ವಸುಮಿತ್ರ, ಸಂಗರಕ್ಷ ಮುಂತಾದ ಬೌದ್ಧ ವಿದ್ವಾಂಸರು ಇವನ ಕಾಲದಲ್ಲಿದ್ದರು.

(1) ಕಾನಿಷ್ಕ (3) ವಿಮಾಕಡ್ ಫೀಸಸ್

(3) ಕುಜಲಕಡ್ ಫೀಸಸ್ (4) ಅಶೋಕ

Ans: (1)

- ಕನಿಷ್ಕ (ಸಾಮಾನ್ಯ ಶಕ 78 – 120) ಈತನು ಕುಶಾನರ ಪ್ರಸಿದ್ಧ ದೊರೆ. ಇವನು ಸಾಮಾನ್ಯ ಶಕ 78 ರಲ್ಲಿ ಶಕ ವರ್ಷವನ್ನು ಆರಂಭಿಸಿದನು. ಇವನನ್ನು ಎರಡನೇ ಅಶೋಕ ಎಂದು ಕರೆಯಲಾಗುತ್ತದೆ.
- ಸಾಮಾನ್ಯ ಶಕ 102ರಲ್ಲಿ ನಾಲ್ಕನೇ ಬೌದ್ಧ ಧರ್ಮ ಸಮ್ಮೇಳನ ಇವನ ಕಾಲದಲ್ಲಿ ಕಾಶ್ಮೀರದಲ್ಲಿ ನಡೆಯಿತು.

- ಕನಿಷ್ಕನ ಕಾಲದಲ್ಲಿ ಅಶ್ವಘೋಷ, ವಸುಮಿತ್ರ, ನಾಗಾರ್ಜುನ, ಸಂಘರಕ್ಷ, ಮಾಥುರ, ಚರಕ ಮುಂತಾದ ತತ್ವಜ್ಞಾನಿ ಕವಿಗಳು ಆಶ್ರಯ ಪಡೆದಿದ್ದರು.
- ಅಶ್ವಘೋಷನು ಬುದ್ಧ ಚರಿತೆ, ವಸುಮಿತ್ರನು ಮಹಾವಿಭಾಷ್ಯ, ಚರಕನು ಆಯುರ್ವೇದದ ಪಿತಾಮಹನಾಗಿದ್ದು ಚರಕ ಸಂಹಿತೆ ಎಂಬ ಗ್ರಂಥವನ್ನು ಬರೆದನು.
- ಒಂದನೇ ನಾಗಾರ್ಜುನನ್ನು ಭಾರತದ ಮಾರ್ಟಿನ್ ಲೂಥರ್ ಎಂದು ಕರೆಯುತ್ತಾರೆ.

96) ಅಲ್ಲಾವುದ್ದೀನ್ ಖಿಲ್ಜಿಯ ಭವ್ಯ ರಚನೆ:

(1) ಕೆಂಪುಕೋಟೆ (2) ಅಲೈ ದರ್ವಾಜ

(3) ಬುಲಂದ್ ದರ್ವಾಜ (4) ಚಾರ್ ಮಿನಾರ್

Ans: (2)

- ಕೆಂಪುಕೋಟೆ – ಷಹಜಹಾನ್
- ಬುಲಂದ್ ದರ್ವಾಜಾ – ಅಕ್ಬರ್
- ಚಾರ್ ಮಿನಾರ್ – ಮೊಹಮ್ಮದ್ ಖುತುಬ್ ಷಾ (ಕುತುಬ್ ಶಾಹಿ ಮನೆತನ)
- ದೆಹಲಿಯ ಸುಲ್ತಾನರ ಪ್ರಮುಖ ವಾಸ್ತುಶಿಲ್ಪಗಳು – ಕುವತ್ ಉಲ್ ಇಸ್ಲಾಂ ಮಸೀದಿ – ಇದು ದೆಹಲಿ ಸುಲ್ತಾನರ ಕಾಲದ ಮೊಟ್ಟ ಮೊದಲ ಕಟ್ಟಡ. ಕುತುಬ್ ಮಿನಾರ್ ಇದನ್ನು ನಿರ್ಮಿಸಲು ಪ್ರಾರಂಭಿಸಿದವರು ಕುತುಬುದ್ದಿನ ಐಬಕ್ ಮತ್ತು ಪೂರ್ಣಗೊಳಿಸಿದವರು ಇಲ್ತಮಶ್. ಅಲೈ ದರ್ವಾಜಾ, ಸಾವಿರ ಕಂಬಗಳ ಅರಮನೆ, ಹೌಸ್ – ಇ – ಅಲಾಯ್, ಜಮಾಯತ್ ಖಾನ್ ಮಸೀದಿ, ಅದಿಲಾ ಬಾದ್ ಕೋಟೆ, ಫಿರೋಜ್ ಕೋಟ್ಲ ಅರಮನೆ, ಲಾಲ್ ಗುಂಬಜ್, ಹೌಸ್ – ಈ – ಕಾಸ್ ಮದ್ರಸಾ
- ಅಲೈ ದರ್ವಾಜಾ – ಅಲೈ ದರ್ವಾಜಾ ಅಲ್ಲಾವುದ್ದೀನ್ ಖಿಲ್ಜಿ ಕಾಲದ ಪ್ರಮುಖ ನಿರ್ಮಾಣ. ಇದರಲ್ಲಿ ಚೌಕಾಕಾರದ ಮಂಟಪವಿದ್ದು, ಎತ್ತರವಾದ ಗುಮ್ಮಟವಿದೆ. ಇದರ ನಾಲ್ಕು ದಿಕ್ಕುಗಳಲ್ಲಿ ಪ್ರವೇಶ ದ್ವಾರಗಳಿವೆ. ಸುಂದರ ವಿನ್ಯಾಸಗಳಿಂದ ಕೂಡಿದ ಇದನ್ನು ಮುಸ್ಲಿಮರ ಕಾಲದ ಒಂದು ಶ್ರೇಷ್ಠ ಕೊಡುಗೆ ಎಂದು ಪರಿಗಣಿಸಲಾಗಿದೆ.
- ಈತನ ಇನ್ನೊಂದು ಪ್ರಮುಖ ಸ್ಮಾರಕ ನಿಜಾಮುದ್ದೀನ್ ದರ್ಗಾದಲ್ಲಿರುವ ಜಮಾಯಿತ್ ಖಾನ್ ಮಸೀದಿ.

97) ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಮೊಘಲ್ ಚಕ್ರವರ್ತಿಯಿಂದ ಹೈದರಾಬಾದ್, ಬಂಗಾಳ, ಗುಜರಾತ್ ಪ್ರದೇಶಗಳಲ್ಲಿ ತೆರಿಗೆ ರಹಿತ ವ್ಯಾಪಾರ ಮಾಡಲು ಅನುಮತಿ ಪಡೆದರು. ಇದರ ಪರಿಣಾಮ:

(1) ಹೈದರಾಬಾದ್, ಬಂಗಾಳ, ಗುಜರಾತ್‌ಗಳಲ್ಲಿ ಸಾಮ್ರಾಜ್ಯ ಸ್ಥಾಪಿಸಿದರು.

(2) ಚಕ್ರವರ್ತಿಯ ಸಾಮಂತರಾಗಿ ಹೈದರಾಬಾದ್, ಬಂಗಾಳ, ಗುಜರಾತ್‌ಗಳಲ್ಲಿ ಆಳಿದರು.

(3) ಬಕ್ಷಾರ್ ಕದನ ನಡೆಯಿತು.

(4) ಚಕ್ರವರ್ತಿಗೆ ಪ್ರತಿವರ್ಷ 3000 ರೂಪಾಯಿಗಳನ್ನು ಕೊಡಬೇಕಾಯಿತು.

Ans: (4)

- ಭಾರತದಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ 1600. ಇದರೊಂದಿಗೆ ಇಂಗ್ಲೆಂಡಿನ ರಾಣಿ ಎಲಿಜಬೆತ್‌ಳು ಈ ಕಂಪನಿಗೆ 15 ವರ್ಷಗಳ ಒಪ್ಪಿಗೆ ನೀಡಿದಳು.
- 1717ರಲ್ಲಿ ಜಾನ್ ಸರ್ಮನ್ ನಿಯೋಗ ಕಲ್ಕತ್ತಾದಿಂದ ದೆಹಲಿಯ ಮೊಘಲ್ ಚಕ್ರವರ್ತಿಯಿಂದ ವ್ಯಾಪಾರ

ರಿಯಾಯಿತಿಗಳನ್ನು ಪಡೆಯಲು ಬಂದಾಗ ನಿಯೋಗದಲ್ಲಿದ್ದ ವೈದ್ಯ ವಿಲಿಯಂ ಹ್ಯಾಮಿಲ್ಟನ್ ಮೊಗಲ್ ಚಕ್ರವರ್ತಿಯಾದ ಫಾರೂಕ್ ಸಿಯಾರ್‌ನ ರೋಗವನ್ನು ಗುಣಪಡಿಸಿದನು. ಇದರಿಂದ ಸಂತೃಪ್ತನಾದ ದೊರೆ ಕೃತಜ್ಞಪೂರ್ವಕವಾಗಿ ಮೂರು ಫರ್ಮಾನುಗಳನ್ನು ಕೊಟ್ಟನು. ಅವುಗಳು ಈ ಕೆಳಗಿನಂತಿವೆ –

1. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯಿಂದ 3000 ರೂಪಾಯಿಗಳನ್ನು ಪಡೆದು ಬಂಗಾಳದಲ್ಲಿ ಬ್ರಿಟಿಷರಿಗೆ ಸುಂಕ ರಹಿತ ವ್ಯಾಪಾರಕ್ಕೆ ಅನುಮತಿ ಕೊಡುವುದು.
2. ಮುಂಬೈ ಟಂಕ ಸಾಲೆಯಿಂದ ನಾಣ್ಯ ಟಂಕಿಸುವ ಅಧಿಕಾರ ಕಂಪನಿಗೆ ಕೊಡುವುದು.
3. ಹೈದರಾಬಾದ್, ಸೂರತ್ ಮತ್ತು ಕಲ್ಕತ್ತಾಗಳಲ್ಲಿ ಕೂಡಾ ಸುಂಕ ರಹಿತ ವ್ಯಾಪಾರ ಅನುಮತಿ ಕೊಡುವುದು.

98) ತಾನೇ ಪೇಶ್ವೆ ಎಂದು ಘೋಷಿಸಿ ಕಾನ್ಪುರ ದಂಗೆಯ ನಾಯಕತ್ವ ವಹಿಸಿದವನು.

(1) ಬಹದ್ದೂರ್ ಷಾ (2) ತಾಂತ್ಯಾ ಟೋಪಿ
(3) ನಾನಾ ಸಾಹೇಬ್ (4) ವಾಜಿದ್ ಅಲಿ

Ans: (3)

ಭಾರತದಲ್ಲಿ ದಂಗೆ ನಡೆದ ಸ್ಥಳಗಳು ಹಾಗೂ ನಾಯಕರು

- ಕಾನ್ಪುರ ನಾನಾಸಾಹೇಬ್
- ಬಿಹಾರ – ಕುಂವರ್ ಸಿಂಗ್
- ಲಕ್ನೋ – ಬೇಗಂ ಹಜರತ್ ಮಹಲ್
- ಝಾನ್ಸಿ – ರಾಣಿ ಲಕ್ಷ್ಮೀಬಾಯಿ

ಕಾನ್ಪುರ ದಂಗೆ – ಜೂನ್ 5, 1857ರಲ್ಲಿ ಪ್ರಾರಂಭ.ಇದರ ನಾಯಕತ್ವ ವಹಿಸಿದವನು ನಾನಾ ಸಾಹೇಬ್.ಇತನನ್ನು ಭಾರತದ ಗ್ಯಾರಿಬಾಲ್ಡಿ ಎಂದು ಕರೆಯುತ್ತಾರೆ.ತಾತ್ಯಾಟೋಪೆ ಇತನ ಸೇನಾನಿಯಾಗಿದ್ದನು.

99) ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗ ಮತ್ತು ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಕೇಂದ್ರ ಸರ್ಕಾರದ ಯೋಜನೆ:

(1) ಅನೌಪಚಾರಿಕ ಯೋಜನೆ
(2) ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ 1978
(3) ರಾಷ್ಟ್ರೀಯ ಶಿಕ್ಷಣ ನೀತಿ 1986
(4) ರಾಷ್ಟ್ರೀಯ ಸಾಕ್ಷರತಾ ಮಿಷನ್ 1988

Ans: (4)

ಭಾರತದಲ್ಲಿ ಅನಕ್ಷರತೆ ವಿಶೇಷವಾಗಿ ವಯಸ್ಕರ ಸಾಕ್ಷರತೆ, ಸ್ವಾತಂತ್ರ್ಯಾನಂತರ ರಾಷ್ಟ್ರೀಯ ಆದ್ಯತೆಯಾಗಿದೆ. ಅನಕ್ಷರತೆ ನಿರ್ಮೂಲನೆ ಉದ್ದೇಶದಿಂದ ಮತ್ತು ವಯಸ್ಕರಿಗೆ ಜೀವನ ಪರ್ಯಂತ ಶಿಕ್ಷಣ ಮತ್ತು ಸಾಕ್ಷರತೆ ನೀಡುವ ಉದ್ದೇಶಕ್ಕಾಗಿ ಭಾರತ ಸರ್ಕಾರ 1988ರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಅನ್ನು ಆರಂಭಿಸಿತು. ಅಂದಿನಿಂದ ಭಾರತದಲ್ಲಿ ಪ್ರತಿ ವರ್ಷ ಸೆಪ್ಟೆಂಬರ್ 8 ರಂದು ಅಂತಾರಾಷ್ಟ್ರೀಯ ಸಾಕ್ಷರತಾ ದಿನವನ್ನು ಆಚರಿಸಲಾಗುತ್ತಿದೆ ಮತ್ತು ಗುರಿ ಸಾಧನೆಗೆ ರಾಷ್ಟ್ರದ ಬದ್ಧತೆಯನ್ನು ಪುನರುಚ್ಚರಿಸಲಾಗುತ್ತಿದೆ. ಅಲ್ಲದೆ, ಅನಕ್ಷರತೆ ನಿರ್ಮೂಲನೆ ಮಾಡುವ ಅಂತಾರಾಷ್ಟ್ರೀಯ ಸಮುದಾಯದ ಪ್ರಯತ್ನಗಳಿಗೆ ದೃಢ ಬೆಂಬಲ ನೀಡುವ ಜೊತೆಗೆ ಸಂಪೂರ್ಣ ಸಾಕ್ಷರತೆ ಗುರಿ ಸಾಧನೆ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

100) ಭಾರತದ ಒಕ್ಕೂಟದಲ್ಲಿ ಕಾಶ್ಮೀರವು ವಿಲೀನಗೊಂಡ ವರ್ಷವಿದು.

(1) 1947 (2) 1949
(2) 1951 (4) 1961

Ans: (1)

- ಜಮ್ಮು ಕಾಶ್ಮೀರನ ರಾಜನಾಗಿದ್ದ ಹರಿಸಿಂಗನು ಸ್ವತಂತ್ರವಾಗಿ ಉಳಿಯಲು ನಿರ್ಧರಿಸಿದ್ದನು. ಜಮ್ಮು ಕಾಶ್ಮೀರವು ಭಾರತಕ್ಕೆ ಸೇರಿಬಿಡಬಹುದೆಂಬ ಆತಂಕದಿಂದ ಪಾಕಿಸ್ತಾನ ಸೇನೆಯ ಬೆಂಬಲಿತ ಪಠಾನ ಬುಡಕಟ್ಟು ಜನಾಂಗವು ಭಾರತದ ಪ್ರದೇಶಕ್ಕೆ ನುಗ್ಗಲು ಪ್ರಯತ್ನಿಸಿ ಸಾಕಷ್ಟು ಪ್ರದೇಶವನ್ನು ಆಕ್ರಮಿಸಿತು. ಹರಿ ಸಿಂಗ್ ಭಾರತದ ಒಕ್ಕೂಟಕ್ಕೆ ಸೇರಲು ಸಮ್ಮತಿಸದೇ ಭಾರತೀಯ ಸೇನೆ ಅಲ್ಲಿಗೆ ಪ್ರವೇಶಿಸುವಂತೆ ಇರಲಿಲ್ಲ. ಆ ಸಂದರ್ಭದಲ್ಲಿ ಗಂಭೀರತೆಯನ್ನು ಅರಿತ ರಾಜ ಹರಿಸಿಂಗನು ಅಕ್ಟೋಬರ್ 1947ರಲ್ಲಿ ಭಾರತದಲ್ಲಿ ಕಾಶ್ಮೀರವನ್ನು ವಿಲೀನಗೊಳಿಸಲು ಸಹಿಯನ್ನು ಹಾಕಿದನು.
- ಭಾರತ ಸರ್ಕಾರ ಹೈದರಾಬಾದ್ ಸಂಸ್ಥಾನವನ್ನು 1948ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಿತು.
- ಜನರ ವಿನಂತಿಯ ಮೇರೆಗೆ ಭಾರತ ಸರ್ಕಾರ ಜುನಾಗಡದಲ್ಲಿ ಸೈನ್ಯವನ್ನು ಕಳುಹಿಸಿ ಶಾಂತಿ ಸ್ಥಾಪನೆ ಮಾಡಿ 1949ರಲ್ಲಿ ಭಾರತದ ಒಕ್ಕೂಟಕ್ಕೆ ಸೇರಿಸಲಾಯಿತು.
- ಭಾರತ ಸ್ವತಂತ್ರಗೊಂಡ ನಂತರ ಈ ಮೂರು ಸಂಸ್ಥಾನಗಳನ್ನು ಭಾರತದ ಉಕ್ಕಿನ ಮನುಷ್ಯ ಎಂದು ಕರೆಯಲ್ಪಡುವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ನೇತೃತ್ವದಲ್ಲಿ ಭಾರತದೊಂದಿಗೆ ವಿಲೀನಗೊಳಿಸಲಾಯಿತು.

101) 1962ರಲ್ಲಿ ಚೀನಾ ಭಾರತದ ಮೇಲೆ ದಾಳಿ ಮಾಡಲು ಕಾರಣ

(1) ದಲೈಲಾಮ ಮತ್ತು ಅವರ ಅನುಯಾಯಿಗಳಿಗೆ ಆಶ್ರಯ ನೀಡಿದ್ದು.

(2) ಭಾರತ ಪಂಚಶೀಲ ತತ್ವಗಳಿಗೆ ಸಹಿ ಹಾಕಿದ್ದು

(3) ಭಾರತದಿಂದ ನಿರಾಶ್ರಿತರು ಚೀನಾಕ್ಕೆ ನುಸುಳಿದ್ದು

(4) ಚೀನಾದಲ್ಲಾದ ಸಮಾಜವಾದಿ ಕ್ರಾಂತಿ

Ans: (1)

- ದೇಶ ವಿಭಜನೆಯ ನಂತರ ನಿರಾಶ್ರಿತರ ಸಮಸ್ಯೆ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿತು. ನೆಹರು ಅವರ ಕಾಲದಲ್ಲಿ ಟಿಬೆಟ್ ನಿಂದ ಅನೇಕ ಜನರು ನಿರಾಶ್ರಿತರಾಗಿ ಭಾರತಕ್ಕೆ ಬಂದಿದ್ದಾರೆ. ಅಂದಾಜಿನ ಪ್ರಕಾರ ಸುಮಾರು ಒಂದು ಲಕ್ಷ ಇಪ್ಪತ್ತು ಸಾವಿರ ಟಿಬೆಟಿಯನ್ ನಿರಾಶ್ರಿತರು ಭಾರತದಲ್ಲಿದ್ದಾರೆ. 1960ರ ದಶಕದಲ್ಲಿ ಅಂದಿನ ಮೈಸೂರು ಸರಕಾರ ಮೈಸೂರು ಜಿಲ್ಲೆಯ ಬೈಲುಕುಪ್ಪೆ ಎಂಬಲ್ಲಿ ಟಿಬೆಟಿಯನ್ ನಿರಾಶ್ರಿತರಿಗಾಗಿ ಸುಮಾರು 3000 ಎಕರೆ ಜಮೀನನ್ನು ಮಂಜೂರು ಮಾಡಿತು. ಈ ಕಾರಣದಿಂದಾಗಿ ಭಾರತ ಮತ್ತು ಚೀನಾ ನಡುವಿನ ವೈರತ್ವ ಭಾವನೆ ಬೆಳೆದು ಭಾರತದ ಮೇಲೆ ಯುದ್ಧ ಮಾಡಲು ಕಾರಣವಾಯಿತು.

102) ಮಧ್ಯಯುಗದ ಭಾರತವನ್ನಾಳಿದ ಪ್ರಪ್ರಥಮ ಮಹಿಳೆ:

(1) ರಾಣಿ ಪದ್ಮಿನಿ (2) ಝಾನ್ಸಿರಾಣಿ ಲಕ್ಷ್ಮೀಬಾಯಿ

(3) ರಜಿಯಾ ಸುಲ್ತಾನಾ (4) ಬೇಗಂ ಹಜರತ್ ಮಹಲ್

Ans: (3)

- ರಜಿಯಾ ಸುಲ್ತಾನ್ (ಸಾಮಾನ್ಯ ಶಕ 1236 – 1240) – ಇಲ್ತುಮಶ್‌ನ ಮಗಳಾದ ಈಕೆ ಮೂರು ವರ್ಷ ಆರು ತಿಂಗಳು ಮತ್ತು ಆರು ದಿನಗಳ ಮಾತ್ರ ದೆಹಲಿಯ ಸಿಂಹಾಸನವನ್ನು ಆಳಿದಳು.
- ಪುರುಷರಂತೆ ವೇಷ ಧರಿಸಿ ಮಧ್ಯ ಭಾರತದ ಇತಿಹಾಸದಲ್ಲಿ ದೆಹಲಿಯ ಸಿಂಹಾಸನ ಏರಿದ ಏಕೈಕ ಮತ್ತು ಪ್ರಥಮ ಮಹಿಳೆ ರಜಿಯಾ ಸುಲ್ತಾನ.

103) ಹಿಂದೂಕುಶ್‌ನ ದಕ್ಷಿಣ ಭಾಗದಲ್ಲಿ ಮೊಟ್ಟಮೊದಲ ಬಾರಿಗೆ ಚಿನ್ನದ ನಾಣ್ಯಗಳನ್ನು ಟಂಕಿಸಿದ ಕುಶಾನರ ದೊರೆ:

(1) ಕುಜಲಕಡ್ ಫೀಸಸ್ (2) ವಿಮಾಕಡ್ ಫೀಸಸ್

(3) ಒಂದನೇ ಕಾನಿಷ್ಕ (4) ಎರಡನೇ ಕಾನಿಷ್ಕ

Ans: (2)

- ವಿಮಾಕಡ್ ಫೀಸಸ್ (ಸಾಮಾನ್ಯ ಶಕ 65 – 78) ಭಾರತಕ್ಕೆ ಬಂಗಾರದ ನಾಣ್ಯಗಳು ಪರಿಚಯಿಸಿದ ಮೊಟ್ಟಮೊದಲ ಅರಸ. ಇವನು ಒಂದನೇ ಕುಜಲ್ ಕಡ್ಫಿಸ್‌ನ ಮಗನಾಗಿದ್ದನು.
- ಕುಶಾನರು ಮೌರ್ಯ ಸಾಮ್ರಾಜ್ಯದ ನಂತರ ಉತ್ತರ ಭಾರತದಲ್ಲಿ ಅತ್ಯಂತ ವಿಶಾಲವಾದ ಸಾಮ್ರಾಜ್ಯವನ್ನು ಸ್ಥಾಪಿಸಿದರು.
- ಕುಶಾನರ ಪ್ರಸಿದ್ಧ ದೊರೆ ಕನಿಷ್ಕ.

104) ಪಟ್ಟಿ– 1 ಅನ್ನು ಪಟ್ಟಿ –2 ರೊಂದಿಗೆ ಹೊಂದಿಸಿ

ಪಟ್ಟಿ–1	ಪಟ್ಟಿ–2
(1) ಅಹಿಂಸೆ	ಎ)ಕದಿಯದಿರುವುದು
(2) ಅಸ್ತೇಯ	ಬಿ) ಸಂಸಾರಿ ಆಗದಿರುವುದು
(3) ಅಪರಿಗ್ರಹ	ಸಿ) ಹಿಂಸೆ ಮಾಡದಿರುವುದು
(4) ಬ್ರಹ್ಮಚರ್ಯ	ಡಿ) ಆಸ್ತಿಯನ್ನು ಹೊಂದದಿರುವುದು

ಈ ಕೆಳಗೆ ನೀಡಿರುವ ಪಟ್ಟಿಯಲ್ಲಿ ಸೂಕ್ತ ಉತ್ತರ ಗುರುತಿಸಿ

(1) 1–ಸಿ, 2–ಎ, 3–ಡಿ, 4–ಬಿ

(2) 1–ಡಿ, 2–ಎ, 3–ಸಿ, 4–ಡಿ

(3) 1–ಸಿ, 2–ಡಿ, 3–ಬಿ, 4–ಎ

(4) 1–ಬಿ, 2–ಸಿ, 3–ಎ, 4–ಡಿ

Ans: (1)

- ಜೈನ ಧರ್ಮವು ಭಾರತದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಜೈನ ಧರ್ಮದ ಮೊದಲ ತೀರ್ಥಂಕರ ಋಷಭನಾಥ ಅಥವಾ ಆದಿನಾಥ. ಜೈನ ಧರ್ಮದ 23ನೇ ತೀರ್ಥಂಕರ ಪಾರ್ಶ್ವನಾಥ ಮತ್ತು 24ನೇ ತೀರ್ಥಂಕರ ವರ್ಧಮಾನ ಮಹಾವೀರ.
- ಪಾರ್ಶ್ವನಾಥನು ತನ್ನ 30ನೇ ವಯಸ್ಸಿಗೆ ಪರಮ ಜ್ಞಾನ ಪಡೆದುಕೊಂಡು ನಾಲ್ಕು ಮಹಾನ್ ತತ್ವಗಳನ್ನು ಬೋಧಿಸಿದನು ಅವುಗಳೆಂದರೆ
  1. ಅಹಿಂಸೆ
  2. ಸತ್ಯ
  3. ಆಸ್ತೇಯ – ಕಳ್ಳತನ ಮಾಡದಿರುವುದು
  4. ಅಪರಿಗ್ರಹ – ಅವಶ್ಯಕತೆಗಿಂತ ಹೆಚ್ಚಿನ ಸಂಪತ್ತನ್ನು ಹೊಂದದಿರುವುದು
  5. ಬ್ರಹ್ಮಚರ್ಯ (ವರ್ಧಮಾನ ಮಹಾವೀರನ ಬೋಧನೆ)

105) ಭರತ ಎಂಬ ಬುಡಕಟ್ಟು ಪೂರ್ವ ಪಂಜಾಬಿನ ಸತದ್ರು ಹಾಗೂ ಯಮುನಾ ಪ್ರದೇಶದಲ್ಲಿ ನೆಲೆಸಿತ್ತು. ಈ ಪ್ರದೇಶವೇ

(1) ಧರ್ಮಾವರ್ತ (2) ಆರ್ಯಾವರ್ತ

(3) ಕರ್ಮಾವರ್ತ (3) ದಾಸ್ಯಾವರ್ತ

Ans: (2)

- ಆರ್ಯರ ಮೂಲ ಸ್ಥಳದ ಬಗ್ಗೆ ಇತಿಹಾಸಕಾರರಲ್ಲಿ ಏಕಾಭಿಪ್ರಾಯವಿಲ್ಲ. ಆರ್ಯರು ಮೂಲತಃ ಮಧ್ಯ ಏಷ್ಯಾದ ಕ್ಯಾಸ್ಪಿಯನ್ ಸಮುದ್ರ ಪ್ರದೇಶದ ಹಳ್ಳಿಗಾಡಿನ ಅಲೆಮಾರಿ ದನಗಾಹಿಗಳಾಗಿದ್ದರು ಎಂದು ನಂಬಲಾಗಿದೆ. ಅವರು ಹುಲ್ಲುಗಾವಲು ಹುಡುಕಿಕೊಂಡು ವಲಸೆ ಹೊರಟು ಭಾರತದ ಉಪಖಂಡವನ್ನು ಪ್ರವೇಶಿಸಿದರು. ಇಲ್ಲಿನ

ಸ್ಥಳೀಯರಿಂದ ಪ್ರಬಲ ವಿರೋಧ ಎದುರಿಸಿದರು ಮತ್ತು ಅವರನ್ನು ದಾಸ್ಯುಗಳೆಂದು ಕರೆದರು. ಆದಾಯವು ಅವರ ಪ್ರತಿರೋಧವನ್ನು ಎದುರಿಸಿ ಸಿಂಧೂ ನದಿಯ ತೀರದಲ್ಲಿ ನೆಲೆಸಿದರು. ಭಾರತದ ಬಹು ಭಾಗವನ್ನು ಆವರಿಸಿದ ಪ್ರದೇಶವನ್ನು ಆರ್ಯಾವರ್ತ (ಆರ್ಯರ ನಾಡು) ಎಂದು ಕರೆಯಲಾಗಿದೆ.

106) ಗುರ್ಜರ ಮನೆತನದ ಆಳ್ವಿಕೆಯನ್ನು ಪ್ರಾರಂಭಿಸಿದ ಹರಿಶ್ಚಂದ್ರನ ನಾಲ್ವರು ಮಕ್ಕಳು ಆಳ್ವಿಕೆ ನಡೆಸಿದ ನಾಲ್ಕು ಪ್ರದೇಶಗಳಿವು.

(1) ಜೋಧ್‌ಪುರ, ನಂದಿಪುರ, ಭರೂಚ್ & ಉಜ್ಜೈನಿ

(2) ಜೋಧ್‌ಪುರ, ನಂದಿಪುರ, ಕಳಿಂಗ ಮತ್ತು ಒಡಿಶಾ

(3) ಉಜ್ಜೈನಿ ಭರೂಚ್, ಮಾಳ್ವ ಮತ್ತು ನಂದಿಪುರ

(4) ನಂದಿಪುರ, ಉಜ್ಜೈನಿ ಒಡಿಶಾ ಮತ್ತು ಜೋಧ್ ಪುರ

Ans: (1

- ಗುರ್ಜಲ ಪ್ರತಿಹಾರರು ತಮ್ಮನ್ನು ತಾವು ರಾಮಾಯಣ ಕಾವ್ಯದ ಪ್ರಸಿದ್ಧ ಸೂರ್ಯವಂಶಕ್ಕೆ ಸೇರಿದ ಕ್ಷತ್ರಿಯ ಲಕ್ಷ್ಮಣನ ಹಾಗೂ ಹರಿಶ್ಚಂದ್ರನೆಂಬ ಬ್ರಾಹ್ಮಣನ ವಂಶಜರು ಎಂದು ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ.
- ಶಾಸನಗಳ ಪ್ರಕಾರ ಈ ಮನೆತನದ ಸ್ಥಾಪಕ ನಾಗಭಟ್ಟ.
- ಇವರು ಕನೋಜನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.
- ಈ ಮನೆತನದಲ್ಲಿ ಪ್ರಮುಖ ಅರಸರು ವತ್ಸರಾಜ, ಎರಡನೇ ನಾಗಭಟ್ಟ, ಮಿಹಿರ್ ಬೋಜ, ಒಂದನೇ ಮಹೇಂದ್ರ ಪಾಲ, ರಾಜ್ಯಪಾಲ.

107) ಸಮುದ್ರಗುಪ್ತನು ಜಾರಿಗೆ ತಂದ ಚಿನ್ನದ ನಾಣ್ಯವು ಇದನ್ನು ಸೂಚಿಸುತ್ತದೆ.

(1) ಇವನು ವೈದಿಕ ವಿಧಿ–ವಿಧಾನಗಳನ್ನು ಅನುಸರಿಸುತ್ತಿದ್ದೆನೆಂದು

(2) ಇವನು ಯುದ್ಧಪ್ರಿಯನಾಗಿದ್ದನೆಂದು

(3) ಇವನು ಸಂಗೀತ ಪ್ರಿಯನಾಗಿದ್ಧನೆಂದು

(4) ಇವನು ಗುಪ್ತಶಕೆಯನ್ನು ಪ್ರಾರಂಭಿಸಿದನೆಂದು

Ans: (3)

ಸಮುದ್ರಗುಪ್ತ (ಸಾಮಾನ್ಯ ಶಕ **335 – 380**)

- ಸಮುದ್ರಗುಪ್ತನನ್ನು ವಿ.ಎ.ಸ್ಮಿತ್ ಭಾರತದ ನೆಪೋಲಿಯನ್ ಎಂದು ಕರೆದಿದ್ದಾನೆ.
- ಗುಪ್ತ ವಂಶದ ಶ್ರೇಷ್ಠ ಅರಸ.
- ಈತನ ಸಾಧನೆಯನ್ನು ತಿಳಿಸುವ ಶಾಸನ ಹರಿಸೇನನಿಂದ ರಚಿತವಾದ ಅಲಹಾಬಾದ್ ಸ್ತಂಭ ಶಾಸನ ಇದು 33 ಸಾಲುಗಳನ್ನು ಒಳಗೊಂಡಿದ್ದು ಒಂದೇ ವಾಕ್ಯದಲ್ಲಿದೆ.
- ಇತನಿಗಿದ್ದ ಪ್ರಸಿದ್ಧ ಬಿರುದು ಕವಿರಾಜ.
- ಈತನ ಕಾಲದಲ್ಲಿ ನಾಣ್ಯಗಳ ಮೇಲೆ ವೀಣೆ ಮತ್ತು ಕೊಳಲನ್ನು ನುಡಿಸುತ್ತಿರುವ ಚಿತ್ರಗಳನ್ನು ಮುದ್ರಿಸಿದನು ಆದ್ದರಿಂದ ಇವನನ್ನು ಒಬ್ಬ ಪ್ರಸಿದ್ಧ ಸಂಗೀತಗಾರ ಎಂದು ಅಂದಾಜಿಸಲಾಗಿದೆ.

108) ಇದು ಭಕ್ತಿ ಚಳವಳಿಯ ಪರಿಣಾಮಗಳಲ್ಲಿ ಒಂದಾಗಿದೆ.

(1) ಹಿಂದೂ ಆಚರಣೆಗಳಲ್ಲಿ ಸುಧಾರಣೆಗಳು ಕಂಡು ಬರಲಿಲ್ಲ

(2) ಭಾರತದ ಪ್ರಾದೇಶಿಕ ಭಾಷೆಗಳು ವಿಕಾಸಗೊಂಡವು

(3) ಉರ್ದು ಭಾಷೆಯಲ್ಲಿ ಮಾತ್ರ ಭಕ್ತಿಯ ಮಹತ್ವವನ್ನು ಸಾರಲಾಯಿತು.

(4) ಮುಸ್ಲಿಂರ ಆಚರಣೆಗಳಲ್ಲಿ ಸುಧಾರಣೆಗಳು ಕಂಡು ಬರಲಿಲ್ಲ

Ans: (2)

ಭಕ್ತಿ ಚಳುವಳಿಯ ಪರಿಣಾಮಗಳು –

1. ಹಿಂದೂಗಳು ಮತ್ತು ಮುಸ್ಲಿಂ ಸಮುದಾಯಗಳಲ್ಲಿದ್ದ ಮೌಢ್ಯ ಆಚರಣೆಗಳ ಅರ್ಥಹೀನತೆಯನ್ನು ಸಾರುವುದು.
2. ಹಿಂದೂ ಮತ್ತು ಮುಸಲ್ಮಾನರಲ್ಲಿ ಮಧುರ ಬಾಂಧವ್ಯವನ್ನು ಉಂಟುಮಾಡುವುದು.
3. ಭಾರತದ ಪ್ರಾದೇಶಿಕ ಭಾಷೆಗಳ ವಿಕಾಸ.
4. ಭಾರತೀಯ ಸಂಸ್ಕೃತಿಯ ವಿಕಾಸ ಹಾಗೂ ಬಹು ಸಂಸ್ಕೃತಿಗಳ ಸಂಗಮ

109) ಭಾರತದ ಮೇಲೆ ಅಲೆಗ್ಸಾಂಡರ್‌ನ ದಾಳಿಯಿಂದಾದ ಪರಿಣಾಮ:

(1) ಭಾರತೀಯರು ಸಂಸ್ಕೃತವನ್ನು ಮರೆತು ಗ್ರೀಕ್ ಭಾಷೆಯನ್ನು ಕಲಿತರು.

(2) ಭಾರತೀಯರ ಗ್ರಂಥಗಳು ಗ್ರೀಕ್ ಭಾಷೆಗೆ ತರ್ಜುಮೆಗೊಂಡವು

(3) ಭಾರತೀಯ ಸಂಸ್ಕೃತಿಯು ಅವನತಿಯುತ್ತ ಸಾಗಿತ್ತು.

(4) ಭಾರತ ಗ್ರೀಕ್ ಸಾಮ್ರಾಜ್ಯದೊಂದಿಗೆ ವಿಲೀನಗೊಂಡಿತು.

Ans: (2)

ಅಲೆಗ್ಸಾಂಡರ್ – ಗ್ರಿಸ್ ದೇಶದ ಮೆಸಿಡೊನಿಯಾದ ರಾಜನಾದ ಈತನು ತನ್ನ ಅತ್ಯಲ್ಪ ಜೀವನಾವಧಿಯಲ್ಲಿ ಜಗತ್ತನ್ನು ಗೆಲ್ಲಲು ಹೊರಟನು. ಇವನು ಬೃಹತ್ ಸಾಮ್ರಾಜ್ಯವೊಂದನ್ನು ರೂಪಿಸುವಲ್ಲಿ ಸಫಲನಾದನು. ಇವನು ಪರ್ಶಿಯನ್ ಸಾಮ್ರಾಜ್ಯವನ್ನು ಪರಭಾವುಗೊಳಿಸಿ ಭಾರತದ ಮೇಲೆ ದಾಳಿಯನ್ನು ಮುಂದುವರಿಸಲು ಬಂದನು. ಗ್ರೀಕರಲ್ಲಿನ ಸರ್ವಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬನಾಗಿದ್ದ ಅರಿಸ್ಟಾಟಲ್ ಇವನ ಗುರುವಾಗಿದ್ದನು. ಭಾರತದ ಗಡಿಯಲ್ಲಿ ಹೋರಾಡಿ ಹಿಂದಿರುಗುವಾಗ ಬ್ಯಾಬಿಲೋನಿಯಾದಲ್ಲಿ ಸಾಮಾನ್ಯ ಶಕ ಪೂರ್ವ 323ರಲ್ಲಿ ಅಲೆಕ್ಸಾಂಡರ್ ಮೃತನಾದನು.

110) 15ನೇ ಶತಮಾನದ ಭಾರತದಲ್ಲಿ ಜರುಗಿದ ಸಾಮಾಜಿಕ ಸುಧಾರಣಾ ಚಳವಳಿಯ ಮುಖ್ಯ ಪರಿಣಾಮ:

(1) ಧಾರ್ಮಿಕ ಜೀವನ ಸುಧಾರಣೆ

(2) ಹಿಂದೂ ಸಮಾಜದ ಬಲಪಡಿಸುವಿಕೆ

(3) ಶಿಕ್ಷಣದ ಪ್ರಸಾರ

(4) ಸಾಮಾಜಿಕ ಪಿಡುಗುಗಳ ನಿರ್ಮೂಲನೆ

Ans: (4)

- ಮಾನವೀಯ ಮೌಲ್ಯಗಳಿಂದ ದೂರವಾಗಿ ಮೇಲು ಕೀಳೆಂಬ ಭೇದ ಭಾವಗಳಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯನ್ನು ಬದಲಿಸಿ ಮೌಟಿಯುಕ್ತ ಸಮಾಜದ ಕಡೆಗೆ ಕೊಂಡೊಯ್ಯುವ ಪ್ರಯತ್ನವೇ ಸಮಾಜ ಸುಧಾರಣೆ.
- ಜಾತಿ ಪದ್ಧತಿ, ಲಿಂಗ ಅಸಮಾನತೆ, ಸತಿ ಪದ್ಧತಿ, ವಿಧವಾ ಪುನರವಿವಾಹ ನಿರ್ಬಂಧ ಪದ್ಧತಿ, ಶೂದ್ರ ಮತ್ತು ಶೂದ್ರ ಮತ್ತು ಶೂದ್ರಾತಿ ಶೂದ್ರರು ಶಿಕ್ಷಣದಿಂದ ವಂಚಿತರಾಗಿದ್ದ ಸಮಸ್ಯೆಗಳನ್ನು ಬಗೆಹರಿಸಿ ಉತ್ತಮ ಸಮಾಜವನ್ನು ನಿರ್ಮಾಣ ಮಾಡುವುದು ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಯ ಮುಖ್ಯ ಉದ್ದೇಶವಾಗಿತ್ತು.

111) ಭೂಮಿಯ ಕೇಂದ್ರವಲಯವನ್ನು 'ನಿಫೆ' (Nife) ಎಂದುಕರೆಯಲು ಕಾರಣ

(1) ನಿಕ್ಕಲ್ ಮತ್ತು ಕಬ್ಬಿಣದ ವಸ್ತುಗಳು ಕೂಡಿರುವುದು

(2) ನಿಕ್ಕಲ್ ಮತ್ತು ತಾಮ್ರದ ವಸ್ತುಗಳು ಕೂಡಿರುವುದು

(3) ನಿಕ್ಕಲ್ ಮತ್ತು ಅಲ್ಯುಮಿನಿಯಂ ವಸ್ತುಗಳು ಕೂಡಿರುವುದು

(4) ನಿಕ್ಕಲ್ ಮತ್ತು ಮ್ಯಾಗ್ನೀಷಿಯಂ ವಸ್ತುಗಳು ಕೂಡಿಸುವುದು

Ans: (1)

- ಭೂಮಿಯ ಅಂತರಾಳವನ್ನು ಮೂರು ಪ್ರಮುಖ ಪದರುಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಭೂ ಚಿಪ್ಪು, ಮ್ಯಾಂಟಲ್ ಮತ್ತು ಕೇಂದ್ರಗೋಳ
- ಕೇಂದ್ರಗೋಳ – ಇದು ಭೂಮಿಯ ಅತ್ಯಂತ ಒಳಭಾಗ. ಇದು ಭೂಮಿಯ ಮೇಲ್ಮೈನಿಂದ 6371 ಕಿ.ಮೀ ಆಳದವರೆಗೆ ಇರುವುದು. ಕೇಂದ್ರಗೋಳವು ಪ್ರಧಾನವಾಗಿ ನಿಕ್ಕಲ್ (Ni) ಮತ್ತು ಕಬ್ಬಿಣ (Fe) ವಸ್ತುಗಳಿಂದ ಕೂಡಿರುವುದು. ಇದರಿಂದ ಕೇಂದ್ರ ವಲಯವನ್ನು ಸಾಂಕೇತಿಕವಾಗಿ ನಿಫೆ ಎನ್ನುವರು.
- ಕೇಂದ್ರ ವಲಯವು ಎರಡು ಉಪ ವಲಯಗಳನ್ನು ಹೊಂದಿದೆ ಅವುಗಳೆಂದರೆ ಹೊರ ಕೇಂದ್ರ ಗೋಳ ಮತ್ತು ಒಳಕೇಂದ್ರ ಗೋಳ.

112) ವಾಯುಮಂಡಲದ ಅತ್ಯಂತ ಕೆಳಪದರ ಇದಾಗಿದೆ.

(1) ಮಧ್ಯಂತರದ ಮಂಡಲ (2) ಸಮೋಷ್ಣಮಂಡಲ

(3) ಪರಿವರ್ತನಾ ಮಂಡಲ (4) ಅಯಾನು ಮಂಡಲ

Ans: (3)

- ವಾಯುಗೋಳವನ್ನು ಅದರ ಹಲವಾರು ಲಕ್ಷಣಗಳನ್ನು ಆಧರಿಸಿ 5 ಪದರಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ,
  1. ಪರಿವರ್ತನಾ ಮಂಡಲ (Troposphere)
  2. ಸಮೋಷ್ಣ ಮಂಡಲ (Stratosphere)
  3. ಮಧ್ಯಂತರ ಮಂಡಲ (Mesosphere)
  4. ಉಷ್ಣತಾ ಮಂಡಲ (Thermosphere)
  5. ಬಾಹ್ಯ ಮಂಡಲ (Exosphere)

113) 'ಎ' ಪಟ್ಟಿಯಲ್ಲಿನ ಪ್ರದೇಶಗಳಿಗೆ 'ಬಿ' ಪಟ್ಟಿಯಲ್ಲಿನ ಆವರ್ತ ಮಾರುತಗಳಿಗೆ ಹೊಂದಿಸಿ.

'ಎ' ಪಟ್ಟಿ	'ಬಿ' ಪಟ್ಟಿ
(1) ಚೀನಾ	ಎ) ವಿಲ್ಲಿ ವಿಲ್ಲೀಸ್
(2) ಅಮೆರಿಕಾ	ಬಿ) ವಿಲ್ಲಿ ವಿಲ್ಲೀಸ್
(3) ಆಸ್ಟ್ರೇಲಿಯಾ	ಸಿ) ಟೈಪೂನ್
(4) ರಷ್ಯಾ	ಡಿ) ಹರಿಕೇನ್

ಈ ಕೆಳಗೆ ನೀಡಿರುವ ಪಟ್ಟಿಯಲ್ಲಿ ಸೂಕ್ತ ಉತ್ತರ ಗುರುತಿಸಿ.

(1) 1–ಸಿ, 2–ಡಿ, 3–ಬಿ, 4–ಎ

(2) 1–ಡಿ, 2–ಸಿ, 3–ಎ, 4–ಬಿ

(3) 1–ಬಿ, 2–ಎ, 3–ಡಿ, 4–ಸಿ

(4) 1–ಎ, 2–ಬಿ, 3–ಸಿ, 4–ಡಿ

Ans: (1

- **ಆವರ್ತ ಮಾರುತಗಳ – ವಿವಿಧ ಹೆಸರುಗಳು**
  1. **ಚೀನಾ ಮತ್ತು ಜಪಾನ್ – ಟೈಪೂನ್**
  2. ಅಮೇರಿಕ ಮತ್ತು ಮೆಕ್ಸಿಕೋ – ಹರಿಕೇನ್
  3. ಆಸ್ಟ್ರೇಲಿಯಾ –ವಿಲ್ಲಿ ವಿಲ್ಲೀಸ್
  4. ಭಾರತ – ಸೈಕ್ಲೋನ್
  5. ರಷ್ಯಾ – ವಿರ್ಲ್‌ಪೂಲ್
- ಭಾರತದ ಕೆಲವು ಪ್ರಬಲವಾದ ಮಾರುತಗಳು – ನಿಶಾ, ನರ್ಗಿಸ್, ಐಲಾ, ಲೈಲಾ, ಬಿಜಿಲಿ ಮುಂತಾದವು
- ಪ್ರಮುಖ ಸ್ಥಳೀಯ ಮಾರುತಗಳು
  1. ಭಾರತ – ಲೂ
  2. **U. S. A** – ಚಿನೂಕ್ / ಹಿಮಭಕ್ಷಕ
  3. ಆಲ್ಪ್ಸ್ ಪರ್ವತ – ಫೋಹ್ನ್
  4. ಫ್ರಾನ್ಸ್ – ಮಿಸ್ಟ್ರಲ್

5. ಆಸ್ಟ್ರೇಲಿಯಾ – ಬ್ರಿಕ್ ಫೀಲ್ಡರ್
6. ಅಂಟಾರ್ಟಿಕಾ – ಬ್ಲಿಜರ್ಡ್
7. ಸಹರಾ ಮರುಭೂಮಿ – ಸಿರಾಕ್ಕೊ

114) ಹಿಂದೂ ಮಹಾಸಾಗರವು ಹೊಂದಿರುವ ಖಂಡಗಳ ಮೇರೆಗಳು:

(1) ಆಸ್ಟ್ರೇಲಿಯಾ, ಏಷ್ಯಾ, ದಕ್ಷಿಣ ಅಮೆರಿಕಾ
(2) ಆಫ್ರಿಕಾ, ದಕ್ಷಿಣ ಅಮೆರಿಕಾ, ಆಸ್ಟ್ರೇಲಿಯಾ
(3) ಆಫ್ರಿಕಾ, ಏಷ್ಯಾ, ಆಸ್ಟ್ರೇಲಿಯಾ
(4) ಆಸ್ಟ್ರೇಲಿಯಾ, ಏಷ್ಯಾ, ಉತ್ತರ ಅಮೆರಿಕಾ

Ans: (3)

- ಹಿಂದೂ ಮಹಾಸಾಗರ – ಇದು ದಕ್ಷಿಣದಲ್ಲಿ ಅತಿ ಹೆಚ್ಚು ವಿಸ್ತಾರವಾಗಿರುವ ಮೂರನೇ ದೊಡ್ಡ ಸಾಗರ.
- ಇದು ಉತ್ತರಕ್ಕೆ ಏಷ್ಯಾ, ಪಶ್ಚಿಮಕ್ಕೆ ಆಫ್ರಿಕಾ ಮತ್ತು ಪೂರ್ವಕ್ಕೆ ಆಸ್ಟ್ರೇಲಿಯಾದಿಂದ ಸುತ್ತುವರಿದಿದೆ .
- ಅತ್ಯಂತ ಆಳವಾದ ಸಾಗರ ಫೆಸಿಫಿಕ್ ಸಾಗರ
- ಅತ್ಯಂತ ಚಿಕ್ಕಸಾಗರ ಆರ್ಕಿಟಿಕ್ ಸಾಗರ

115) ಭಾರತದಂತಹ ರಾಷ್ಟ್ರಕ್ಕೆ ಗಡಿರೇಖೆಯು ಆವಶ್ಯಕವಾಗಿದೆ. ಕಾರಣ?

(1) ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾಪದಾರ್ಥಗಳನ್ನು
(2) ರೈಲುಮಾರ್ಗಗಳಿಗೆ ಪೂರಕವಾಗಲು
(3) ಕೈಗಾರಿಕೆಗಳ ಸಿದ್ಧವಸ್ತುಗಳನ್ನು ವಿತರಿಸಲು
(4) ದೀರ್ಘವಾದ ಭೂ ಗಡಿಯನ್ನು ರಕ್ಷಿಸಲು

Ans: (4)

- ಭಾರತದ ಒಟ್ಟು ಭೂ ಗಡಿ 15200 ಕಿ.ಮೀ
- ಇದು ತನ್ನ ಏಳು ದೇಶಗಳೊಂದಿಗೆ ತನ್ನ ಭೂ ಗಡಿಯನ್ನು ಹಂಚಿಕೊಂಡಿದೆ. ಅವುಗಳಲ್ಲಿ ಅತ್ಯಂತ ಉದ್ದವಾದ ಭೂ ಗಡಿಯನ್ನು ಹಂಚಿಕೊಂಡಿರುವ ದೇಶ ಬಾಂಗ್ಲಾದೇಶ 4096 ಕಿ.ಮೀ
- ಅತ್ಯಂತ ಚಿಕ್ಕ ಭೂ ಗಡಿಯನ್ನು ಹಂಚಿಕೊಂಡಿರುವ ದೇಶ ಆಫ್ಘಾನಿಸ್ತಾನ 80 ಕಿ.ಮೀ
- ಚೀನಾ ಮತ್ತು ಭಾರತದ ಗಡಿರೇಖೆಯನ್ನು ಮ್ಯಾಕ್ ಮೋಹನ್ ಗಡಿ ರೇಖೆ ಎನ್ನುವರು (3917 ಕಿ.ಮೀ)
- ಭಾರತ ಮತ್ತು ಪಾಕಿಸ್ತಾನವನ್ನು ವಿಭಾಗಿಸುವ ಗಡಿರೇಖೆಯನ್ನು ರ್ಯಾಡಕ್ಲಿಪ್ ರೇಖೆ ಎನ್ನುವರು (3310 ಕಿ. ಮೀ)
- ಇಡೀ ಭಾರತವನ್ನು 28 ರಾಜ್ಯಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಷ್ಟ್ರೀಯ ರಾಜಧಾನಿ ದೆಹಲಿ ಎಂದು ವಿಭಾಗಿಸಲಾಗಿದೆ.

116) ಕೋಲ್ಕತ್ತಾವನ್ನು 'ಚಹದ ಬಂದರು' ಎಂದು ಕರೆಯಲು ಕಾರಣ:

(1) ಡಾರ್ಜಿಲಿಂಗ್‌ನಲ್ಲಿ ಬೆಳೆಯುವ ಚಹವನ್ನು ಕೋಲ್ಕತ್ತಾ ಮೂಲಕ ರಫ್ತು ಮಾಡುತ್ತಾರೆ.
(2) ಪಶ್ಚಿಮ ಬಂಗಾಳದ ಜನರು ಚಹಾವನ್ನು ಹೆಚ್ಚಾಗಿ ಬಳಸುತ್ತಾರೆ
(3) ಕೋಲ್ಕತ್ತಾದಲ್ಲಿ ತಯಾರಿಸುವ ಚಹ ಅತಿ ಉತೃಷ್ಟವಾಗಿರುತ್ತದೆ.
(4) ಕೋಲ್ಕತ್ತಾದಲ್ಲಿ ಬಂದಿಳಿದಿದ್ದ ಚಹವನ್ನು ಸಮುದ್ರಕ್ಕೆ ಎಸೆಯುತ್ತಾರೆ.

Ans: (1)

- ಸರಕುಗಳನ್ನು ಒಯ್ಯಲು ಮತ್ತು ತರುವುದಕ್ಕೆ ಹಡಗು ತಂಗುವ ಸ್ಥಳವನ್ನು ಕರೆಯುತ್ತಾರೆ.
- ಭಾರತದಲ್ಲಿ 14 ಪ್ರಮುಖ ಬಂದರುಗಳಿವೆ. ಅವುಗಳಲ್ಲಿ ಆರು ಪಶ್ಚಿಮ ತೀರದಲ್ಲಿ ಮತ್ತು ಉಳಿದ ಏಳು ಪೂರ್ವ ತೀರದಲ್ಲಿ ನೆಲೆಸಿವೆ ಮತ್ತೊಂದು ಪ್ರಮುಖ ಬಂದರು ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿದೆ.

- ಪಶ್ಚಿಮ ತೀರದ ಬಂದರುಗಳು ಮತ್ತು ಪ್ರಮುಖ ಅಂಶಗಳು
  1. ಕಾಂಡ್ಲ – ಇದು ಗುಜರಾತಿನ ಕಛ್ ಖಾರಿಯ ಶಿರೋ ಭಾಗದಲ್ಲಿದೆ.
  2. ಮುಂಬೈ – ಇದನ್ನು ಭಾರತದ ಹೆಬ್ಬಾಗಿಲು ಎಂದು ಕರೆಯುತ್ತಾರೆ.
  3. ಜವಾಹರ್ ಲಾಲ್ ನೆಹರು ಬಂದರು – ಇದನ್ನು ನವ್ಹಾಶೇವ ಬಂದರು ಎಂದು ಕರೆಯುತ್ತಾರೆ.
  4. ನವ ಮಂಗಳೂರು – ಇದನ್ನು ಕರ್ನಾಟಕದ ಹೆಬ್ಬಾಗಿಲು ಎನ್ನುವರು.
  5. ಕೊಚಿ – ಇದು ಕೇರಳ ತೀರದಲ್ಲಿದ್ದು ಇದನ್ನು ಅರಬ್ಬೀ ಸಮುದ್ರದ ರಾಣಿ ಎನ್ನುವರು.
  6. ಮರ್ಮಗೋವ – ಇದು ಗೋವಾ ರಾಜ್ಯದ ಜುವಾರಿ ನದಿಯ ಅಳಿವೆಯ ಅಂಚಿನಲ್ಲಿದೆ.
- ಪೂರ್ವ ತೀರದ ಪ್ರಮುಖ ಬಂದರುಗಳು
  1. ತೂತಕಡಿ – ತಮಿಳುನಾಡಿನ ಕರಾವಳಿಯ ಆಗ್ನೇಯ ಭಾಗದಲ್ಲಿ ನೆಲೆಸಿದೆ.
  2. ಚೆನ್ನೈ – ಇದು ತಮಿಳುನಾಡಿನಲ್ಲಿರುವ ಅತಿ ಹಳೆಯ ಬಂದರು.
  3. ವಿಶಾಖಪಟ್ಟಣ – ಇದೊಂದು ಭೂಭಾಗದಿಂದ ಸುತ್ತುವರೆದ ಆಳವಾದ ಮತ್ತು ಸಂರಕ್ಷಿತ ಬಂದರು. ಇದನ್ನು ಆಂಧ್ರಪ್ರದೇಶದ ಕರಾವಳಿಯಲ್ಲಿ ಕಾಣಬಹುದು.
  4. ಪಾರಾದೀಪ್ – ಒಡಿಸ್ಸಾದ ಮಹಾನದಿ ಮುಖ ಭಾಗದಲ್ಲಿರುವ ಬಂದರು.
  5. ಹಾಲ್ದಿಯಾ – ಇದು ಹೂಗ್ಲಿ ಮತ್ತು ಹಾಲ್ದಿ ನದಿಗಳ ಸಂಗಮ ಸ್ಥಳದಲ್ಲಿ ನೆಲೆಸಿದೆ (ಪಶ್ಚಿಮ ಬಂಗಾಳ)
  6. ಕೊಲ್ಕತ್ತಾ – ಹೂಗ್ಲಿ ನದಿಯ ಎಡ ದಂಡೆಯಲ್ಲಿದ್ದು, ಭಾರತದ ನದಿ ದಂಡೆಯ ಬಂದರಾಗಿದೆ. ಇದು ಭಾರತದ 2ನೇ ದೊಡ್ಡ ಬಂದರು. ಇದನ್ನು ಚಹಾದ ಬಂದರು ಎಂದು ಕರೆಯುತ್ತಾರೆ.
  7. ಪೋರ್ಟ್ ಬ್ಲೇರ್ – ಇದು ಭಾರತದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದಾದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿದೆ.

117) ಭಾರತದಲ್ಲಿ ಪ್ರಾರಂಭಿಸಲ್ಪಟ್ಟ ಮೊದಲ ರೈಲುಮಾರ್ಗ

(1) ಕೋಲ್ಕತ್ತಾದಿಂದ ರಾಣಿಗಂಜ್‌ವರೆಗೂ
(2) ಚೆನ್ನೈಯಿಂದ ಅರಕೋಣಂವರೆಗೂ
(3) ಬೆಂಗಳೂರಿನಿಂದ ಚೆನ್ನೈವರೆಗೂ
(4) ಮುಂಬಯಿಯಿಂದ ಥಾಣಾದವರೆಗೂ

Ans: (4)

- ರೈಲು ಸಾರಿಗೆ ಭಾರತದ ಪ್ರಮುಖ ಭೂಸಾರಿಗೆ ಮಾಧ್ಯಮ. ಭಾರತದ ಪ್ರಥಮ ರೈಲು ಮಾರ್ಗವು 1853ರಲ್ಲಿ ಮುಂಬೈ ಮತ್ತು ಥಾಣೆಗಳ ನಡುವೆ ನಿರ್ಮಾಣಗೊಂಡಿತು. ತರುವಾಯ ಕೋಲ್ಕತ್ತಾ – ರಾಣಿ ಗಂಜ್ (1854) ಮದ್ರಾಸ್ – ಅರ್ಕೊನಾಮ್ (1864) ರೈಲು ಮಾರ್ಗಗಳು ನಿರ್ಮಾಣಗೊಂಡವು.
- ರೈಲು ಸಾರಿಗೆಯು ಭಾರತದ ಅತಿ ದೊಡ್ಡ ಸಾರ್ವಜನಿಕ ಉದ್ದಿಮೆ. ಇಂದು ದೇಶದಲ್ಲಿ 64,015 ಕಿ.ಮೀ. ಉದ್ದದ ರೈಲು ಮಾರ್ಗಗಳಿದ್ದು ಸುಮಾರು 7031 ರೈಲು ನಿಲ್ದಾಣಗಳಿವೆ. ಸಮರ್ಥನೀಯ

ಆಡಳಿತ ವ್ಯವಸ್ಥೆಗಾಗಿ ಭಾರತೀಯ ರೈಲ್ವೆಯನ್ನು 17 ವಲಯಗಳನ್ನಾಗಿ ವಿಂಗಡಿಸಲಾಗಿದೆ.

118) 'ನವಸೇವಾ' ಬಂದರಿನ ನಿರ್ಮಾಣದಿಂದ ಆಗಿರುವ ಮುಖ್ಯ ಪರಿಣಾಮ:

(1) ಮುಂಬೈ ಬಂದರಿನ ಸಾರಿಗೆ ಒತ್ತಡ ಕಡಿಮೆಯಾಗಿದೆ.

(2) ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರೋತ್ಸಾಹಿಸಿದಂತಾಗಿದೆ.

(3) ಮುಂಬೈ ಬಂದರಿನ ಹಿನ್ನಾಡು ಕಡಿಮೆಯಾಗಿದೆ

(4) ವಿದೇಶಿಯರು ನುಸುಳಲು ಸಹಕಾರಿಯಾಗಿದೆ.

Ans: (1)

- ನವ್ಹಾಶೇವ್ ಬಂದರು – ಇದನ್ನು ಪ್ರಸ್ತುತ ಜವಹರಲಾಲ್ ನೆಹರು ಬಂದರು ಎಂದು ಕರೆಯುತ್ತಾರೆ. ಇದು ಮುಂಬೈ ನಗರದಿಂದ 10 ಕಿ.ಮೀ ದೂರದಲ್ಲಿರುವ ಎಲಿಫೆಂಟಾ ಗುಹೆಗಳಿಗೆ ಸಮೀಪದಲ್ಲಿದೆ. ಮುಂಬೈ ಬಂದರಿನ ಒತ್ತಡವನ್ನು ಕುಗ್ಗಿಸಲು ಈ ಬಂದರನ್ನು ನಿರ್ಮಿಸಲಾಗಿದೆ. ಇದು ಪಶ್ಚಿಮ ತೀರದ ಪ್ರಮುಖ ಬಂದರಾಗಿದೆ.

119) ಬೇರೆ ದೇಶಗಳಿಗೆ ರಫ್ತಾಗಿ ನಮ್ಮ ದೇಶದ ವಿದೇಶೀ ವಿನಿಮಯಕ್ಕೆ ಹೆಚ್ಚು ಗಳಿಕೆ ಸಿಗುತ್ತಿರುವ ಕೃಷಿ ಉತ್ಪನ್ನಗಳಿವು.

(1) ಸೆಣಬು, ಚಹ, ಹೂವು, ರೇಷ್ಮೆ

(2) ಸೆಣಬು, ತರಕಾರಿ, ಜೋಳ ಭತ್ತ

(3) ಸೆಣಬು, ಹತ್ತಿ, ಕಬ್ಬು, ಗೋಧಿ

(4) ಸೆಣಬು, ಹತ್ತಿ ಕಾಫಿ, ಸಾಂಬಾರ ಪದಾರ್ಥ

Ans: (4)

- ಸೆಣಬಿನ ವೈಜ್ಞಾನಿಕ ಹೆಸರು ಕಾರ್ ಕೋರಸ್ ಕ್ಯಾಪ್ಸುಲಾರಿನ್. ಇದನ್ನು ಚಿನ್ನದ ಎಳೆ ಎಂದು ಕರೆಯುತ್ತಾರೆ. ಸೆಣಬು ಉತ್ಪಾದನೆಯಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದೆ. ಸೆಣಬಿನ ರಫ್ತುಗಳ ಮೂಲಕ ಅತಿ ಮುಖ್ಯವಾದ ವಿದೇಶಿ ವಿನಿಮಯವನ್ನು ಭಾರತ ಗಳಿಸುತ್ತದೆ.
- ಹತ್ತಿಯ ವೈಜ್ಞಾನಿಕ ಹೆಸರು ಗಾಸಿಪ್ಪಿಯಂ. ಹತ್ತಿಯ ಉತ್ಪಾದನೆಯಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದೆ. ಇದನ್ನು ಕಪ್ಪು ಮಣ್ಣಿನಲ್ಲಿ ಬೆಳೆಯಲಾಗುತ್ತಿದ್ದು ಕಪ್ಪು ಮಣ್ಣನ್ನು ಕಾಟನ್ ಸಾಯಿಲ್ ಎಂದು ಕರೆಯುತ್ತಾರೆ.
- ಕಾಫಿಯ ವೈಜ್ಞಾನಿಕ ಹೆಸರು ಕಾಫಿಯೇ. ಇದು ಕೆಫಿನ್ ಎಂಬ ವಸ್ತುವನ್ನು ಒಳಗೊಂಡಿದೆ. ಇದರ ಎರಡು ವಿಧಗಳು ರೋಬುಸ್ಟಾ ಮತ್ತು ಅರೇಬಿಕ್.
- ಭಾರತದಲ್ಲಿ ಕರ್ನಾಟಕದಲ್ಲಿ ಅತಿ ಹೆಚ್ಚು ಕಾಫಿಯನ್ನು ಬೆಳೆಯಲಾಗುತ್ತದೆ.

120) ವಿದ್ಯಾರ್ಥಿಯೊಬ್ಬ ಪೆನ್ನು ಕೊಂಡು ಬಳಸುತ್ತಾನೆ. ಇದು ಯಾವ ಬಗೆಯ ಆರ್ಥಿಕ ಚಟುವಟಿಕೆ?

(1) ಉತ್ಪಾದಕ ಚಟುವಟಿಕೆ

(2) ವಿನಿಮಯ ಚಟುವಟಿಕೆ

(3) ಅನುಭೋಗಿ ಚಟುವಟಿಕೆ

(4) ವಿತರಣಾ ಚಟುವಟಿಕೆ

Ans: (3)

- ಆರ್ಥಿಕ ಚಟುವಟಿಕೆಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಲಾಗುತ್ತದೆ. ಅವುಗಳೆಂದರೆ ಉತ್ಪಾದನೆ, ಅನುಭೋಗ, ವಿನಿಮಯ ಮತ್ತು ವಿತರಣೆ.
- ಅನುಭೋಗ – ಸರಕುಗಳನ್ನು ಮತ್ತು ಸೇವೆಗಳನ್ನು ಮಾನವ ಬಳಸಿಕೊಂಡು ತನ್ನ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುತ್ತಾನೆ ಇದನ್ನು ಅನುಭೋಗ ಎಂದು ಕರೆಯುತ್ತೇವೆ.

121) ಭಾರತದಂತಹ ರಾಷ್ಟ್ರದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಅತ್ಯವಶ್ಯಕ. ಕಾರಣ?

(1) ವೈವಿಧ್ಯದಲ್ಲಿ ಏಕತೆಯನ್ನು ರೂಪಿಸಲು

(2) ಮೀಸಲಾತಿಯನ್ನು ಮುಂದುವರಿಸಿಕೊಂಡು ಹೋಗಲು

(3) ಸಂಸ್ಕೃತಿಯನ್ನು ರಕ್ಷಿಸಲು

(4) ವಿದೇಶಿ ಸಂಸ್ಕೃತಿಯ ಅನುಕರಣೆ ತಡೆಗಟ್ಟಲು

Ans: (1)

- ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ರಾಷ್ಟ್ರ ಭಾರತ.
- ವಿವಿಧ ಭಾಷೆ, ಸಂಸ್ಕೃತಿ, ಧರ್ಮಗಳಲ್ಲಿ ನಂಬಿಕೆ ಇಟ್ಟಿರುವ ಜನ ಜನ ಸಮುದಾಯದ ಜೀವನ ವಿಧಾನವನ್ನು ಬಹು ಸಂಸ್ಕೃತಿ ಅಥವಾ ಬಹುತ್ವ ಎಂದು ಕರೆಯಲಾಗುತ್ತದೆ. ಭಾರತ ವೈವಿಧ್ಯಮಯ ರಾಷ್ಟ್ರವಾಗಿದ್ದು, ಭೌಗೋಳಿಕವಾಗಿ ಭಿನ್ನತೆಯನ್ನು ಹೊಂದಿರುವ ದೇಶ. ಪ್ರತಿಯೊಬ್ಬ ಪ್ರಜೆಯೂ ತನಗಿಷ್ಟಬಂದ ಧರ್ಮವನ್ನು ಅನುಸರಿಸಬಹುದು, ಪ್ರಾದೇಶಿಕ ಭಾಷೆಗಳಲ್ಲಿ ಮಾತನಾಡಿ ಸಾಮಾಜಿಕ ಜೀವನದಲ್ಲಿ ಬೆರೆಯಬಹುದು. ಹಾಗಾಗಿ ಭಾರತದಲ್ಲಿ ಈ ಹಲವು ಭಿನ್ನತೆಗಳಿಂದ ವಾಸಿಸುವ ಜನರು ಐಕ್ಯತೆಯಿಂದ ಇರುವುದರಿಂದ ಬಹುತ್ವದಲ್ಲಿ ಏಕತೆಯನ್ನು ಕಾಣಬಹುದು.

122) 'ಭಾರತೀಯ ಪತ್ರಿಕಾ ಪರಿಷತ್ತು' ಸಂಸ್ಥೆಯ ಉದ್ದೇಶ ಏನೆಂದರೆ

(1) ಪತ್ರಿಕೆಗಳ ಪ್ರಸಾರ ಸಂಖ್ಯೆ ಹೆಚ್ಚಿಸುವುದು

(2) ನಿಯತಕಾಲಿಕೆಗಳ ಮುದ್ರಣ

(3) ಪತ್ರಿಕಾ ಸ್ವಾತಂತ್ರ್ಯ ರಕ್ಷಣೆಗಾಗಿ

(4) ನಿಯತಕಾಲಿಕೆಗಳ ಪ್ರಸಾರ ಸಂಖ್ಯೆಯನ್ನು ಹೆಚ್ಚಿಸುವುದಕ್ಕಾಗಿ

Ans: (3)

- ಪತ್ರಿಕಾ ಸ್ವಾತಂತ್ರ್ಯವನ್ನು ಪರಿರಕ್ಷಿಸುವ ಮತ್ತು ಭಾರತದಲ್ಲಿನ ವೃತ್ತಪತ್ರಿಕೆಗಳ ಮತ್ತು ಸುದ್ದಿ ಏಜೆನ್ಸಿಗಳ ಗುಣಮಟ್ಟಗಳನ್ನು ಕಾಪಾಡಿಕೊಂಡು ಬರುವ ಮತ್ತು ಸುಧಾರಿಸುವ ಉದ್ದೇಶಕ್ಕಾಗಿ ಪತ್ರಿಕಾ ಪರಿಷತ್ತು ಅಧಿನಿಯಮ ಸ್ಥಾಪಿಸಲಾಗಿದೆ.
- ಅಖಿಲಭಾರತ ಪತ್ರಿಕಾ ಸಂಪಾದಕರ ಪರಿಷತ್ತು: ಭಾರತ ಸರ್ಕಾರ 1940 ಅಕ್ಟೋಬರ್ 26ನೆಯ ತಾರೀಕು ಭಾರತದ ಪತ್ರಿಕೆಗಳ ಮೇಲೆ, ಬಿಗಿಯಾದ ಮತ್ತು ಭೀತಿ ಹುಟ್ಟಿಸುವ ನಿಷೇಧಾಜ್ಞೆಯನ್ನು ಜಾರಿಮಾಡಿತು. ಸರ್ಕಾರದ ಈ ನಿಷೇಧಾಜ್ಞೆಯಿಂದ ಸ್ವಾತಂತ್ರ್ಯಹೋರಾಟದ ಸುದ್ದಿಗಳನ್ನು ಪ್ರಚಾರ ಮಾಡುವುದು ಸಾಧ್ಯವಿರಲಿಲ್ಲ. ಅದು ಪತ್ರಿಕಾಸ್ವಾತಂತ್ರ್ಯಕ್ಕೆ ಕೊಡಲಿ ಪೆಟ್ಟನ್ನು ಹಾಕಿದಂತಾಗಿತ್ತು. ಈ ಎಲ್ಲ ಸಮಸ್ಯೆಗಳನ್ನು ಸರ್ಕಾರದೊಂದಿಗೆ ಸಮಾಲೋಚನೆಮಾಡಿ ಒಂದು ತೀರ್ಮಾನಕ್ಕೆ ಬರಲು, ಭಾರತದ ಪತ್ರಿಕೆಗಳ ಸಂಪಾದಕರು ಒಂದೆಡೆ ಸೇರಿದರು. ಆ ಒಕ್ಕೂಟವೇ ಅಖಿಲಭಾರತ ಪತ್ರಿಕಾಸಂಪಾದಕರ ಪರಿಷತ್ತಾಗಿ ಮಾರ್ಪಾಡಾಯಿತು.

123) ರಾಜ್ಯಪಾಲರ ಪ್ರಮುಖ ಕರ್ತವ್ಯಗಳಲ್ಲಿ ಇದು ಒಂದಾಗಿದೆ.

(1) ವಿಧಾನ ಪರಿಷತ್‌ಗೆ ಎಂಟನೇ ಒಂದರಷ್ಟು ಸದಸ್ಯರನ್ನು ನೇಮಿಸುವ ಅಧಿಕಾರವಿದೆ.

(2) ರಾಜ್ಯದಲ್ಲಿ ಸುಗ್ರೀವಾಜ್ಞೆಯನ್ನು ಹೊರಡಿಸುವ ಅಧಿಕಾರವಿದೆ

(3) ಸುಪ್ರೀಂಕೋರ್ಟ್ ನ್ಯಾಯಾಧೀಶರ ನೇಮಕಾತಿಗೆ ಸಲಹೆ ನೀಡುವ ಅಧಿಕಾರವಿದೆ.

(4) ರಾಜ್ಯಸಭೆಯ ಅಧ್ಯಕ್ಷರನ್ನು ನೇಮಿಸುವ ಅಧಿಕಾರವಿದೆ.

Ans: (2)

ರಾಜ್ಯಪಾಲರು – 153ನೇ ವಿಧಿ ರಾಜ್ಯಪಾಲರ ಸ್ಥಾನದ ಕುರಿತು ಮಾಹಿತಿ ನೀಡುತ್ತದೆ. ಇವರನ್ನು ರಾಜ್ಯದ ಪ್ರಥಮ ಪ್ರಜೆ ಎಂದು ಕರೆಯುತ್ತಾರೆ. ರಾಜ್ಯಪಾಲರ ಅಧಿಕಾರ ಮತ್ತು ಕಾರ್ಯಗಳು ಈ ಕೆಳಗಿನಂತಿವೆ,

1. ರಾಜ್ಯದ ಮುಖ್ಯಮಂತ್ರಿ ಮತ್ತು ಅವರ ಸಲಹೆ ಮೇರೆಗೆ ಇತರ ಮಂತ್ರಿಗಳನ್ನು ನೇಮಿಸುವುದು. ರಾಜ್ಯ ಲೋಕಸಭಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು ಮತ್ತು ಇನ್ನೀತರ ಅಧಿಕಾರಿಗಳನ್ನು ನೇಮಿಸುವ ಅಧಿಕಾರ.
2. ಅದಿವೇಶನ ಕರೆಯುವ ಮತ್ತು ಮುಂದೂಡುವ ಹಾಗೂ ಮುಖ್ಯಮಂತ್ರಿಯ ಶಿಫಾರಸ್ಸಿನ ಮೇರೆಗೆ ವಿಧಾನಸಭೆಯನ್ನು ವಿಸರ್ಜಿಸುವ ಅಧಿಕಾರ. ಶಾಸಕಾಂಗ ಅಂಗೀಕರಿಸದ ಮಸೂದೆಗೆ ತಮ್ಮ ಅಂಕಿತವನ್ನು ಹಾಕುವ ಮತ್ತು ತಡೆಹಿಡುವ ಹಾಗೂ ಅವಶ್ಯವಿದ್ದಲ್ಲಿ ರಾಷ್ಟ್ರಪತಿಯ ಅಂಕಿತಕ್ಕೂ ಕಳಿಸುವುದು. ರಾಜ್ಯದ ಹಣಕಾಸು ಆಯೋಗ ನೇಮಿಸುವ ಅಧಿಕಾರ ಹಾಗೂ ಹಣಕಾಸು ಮಸೂದೆಯ ಮೇಲೆ ಅಧಿಕಾರ.
3. ಅಪರಾಧ ಮಾಡಿದ ಶಿಕ್ಷೆಗೆ ಗುರಿ ಆದವರಿಗೆ ಕ್ಷಮಾದಾನ ನೀಡುವ ಅಥವಾ ಕಡಿಮೆ ಮಾಡುವ ಅಥವಾ ಮುಂದೂಡುವ ಅಥವಾ ಶಿಕ್ಷೆಯನ್ನು ಬದಲಾಯಿಸುವ ಅಧಿಕಾರ.
4. ಬಹುಮತವಿಲ್ಲದೆ ಇದ್ದಾಗ ಮುಖ್ಯಮಂತ್ರಿಯನ್ನು ನೇಮಿಸುವಾಗ ವಿವೇಚನಾಧಿಕಾರ.

124) ನಮ್ಮ ರಾಷ್ಟ್ರವನ್ನು ಗಣರಾಜ್ಯವೆಂದು ಕರೆಯಲು ಕಾರಣ:

(1) ನಮ್ಮ ರಾಷ್ಟ್ರವು ವಿವಿಧ ರಾಜ್ಯಗಳಿಂದ ಕೂಡಿರುವುದರಿಂದ

(2) ನಮ್ಮ ರಾಷ್ಟ್ರವನ್ನು ಪ್ರಧಾನಮಂತ್ರಿ ಆಳ್ವಿಕೆ ಮಾಡುವುದರಿಂದ

(3) ನಮ್ಮ ರಾಷ್ಟ್ರವು ಕೇಂದ್ರಾಡಳಿತ ಪ್ರದೇಶಕ್ಕೆ ಒಳಪಡುವುದರಿಂದ

(4) ನಮ್ಮ ರಾಷ್ಟ್ರದ ರಾಷ್ಟ್ರಧ್ಯಕ್ಷರು ಚುನಾಯಿಸಲ್ಪಡುವುದರಿಂದ

Ans: (4)

- ಸಂವಿಧಾನವು ಭಾರತವನ್ನು ಗಣತಂತ್ರ ರಾಜ ಎಂದು ಸಾರುತ್ತದೆ ಏಕೆಂದರೆ ಪ್ರಜೆಗಳಿಂದ ಪರೋಕ್ಷವಾಗಿ ನಿಗದಿತ ಅವಧಿಗಾಗಿ ಆಯ್ಕೆಯಾದ ರಾಷ್ಟ್ರದ ಮುಖ್ಯಸ್ಥರನ್ನು ಹೊಂದಿರುತ್ತದೆ. ಭಾರತದ ರಾಷ್ಟ್ರಪತಿ ದೇಶದ ಸಂವಿಧಾನದ ಮುಖ್ಯಸ್ಥರಾಗಿದ್ದು ಅವರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ ಆದ್ದರಿಂದ ಇದನ್ನು ಗಣರಾಜ್ಯ ಎಂದು ಕರೆಯುತ್ತೇವೆ.

125) ಮಾರುಕಟ್ಟೆಯ ಎರಡು ಆಧಾರ ಸ್ತಂಭಗಳೆಂದರೆ

(1) ಮಾರಾಟಗಾರರು ಮತ್ತು ದಲ್ಲಾಳಿಗಳು

(2) ಬೇಡಿಕೆ ಮತ್ತು ಪೂರೈಕೆದಾರರು

(3) ಕೊಳ್ಳುವವರು ಮತ್ತು ದಲ್ಲಾಳಿಗಳು

(4) ಉತ್ಪಾದಕರು ಮತ್ತು ಗ್ರಾಹಕರು

Ans: (2)

- ವ್ಯವಹಾರ ಮುಖ್ಯವಾಗಿ ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ಅವುಗಳನ್ನು ಗ್ರಾಹಕರಿಗೆ ಒದಗಿಸುವ ಚಟುವಟಿಕೆಯಾಗಿದೆ. ಇಲ್ಲಿ ಅನುಭೋಗಿಗಳ ಬೇಡಿಕೆಯ ಆಧಾರದ ಮೇಲೆ

ಸರಕು ಮತ್ತು ಸೇವೆಗಳನ್ನು ಪೂರೈಸಲಾಗುತ್ತದೆ ಆದ್ದರಿಂದ ಮಾರುಕಟ್ಟೆ ಎರಡು ಆಧಾರ ಸ್ತಂಭಗಳು ಬೇಡಿಕೆ ಮತ್ತು ಪೂರೈಕೆದಾರರು.

126) ಭಾರತ ಸಂವಿಧಾನ ರಚನಾ ಸಮಿತಿಯಲ್ಲಿ ಕರ್ನಾಟಕದಿಂದ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸಿದವರು

(1) ಬಿ.ಡಿ.ಜತ್ತಿ (2) ಹೆಚ್.ಡಿ.ದೇವೆಗೌಡ
(3) ಎಸ್.ನಿಜಲಿಂಗಪ್ಪ (4) ವೀರೇಂದ್ರ ಪಾಟೀಲ್

Ans: (3)

- ವಿಶಾಲ ಏಕೀಕೃತ ಮೈಸೂರು ರಾಜ್ಯದ ಮುಖ್ಯಮಂತ್ರಿಯಾದ ಎಸ್. ನಿಜಲಿಂಗಪ್ಪನವರು ಬಾಂಬೆ ಪ್ರಾಂತ್ಯದಿಂದ ಭಾಗವಹಿಸಿದ್ದರು.
- ಸಂವಿಧಾನ ರಚನೆಯ ಮೊದಲ ಸಭೆ 1946 ಡಿಸೆಂಬರ್ 9 ರಂದು ನಡೆಯಿತು.
- ಸಂವಿಧಾನ ರಚನಾ ಸಭೆಯ ಹಂಗಾಮಿ ಅಧ್ಯಕ್ಷರು ಸಚ್ಚಿದಾನಂದ ಸಿನ್ಹಾ
- ಡಾ. ಬಾಬು ರಾಜೇಂದ್ರ ಪ್ರಸಾದ್ ಅವರು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು.
- ಡಾ.ಬಿ.ಆರ್. ಅಂಬೇಡ್ಕರ್ ರವರು ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದರು.

127) ಸಾಮಾನ್ಯವಾಗಿ ರಾಜ್ಯದ ವಿಧಾನ ಪರಿಷತ್ತಿನ ಸಂಖ್ಯಾಬಲ:

(1) ವಿಧಾನಸಭೆಯ ಸದಸ್ಯರ ಸಂಖ್ಯೆಯ ಅರ್ಧದಷ್ಟು
(2) ವಿಧಾನಸಭೆಯ ಸದಸ್ಯರ $1/3$ ರಷ್ಟು
(3) ವಿಧಾನಸಭೆಯ ಸದಸ್ಯರ $1/4$ ರಷ್ಟು
(4) ವಿಧಾನಸಭೆಯ ಸದಸ್ಯರು ಸಂಖ್ಯೆಯಷ್ಟೇ

Ans: (2)

- ರಾಜ್ಯ ಶಾಸಕಾಂಗದ ಮೇಲ್ಮನೆಯನ್ನು ವಿಧಾನ ಪರಿಷತ್ ಎಂದು ಕರೆಯುತ್ತಾರೆ.
- ಇದರ ಸದಸ್ಯರ ಗರಿಷ್ಠ ಸಂಖ್ಯೆಯು ಆ ರಾಜ್ಯದ ವಿಧಾನಸಭಾ ಸದಸ್ಯರ ಮೂರನೇ ಒಂದು ಭಾಗದಷ್ಟು ಇರುತ್ತದೆ. ಆದರೆ 40ಕ್ಕಿಂತ ಕಡಿಮೆ ಇರಬಾರದು.
- ಕರ್ನಾಟಕದ ವಿಧಾನ ಪರಿಷತ್ ಸದಸ್ಯರ ಸಂಖ್ಯೆ 75. ಈ ಸದಸ್ಯರು 5 ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ.
- ವಿಧಾನಸಭಾ ಸದಸ್ಯರಿಂದ, ಸ್ಥಳೀಯ ಸಂಸ್ಥೆಗಳಿಂದ, ಪದವೀಧರ ಕ್ಷೇತ್ರದಿಂದ, ಶಿಕ್ಷಕರ ಕ್ಷೇತ್ರದಿಂದ ಚುನಾಯಿಸಲ್ಪಟ್ಟರೆ, ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಸೇವೆ, ವಿಜ್ಞಾನ ಮತ್ತು ಸಹಕಾರ ಚಳುವಳಿ ಕ್ಷೇತ್ರಗಳಲ್ಲಿನ ಸೇವೆಯನ್ನು ಪರಿಗಣಿಸಿ ರಾಜ್ಯಪಾಲರು ನಾಮಕರಣ ಮಾಡುತ್ತಾರೆ.
- ವಿಧಾನ ಪರಿಷತ್ತು ಖಾಯಂ ಸದನವಾಗಿರುತ್ತದೆ.

128) ಭಾರತದಲ್ಲಿ ರಾಷ್ಟ್ರಪತಿಯಾಗಲು ಇರಬೇಕಾದ ಅಹರ್ತೆಗಳು:

(1) 35 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟಿರಬೇಕು
(2) 50 ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟಿರಬೇಕು
(3) ಭಾರತದ ಪ್ರಜೆಯಾಗಿರಬೇಕು
(4) ಪಾಂಡಿತ್ಯ ಹೊಂದಿರ ವ್ಯಕ್ತಿಯಾಗಿರಬೇಕು

ii) ಭಾರತ ಸರ್ಕಾರದಲ್ಲಿ ಯಾವುದೇ ಲಾಭದಾಯಕ ಹುದ್ದೆ ಹೊಂದಿರಬಾರದು

ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಉತ್ತರವನ್ನು ಆಯ್ಕೆ ಮಾಡಿ

(1) ಎ, ಸಿ ಮತ್ತು ಇ ಯ ವಿವರಣೆಗಳು ಸರಿ
(2) ಬಿ, ಸಿ ಮತ್ತು ಇ ರ ವಿವರಣೆಗಳು ಸರಿ
(3) ಎ, ಸಿ ಮತ್ತು ಡಿ ರ ವಿವರಣೆಗಳು ಸರಿ

(4) ಬಿ, ಡಿ ಮತ್ತು ಇ ರ ವಿವರಣೆಗಳು ಸರಿ

Ans: (1)

- ಭಾರತದ ರಾಷ್ಟ್ರಪತಿಗಳು – ನಮ್ಮ ಸಂವಿಧಾನದ 52ನೇ ವಿಧಿಯು ರಾಷ್ಟ್ರಪತಿ ಸ್ಥಾನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಭಾರತದ ರಾಷ್ಟ್ರಪತಿಯವರು ಸಂವಿಧಾನದ ಮುಖ್ಯಸ್ಥರು ಮತ್ತು ರಾಷ್ಟ್ರದ ಪ್ರಥಮ ಪ್ರಜೆ ಹಾಗೂ ಕಾರ್ಯಾಂಗದ ನಾಮ ಮಾತ್ರ ಮುಖ್ಯಸ್ಥರಾಗಿದ್ದು ಮೂರು ಸೇನಾ ಪಡೆಗಳ ಮಹಾದಂಡ ನಾಯಕರಾಗಿರುತ್ತಾರೆ.
- ಸಂವಿಧಾನದ 54 ಮತ್ತು 55ನೇ ವಿಧಿಯಲ್ಲಿ ರಾಷ್ಟ್ರಪತಿಯವರನ್ನು ಚುನಾಯಿಸುವ ವಿಧಾನವನ್ನು ಅಳವಡಿಸಲಾಗಿದೆ.
- ರಾಷ್ಟ್ರಪತಿಯವರನ್ನು ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರು, ಎಲ್ಲ ರಾಜ್ಯಗಳ ಮತ್ತು ದೆಹಲಿ, ಪುದುಚೆರಿ ವಿಧಾನಸಭಾ ಚುನಾಯಿತ ಸದಸ್ಯರಿಂದ ಕೂಡಿದ ಮತದಾರ ವರ್ಗ ಚುನಾಯಿಸುತ್ತದೆ.
- ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರು ರಾಷ್ಟ್ರಪತಿಗೆ ಪ್ರಮಾಣವಚನ ಬೋಧಿಸುತ್ತಾರೆ.
- ಇವರ ಅಧಿಕಾರವಧಿ ಐದು ವರ್ಷ.
- ರಾಷ್ಟ್ರಪತಿಯಾಗಲು ಅರ್ಹತೆಗಳು
  1. ಭಾರತದ ಪ್ರಜೆಯಾಗಿರಬೇಕು
  2. ಕನಿಷ್ಠ 35 ವರ್ಷ ವಯೋಮಿತಿಯನ್ನು ಹೊಂದಿರಬೇಕು
  3. ಲೋಕಸಭೆಯ ಸದಸ್ಯರಾಗಲು ಅರ್ಹತೆ ಹೊಂದಿರಬೇಕು
  4. ಯಾವುದೇ ಲಾಭದಾಯಕ ಹುದ್ದೆಯಲ್ಲಿ ಇರಬಾರದು

129) ದ್ವಿಸದನಗಳ ಶಾಸನ ಸಭೆಯನ್ನು ಹೊಂದಿರುವ ರಾಜ್ಯಗಳು

(1) ಪಶ್ಚಿಮ ಬಂಗಾಳ, ಪಂಜಾಬ್, ಉತ್ತರ ಪ್ರದೇಶ, ಮಧ್ಯಪ್ರದೇಶ

(2) ಗುಜರಾತ್, ಮಹಾರಾಷ್ಟ್ರ, ತಮಿಳುನಾಡು, ಗೋವಾ

(3) ಓಡಿಶಾ, ಪಶ್ಚಿಮ ಬಂಗಾಳ, ಮೇಘಾಲಯ, ತಮಿಳುನಾಡು

(4) ಬಿಹಾರ, ಕರ್ನಾಟಕ, ಮಹಾರಾಷ್ಟ್ರ, ಜಮ್ಮು ಮತ್ತು ಕಾಶ್ಮೀರ

Ans: (4)

- ಸಂವಿಧಾನದ 169ನೇ ವಿಧಿಯು ವಿಧಾನ ಪರಿಷತ್ತನ್ನು ಸ್ಥಾಪಿಸುವ ಮತ್ತು ರದ್ದು ಮಾಡುವ ಅಧಿಕಾರದ ಕುರಿತು ತಿಳಿಸುತ್ತದೆ.
- ಸದ್ಯಕ್ಕೆ ಕೇವಲ 5 ರಾಜ್ಯಗಳು ವಿಧಾನ ಪರಿಷತ್ ಹೊಂದಿವೆ. ಅವುಗಳೆಂದರೆ
- 1.ಬಿಹಾರ 2. ಕರ್ನಾಟಕ 3. ಮಹಾರಾಷ್ಟ್ರ 4. ತೆಲಂಗಾಣ 5. ಉತ್ತರಪ್ರದೇಶ
- ವಿಧಾನಸಭೆ ಸದಸ್ಯರ ಅರ್ಹತೆಗಳು
  1. ಭಾರತದ ಪ್ರಜೆಯಾಗಿರಬೇಕು
  2. 30 ವರ್ಷ ವಯಸ್ಸಾಗಿರಬೇಕು
  3. ಯಾವುದೇ ಲಾಭದಾಯಕ ಹುದ್ದೆಯನ್ನು ಹೊಂದಿರಬಾರದು
  4. ದಿವಾಳಿ ಕೋರನಾಗಿರಬಾರದು

130) ನಮ್ಮ ರಾಷ್ಟ್ರೀಯ ಧ್ಯೇಯವಾಕ್ಯ 'ಸತ್ಯಮೇವ ಜಯತೇ' ಎಂಬುದನ್ನು ಇದರಿಂದ ಆಯ್ದುಕೊಳ್ಳಲಾಗಿದೆ.

(1) ಕಠೋಪನಿಷತ್ತು (2) ಮುಂಡಕ ಉಪನಿಷತ್ತು

(3) ಋಗ್ ವೇದ (4) ಯಜುರ್ವೇದ

Ans: (2)

- ಭಾರತ ಸರ್ಕಾರವು ನಮ್ಮ ರಾಷ್ಟ್ರ ಲಾಂಛನವನ್ನು 26 ಜನವರಿ 1950ರಂದು ಅಂಗೀಕರಿಸಿತು. ಪೀಠದ ಕೆಳಗೆ ದೇವನಾಗಿರಿ ಲಿಪಿಯಲ್ಲಿ ಬರೆದ ಸತ್ಯಮೇವ ಜಯತೆ ಅಂದರೆ ಸತ್ಯವೊಂದೇ ಗೆಲ್ಲುತ್ತದೆ ಎಂಬ ಮುಂಡಕ್ ಉಪನಿಷತ್ತಿನ ವಾಕ್ಯವಿದೆ.
- ಸಾರಾನಾಥದ ಅಶೋಕನ ಶಿಲಾ ಸ್ತಂಭದ ಬೋದಿಗೆಯ ರೂಪಾಂತರವೇ ನಮ್ಮ ರಾಷ್ಟ್ರ ಲಾಂಛನ. ಲಾಂಛನದಲ್ಲಿ ಸಿಂಹಗಳು ಇರುವುದರಿಂದ ಇದನ್ನು ಸಿಂಹ ಬೋದಿಗೆ ಎನ್ನುವರು.
- ನಮ್ಮ ರಾಷ್ಟ್ರ ಲಾಂಛನ ಅಥವಾ ಮುದ್ರೆ ಮೂಲ ಶಿಲ್ಪಾಕೃತಿಯಲ್ಲಿ ನಾಲ್ಕು ಸಿಂಹಗಳು ನಾಲ್ಕು ದಿಕ್ಕುಗಳಿಗೆ ಮುಖ ಮಾಡಿ ಒಂದಕ್ಕೊಂದು ಬೆನ್ನು ಮಾಡಿ ಪೀಠ ಒಂದರ ಮೇಲೆ ನಿಂತಿವೆ.ಪೀಠವು ಗುಂಡಾಗಿದೆ ಅದರ ನಾಲ್ಕು ದಿಕ್ಕುಗಳಲ್ಲೂ ಒಂದೊಂದು ಚಕ್ರವಿದೆ. ಆ ಚಕ್ರಗಳ ನಡುವೆ ಆನೆ, ಗೂಳಿ, ಕುದುರೆ ಮತ್ತು ಸಿಂಹಗಳ ಚಿತ್ರಣವಿದೆ. ಪೀಠದಲ್ಲಿರುವ ಚಕ್ರವನ್ನು ಧರ್ಮ ಚಕ್ರ ಎಂದು ಕರೆಯುತ್ತಾರೆ.

131) ಇತಿಹಾಸ ಬೋಧನೆಯ ಸಾಮಾನ್ಯ ಉದ್ದೇಶ:

(1) ಉತ್ತಮ ಪೌರತ್ವದ ಲಕ್ಷಣಗಳನ್ನು ಬೆಳೆಸುವುದು

(2) ಭೂಮಿಯ ಅಧ್ಯಯನದ ಬಗ್ಗೆ ಆಸಕ್ತಿಯನ್ನು ಹೆಚ್ಚಿಸುವುದು

(3) ವಿದ್ಯಾರ್ಥಿಗಳಲ್ಲಿ ಪೌರತ್ವದ ಪ್ರಜ್ಞೆಬೆಳೆಸುವುದು

(4) ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ಚಿಂತನಾ ಶಕ್ತಿ ಹೆಚ್ಚಿಸುವುದು

Ans: (4)

ಇತಿಹಾಸ ಬೋಧನೆಯ ಮುಖ್ಯ ಉದ್ದೇಶಗಳು

1. ಮಕ್ಕಳಲ್ಲಿ ಸ್ಮರಣೆ ಮತ್ತು ಜಾಗರೂಕತೆಯನ್ನು ಬೆಳೆಸುವುದು.
2. ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ಮನೋಭಾವನೆ ಉಂಟು ಮಾಡುವುದು.
3. ವಿದ್ಯಾರ್ಥಿಗಳಲ್ಲಿ ಐತಿಹಾಸಿಕ ಚಿಂತನಾ ಶಕ್ತಿಯನ್ನು ಬೆಳೆಸುವುದು.
4. ರಾಷ್ಟ್ರೀಯತೆಯನ್ನು ಬೆಳೆಸುವುದು.
5. ಭಾರತೀಯ ಸಂಸ್ಕೃತಿಯ ಬಗ್ಗೆ ಅರಿವು.
6. ನಕಾಶೆ ಬಿಡಿಸುವ, ಓದುವ, ಕಾಲರೇಖೆ ಮತ್ತು ಕಾಲ ನಕ್ಷೆಗಳನ್ನು ತಯಾರಿಸುವ ಕೌಶಲ್ಯವನ್ನು ಬೆಳೆಸುವುದು.
7. ಅಂತರಾಷ್ಟ್ರೀಯ ತಿಳುವಳಿಕೆ ಮೂಡಿಸುವುದು.

132) ಇತಿಯಾಸ ಶಿಕ್ಷಕನು ಮಕ್ಕಳಲ್ಲಿ ನಿರೂಪಣಾ ಶೈಲಿಯನ್ನು ಬೆಳೆಸಲು ಈ ಬೋಧನಾ ಪದ್ದತಿಯನ್ನು ಬಳಸಬೇಕು.

(1) ಉಪನ್ಯಾಸ ಪದ್ಧತಿ

(2) ಸಮಸ್ಯಾ ಪರಿಹಾರ ಪದ್ಧತಿ

(3) ಮೂಲಾಧಾರ ವಿಧಾನ

(4) ಸಮೀಕ್ಷೆ ವಿಧಾನ

Ans: (1)

- ಉಪನ್ಯಾಸ ಪದ್ಧತಿ – ಉಪನ್ಯಾಸ ಪದ್ದತಿಯು ಸಾಂಪ್ರದಾಯಿಕ ಪದ್ಧತಿಯಾಗಿದ್ದು ಇದನ್ನು ಪಾಠ ಪ್ರವಚನ ಪದ್ದತಿ ಎಂದು ಕರೆಯುತ್ತಾರೆ. ಈ ಪದ್ಧತಿಯಲ್ಲಿ ಶಿಕ್ಷಕರು ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಯೋಜಿತ ರೀತಿಯಲ್ಲಿ ಮಕ್ಕಳಿಗೆ ಆ ವಿಷಯದ ಬಗ್ಗೆ ವಿವರಣೆ, ವರ್ಣನೆ, ಉದಾಹರಣೆ, ಹೋಲಿಕೆ, ಸ್ಪಷ್ಟೀಕರಣಗಳೊಂದಿಗೆ ಹೇಳುವುದನ್ನು ಉಪನ್ಯಾಸ ಎನ್ನುವರು.
- ಉಪನ್ಯಾಸ ಪದ್ದತಿಯ ಹಂತಗಳು

1. ಉಪನ್ಯಾಸದ ಪೂರ್ವಸಿದ್ಧತೆ
2. ವಿಷಯ ನಿರೂಪಣೆ
3. ಉಪನ್ಯಾಸ ಸ್ವಮೌಲ್ಯಮಾಪನ
4. ಅನುಸರಿಸುವಿಕೆ

- ಉಪನ್ಯಾಸ ಪದ್ಧತಿಯ ಉದ್ದೇಶಗಳು
  1. ಪ್ರೇರಣೆ
  2. ಸ್ಪಷ್ಟೀಕರಣ
  3. ವಿಷಯ ವಿಸ್ತರಣೆ
  4. ಪುನರಾವಲೋಕನ
  5. ಆಸಕ್ತಿ

133) ಇತಿಹಾಸ ಬೋಧಿಸುವ ಶಿಕ್ಷಕನು ಹೊಂದಿರಲೇಬೇಕಾದ ಲಕ್ಷಣ ಇದಾಗಿದೆ.

(1) ಸಮಾಜ ಸೇವೆ
(2) ಸಮಾಜದೊಂದಿಗೆ ಉತ್ತಮ ಸಂಬಂಧ
(3) ಕ್ಷೇತ್ರ ಅಧ್ಯಯನ ಮತ್ತು ಪ್ರವಾಸ ಕೈಗೊಳ್ಳುವುದು
(4) ರಾಜಕೀಯ ಭಾಷೆ ಹೊಂದಿರುವುದು

Ans: (3)

ಇತಿಹಾಸ ಶಿಕ್ಷಕರು ವಿಷಯದ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿರಬೇಕು.

- ಇತಿಹಾಸ ಶಿಕ್ಷಕನು ವೈಜ್ಞಾನಿಕ ಮನೋಭಾವನೆ ಹೊಂದಿರಬೇಕು.
- ಇತಿಹಾಸ ಶಿಕ್ಷಕನಿಗೆ ನಾಟಕ ಅಭಿನಯ ಮತ್ತು ನಿರೂಪಣಾ ಕಲೆ ಕರಗತವಾಗಿರಬೇಕು.
- ಇತಿಹಾಸ ಶಿಕ್ಷಕನಿಗೆ ಚಾರಿತ್ರಿಕ ಪ್ರಾಮುಖ್ಯತೆ ಉಳ್ಳ ವಸ್ತು ಸಂಗ್ರಹಣೆಯಲ್ಲಿ ಆಸಕ್ತಿ ಇರಬೇಕು.
- ಕ್ಷೇತ್ರ ಅಧ್ಯಯನ ಮತ್ತು ಪ್ರವಾಸದಲ್ಲಿ ಆಸಕ್ತಿ ಇರಬೇಕು ಆಸಕ್ತಿ ಇರಬೇಕು.
- ಶಿಕ್ಷಕನು ವಿವಿಧ ಬೋಧನಾ ಕ್ರಮಗಳನ್ನು ತಿಳಿದುಕೊಂಡಿರಬೇಕು.

134) ಸಮಾಜ ವಿಜ್ಞಾನವನ್ನು ಬೋಧಿಸಲು ಬಳಸುವ ಈ ಬೋಧನಾ ವಿಧಾನದಲ್ಲಿ ಸನ್ನಿವೇಶವನ್ನು ಒದಗಿಸಿ ಕೊಡಲಾಗುವುದು.

(1) ಜೀವನ ಚರಿತ್ರಾ ವಿಧಾನ (2) ಯೋಜನಾ ಪದ್ಧತಿ
(3) ಚರ್ಚಾ ಪದ್ಧತಿ (4) ಉಪನ್ಯಾಸ ಪದ್ಧತಿ

Ans: (2)

- ಯೋಜನಾ ಪದ್ಧತಿಯ ಪಿತಾಮಹ – ಕಿಲ್ ಪ್ಯಾಟ್ರಿಕ್.
- ಇದು ಚಟುವಟಿಕೆಯ ತತ್ವದ ಮೇಲೆ ರೂಪಿಸಲ್ಪಟ್ಟಿರುವ ಆಧುನಿಕ ವಿಧಾನ.
- ಯೋಜನಾ ಪದ್ಧತಿಯ ಮೊದಲ ಪ್ರತಿಪಾದಕರು ಜಾನ್ ಡ್ಯೂಯಿ.
- ಯೋಜನಾ ಪದ್ಧತಿ ಎಂದರೆ ಸಾಮಾಜಿಕ ಸನ್ನಿವೇಶದಲ್ಲಿ ನಡೆಯುವ ಮನಪೂರ್ವಕವಾದ ಉದ್ದೇಶಪೂರಿತ ಚಟುವಟಿಕೆ.
- ಯೋಜನಾ ಪದ್ಧತಿಯ ಹಂತಗಳು
  1. ಸನ್ನಿವೇಶ ಒದಗಿಸುವುದು
  2. ಯೋಜನೆಯ ಆಯ್ಕೆ
  3. ಯೋಜನೆಯ ಯೋಜನೆ
  4. ಕಾರ್ಯಾಚರಣೆ
  5. ಯೋಜನೆಯ ಮೌಲ್ಯಮಾಪನ
  6. ದಾಖಲೆ

135) ಇತಿಹಾಸ ಕೊಠಡಿಯ ಒಂದು ಭಾಗದಲ್ಲಿ ಈ ಕೆಳಗಿನ ಯಾವ ವಿಭಾಗವನ್ನು ಸ್ಥಾಪಿಸಲೇಬೇಕು?

(1) ವಸ್ತು ಸಂಗ್ರಹಾಲಯ (2) ಪ್ರಯೋಗಾಲಯ
(3) ಗಣಿತದ ಕಿಟ್ (4) ಭಾಷಾ ಉಪಕರಣಗಳು

Ans: (1)

- ಇತಿಹಾಸ ಕೊಠಡಿಯ ಒಂದು ಭಾಗದಲ್ಲಿ ವಸ್ತು ಸಂಗ್ರಹಾಲಯ ಇರಬೇಕು ಇದರಲ್ಲಿ ಮಳೆ ಮಾಪಕ, ಉಷ್ಣತಾಮಾಪಕ, ಅರಮನೆ, ದೇವಸ್ಥಾನ ಕೋಟೆ ಸ್ತಂಭ ಯುದ್ಧ ಕವಚ ಬಿಲ್ಲು ಬಾಣ ಈಟಿ ಕತ್ತಿ ಗುರಾನಿ ನಾಣ್ಯಗಳು ವೇಷಭೂಷಣ ಮಡಕೆ ಶಾಸನ ಸಂಸತ್ ಭವನ ತಾಜ್ಮಹಲ್ ದೆಹಲಿಯ ಕೆಂಪು ಕೋಟೆ ಚಾರ್ಮಿನಾರ್, ಕುತುಬ್ ಮಿನಾರ್, ಗೋಲು ಗುಂಬಜ ಹಳೆ ಪಾತ್ರೆಗಳು ಹಳೆ ಶಿಲಾಯುಗದಲ್ಲಿ ಮಾನವ ಬಳಸುತ್ತಿದ್ದಗಳು ಆಭರಣಗಳು ಅಂಚೆ ಚೀಟಿ ಪಿರಮಿಡ್ ಅಣೆಕಟ್ಟುಗಳು ಇತ್ಯಾದಿ ಮಾದರಿಗಳನ್ನು ಮಕ್ಕಳಿಂದ ತಯಾರಿಸಿ ಇತಿಹಾಸ ಕೊಠಡಿಯಲ್ಲಿ ಇರಿಸಿಕೊಳ್ಳಬೇಕು.

136) ಇತಿಹಾಸ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಕಾಲ ಪ್ರಜ್ಞೆಯನ್ನು ಬೆಳೆಸಲು ಈ ಬೋಧನೋಪಕರಣಗಳನ್ನು ಬಳಸುವುದು.

(1) ಕಪ್ಪು ಹಲಗೆ (2) ಚಿತ್ರಪಟ
(3) ವಿಸ್ತರಣಾ ಪಟ (4) ಕಾಲರೇಖೆ

Ans: (4)

- ಕಾಲಪ್ರಜ್ಞೆಯನ್ನು ಬೆಳೆಸುವಲ್ಲಿ ಕಾಲರೇಖೆಗಳು ಪ್ರಮುಖವಾದ ಪಾತ್ರ ನಿರ್ವಹಿಸುತ್ತವೆ. ಕಾಲರೇಖೆಯ ವಿಧಗಳು ಈ ಕೆಳಗಿನಂತಿವೆ,
  1. ಪ್ರಗತಿಪರ ಕಾಲ ರೇಖೆ
  2. ಪ್ರತಿಗಾಮಿ ಕಾಲರೇಖೆ
  3. ಹೋಲಿಕಾ ಕಾಲರೇಖೆ
  4. ಚಿತ್ರಾತ್ಮಕ ಕಾಲರೇಖೆ

137) ಇತಿಹಾಸ ಬೋಧನೆ ಹೆಚ್ಚು ಪರಿಣಾಮಕಾರಿಯಾಗಲು ಯಾವ ಚಟುವಟಿಕೆ ಹೆಚ್ಚು ಪ್ರಭಾವ ಬೀರುತ್ತದೆ?

(1) ನಾಟಕಾಭಿನಯ (2) ಚರ್ಚಾಸ್ಪರ್ಧೆ
(3) ರೇಡಿಯೋ ಬಳಕೆ (4) ಕಪ್ಪು ಹಲಗೆ ಬಳಕೆ

Ans: (1)

- ನಾಟಕ ಪದ್ಧತಿಯಿಂದ ಬೋಧಿಸಿದರೆ ಕಲಿಯುವ ವಿಷಯಗಳು ಆಕರ್ಷಕವಾಗಿ ಮನಸ್ಸಿಗೆ ನಾಟುತ್ತವೆ ಮತ್ತು ಮಕ್ಕಳ ತಿಳುವಳಿಕೆ ಮಟ್ಟ ಪಕ್ವವಾಗುತ್ತದೆ.
- ನಾಟಕ ವಿನಯ ಪದ್ಧತಿಯಲ್ಲಿ ಬೋಧಿಸುವುದರಿಂದ ಮಕ್ಕಳೇ ನಾಟಕಗಳಲ್ಲಿ ಪಾತ್ರ ಅಭಿನಯ ಮಾಡುವುದರಿಂದ ಕಲಿಕೆ ಜೀವಂತ ಸನ್ನಿವೇಶದಲ್ಲಿ ಚಟುವಟಿಕೆ ಪ್ರಧಾನವಾಗಿ ಮೂಡಿ ಬರುತ್ತದೆ. ಕಥೆ, ಜೀವನ ಚರಿತ್ರೆ, ವಿವರಣೆ ಮುಂತಾದವುಗಳನ್ನು ಸಂಭಾಷಣೆಯ ರೀತಿ ಅಗತ್ಯ ಪಾತ್ರಗಳನ್ನು ಸೃಷ್ಟಿಸಿ ಸಂದರ್ಭಕ್ಕೆ ಅನುಗುಣವಾಗಿ ಶಾರೀರಿಕ ಹಾವಭಾವಗಳನ್ನು ಅಳವಡಿಸಿಕೊಂಡು ಬೋಧಿಸುವುದೇ ನಾಟಕ ಅಭಿನಯ ಪದ್ಧತಿ.

138) ಇತಿಹಾಸ ಶಿಕ್ಷಕನು ತನ್ನ ವೃತ್ತಿ ಬೆಳವಣಿಗೆಗಾಗಿ ಈ ಕೆಳಗಿನ ಯಾವ ಕ್ರಮವನ್ನು ಕೈಗೊಳ್ಳಬೇಕು?

(1) ಹೆಚ್ಚು ಹೆಚ್ಚು ಪುಸ್ತಕಗಳನ್ನು ಅಧ್ಯಯನ ಮಾಡಬೇಕು.
(2) ಪ್ರಯೋಗಾಲಯದಲ್ಲಿ ಹೆಚ್ಚು ಕಾಲ ಕಳೆಯಬೇಕು
(3) ಕ್ಷೇತ್ರ ಪ್ರವಾಸವನ್ನು ಕೈಗೊಳ್ಳುವುದು
(4) ಸಂಘ–ಸಂಸ್ಥೆಗಳ ಸದಸ್ಯನಾಗಿರುವುದು

Ans: (3)

ಸಮಾಜ ವಿಜ್ಞಾನದ ಶಿಕ್ಷಕ ಅನೇಕ ಕ್ಷೇತ್ರಗಳಲ್ಲಿ ಸಂದರ್ಶಿಸಿ ಮಾಹಿತಿ ಸಂಗ್ರಹಿಸುವನಾಗಿರುತ್ತಾನೆ. ದೇಶ ನೋಡು ಇಲ್ಲವೇ ಕೋಶ ಓದು ಎಂಬಂತೆ ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಕೈಗೊಳ್ಳ ಮೂಲಕ ಪ್ರಾಯೋಗಿಕ ವಿವರಣೆ ನೀಡುವ ಸಾಮರ್ಥ್ಯವನ್ನು ಇತಿಹಾಸ ಶಿಕ್ಷಕ ಹೊಂದಿರುತ್ತಾನೆ. ಇದು ಇತಿಹಾಸನ ಗುಣ ಸಾಮರ್ಥ್ಯಗಳಲ್ಲಿ ಪ್ರಮುಖವಾಗಿದೆ.

139) ವಿದ್ಯಾರ್ಥಿಯ ಸಮುದ್ರಗುಪ್ತದ ಸಾಧನೆಯನ್ನು ವಿವರಿಸುವನು. ಇದು ಇತಿಹಾಸದ ಯಾವ ಉದ್ದೇಶಕ್ಕೆ ಸಂಬಂಧಿಸಿದೆ?

(1) ಜ್ಞಾನ (2) ತಿಳಿವಳಿಕೆ

(3) ಅನ್ವಯ (4) ಕೌಶಲ

Ans: (2)

- ಪ್ರತಿಯೊಂದು ಕ್ಷೇತ್ರದಲ್ಲಿಯೂ ನಿರ್ದಿಷ್ಟ ಉದ್ದೇಶಗಳಿದ್ದರೆ ಮಾತ್ರ ಆ ಕ್ಷೇತ್ರದಲ್ಲಿ ಯಶಸ್ಸನ್ನು ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕನಿಗೆ ತಾನು ಯಾವ ವಿಷಯ ಬೋಧಿಸುತ್ತಿದ್ದೇನೆ? ಏಕೆ ಬೋಧಿಸುತ್ತಿದ್ದೇನೆ? ಎಂಬ ಉದ್ದೇಶ ಇರಬೇಕು.
- ಬೋಧನಾ ಉದ್ದೇಶಗಳು – ವರ್ತನಾ ಪದಗಳು
  1. ಜ್ಞಾನ – ಸ್ಮರಿಸುತ್ತಾನೆ, ಗುರುತಿಸುತ್ತಾನೆ, ತೋರಿಸುತ್ತಾನೆ.
  2. ತಿಳುವಳಿಕೆ – ವಿವರಿಸುತ್ತಾನೆ, ಕಾರಣ ಕೊಡುತ್ತಾನೆ, ಉದಾಹರಿಸುತ್ತಾನೆ, ವಿವರಿಸುತ್ತಾನೆ, ಊಹಿಸುತ್ತಾನೆ, ಭಾಷಾಂತರಿಸುತ್ತಾನೆ, ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಮಾಡುತ್ತಾನೆ, ತಪ್ಪು ಹುಡುಕುತ್ತಾನೆ, ವಿಮರ್ಶಿಸುತ್ತಾನೆ
  3. ಅನ್ವಯ – ಭವಿಷ್ಯ ನುಡಿಯುತ್ತಾನೆ, ವಿಶ್ಲೇಷಿಸುತ್ತಾನೆ, ಊಹೆಗಳನ್ನು ಪರಿಶೀಲಿಸುತ್ತಾನೆ, ಸ್ಪಷ್ಟೀಕರಿಸುತ್ತಾನೆ, ಸಂಕ್ಷಿಪ್ತಗೊಳಿಸುತ್ತಾನೆ
  4. ಕೌಶಲ್ಯ – ಓದುತ್ತಾನೆ, ತಯಾರಿಸುತ್ತಾನೆ, ಬರೆಯುತ್ತಾನೆ, ಪ್ರದರ್ಶಿಸುತ್ತಾನೆ
  5. ಆಸಕ್ತಿ – ಭೇಟಿ ಕೊಡುತ್ತಾನೆ, ಭಾಗವಹಿಸುತ್ತಾನೆ, ಲೇಖನಗಳನ್ನು ಬರೆಯುತ್ತಾನೆ, ಕೊಡುಗೆಗಳನ್ನು ನೀಡುತ್ತಾನೆ, ಸಂಗ್ರಹಿಸುತ್ತಾನೆ
  6. ಮನೋಭಾವ
  7. ಪ್ರಶಂಸೆ
  8. ವಿಮರ್ಶಾತ್ಮಕ ಚಿಂತನೆ

140) ಇತಿಹಾಸ ಬೋಧನಾ ವಿಧಾನಗಳಲ್ಲಿ ಒಂದಾದ ಯೋಜನಾ ವಿಧಾನ ಈ ತತ್ವಕ್ಕೆ ಬದ್ದವಾಗಿದೆ.

(1) ಮಾಡಿ ಕಲಿ, ಜೀವಿಸುತ್ತಾ ಕಲಿ ತತ್ವ

(2) ಮಹಾನ್ ಪುರುಷ ಸಿದ್ಧಾಂತ ತತ್ವ

(3) ಹೋಲಿಕಾ ತತ್ವ

(4) ಅಣುವಿನಷ್ಟು ಪಠ್ಯಾಂಶಗಳನ್ನು ಬ್ರಹ್ಮಾಂಡದಷ್ಟು ವಿಸ್ತರಿಸುವ ತತ್ವ

Ans: (1)

- ಸಾಮಾಜಿಕ ಸನ್ನಿವೇಶದಲ್ಲಿ ನಡೆಯುವ ಮನಪೂರ್ವಕವಾದ ಉದ್ದೇಶಪೂರಿತ ಚಟುವಟಿಕೆಯೇ ಯೋಜನಾ ವಿಧಾನ.
- ಯೋಜನಾ ವಿಧಾನವು ಮಾಡಿ ಕಲಿ ಎಂಬ ತತ್ವಕ್ಕೆ ಒಳಪಟ್ಟ ಮನೋವೈಜ್ಞಾನಿಕ ಕಲಿಕೆಯ ವಿಧಾನವಾಗಿದೆ ಇದು ಜೀವಿಸುತ್ತಾ ಕಲಿ ಎಂಬುದನ್ನು ಪ್ರತಿಪಾದಿಸುತ್ತದೆ.
- ಯೋಜನಾ ವಿಧಾನದ ತತ್ವಗಳು
  1. ಉದ್ದೇಶ ತತ್ವ
  2. ಚಟುವಟಿಕೆ ತತ್ವ
  3. ಕಲಿಕೆಯ ನಿಯಮಗಳ ತತ್ವ
  4. ಉಪಯುಕ್ತತೆಯ ತತ್ವ
  5. ಸಹ ಸಂಬಂಧದ ತತ್ವ

6. ಸ್ವಾತಂತ್ರ್ಯದ ತತ್ವ
7. ವಾಸ್ತವಿಕ ತತ್ವ
8. ಅನುಭವದ ತತ್ವ

141) ಇತಿಹಾಸ ಶಿಕ್ಷಕರಾಗಿ ನೀವು ಅಶೋಕ ಸಾಮ್ರಾಟನ ತಂದೆ ಯಾರು ಎಂಬ ಪ್ರಶ್ನೆ ಕೇಳವುದರ ಮೂಲಕ ಈ ಕೆಳಗಿನ ಯಾವ ಉದ್ದೇಶವನ್ನು ಈಡೇರಿಸುವಿರಿ?

(1) ಅನ್ವಯ (2) ಕೌಶಲ
(3) ಜ್ಞಾನ (4) ತಿಳವಳಿಕ

Ans: (3)

- ವಿಶ್ವದಲ್ಲಿ ಜ್ಞಾನವೇ ಪರಮಶಕ್ತಿಯಾಗಿದೆ ಇದನ್ನು ಜ್ಞಾನ ಸಂಪತ್ತು ಎಂದು ಕರೆಯುತ್ತಾರೆ ಜ್ಞಾನಕ್ಕಿಂತ ಮಿಗಿಲಾದದ್ದು ಯಾವುದು ಇಲ್ಲ.
- ಹೆಚ್ಚಿನ ಮಾಹಿತಿಗಾಗಿ ಇದೇ ಪ್ರಶ್ನೆ ಪತ್ರಿಕೆಯ 49 ನೇ ಪ್ರಶ್ನೆಯ ವಿವರಣಾತ್ಮಕವಾದ ಉತ್ತರವನ್ನು ನೋಡಿಕೊಳ್ಳುವುದು.

142) ಸ್ಥಳೀಯ ಇತಿಹಾಸ ಬೋಧನೆಯಲ್ಲಿ ಯಶಸ್ವಿಯಾಗಲು ಶಿಕ್ಷಕನು ಈ ಚಟುವಟಿಕೆ ಕೈಗೊಳ್ಳಬೇಕು:

(1) ಪ್ರವಾಸ ಕೈಗೊಳ್ಳುವುದು
(2) ಸ್ಥಳೀಯ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಅಧ್ಯಯನ
(3) ವಿದ್ಯಾರ್ಥಿಗಳ ಸಂದರ್ಶನ
(4) ಅಂತರಾಷ್ಟ್ರೀಯ ಮಟ್ಟದ ಇತಿಹಾಸದ ಅಧ್ಯಯನ

Ans: (2)

- ಜೀವನ ಚರಿತ್ರೆ ವಿಧಾನವನ್ನು ಪ್ರತಿಪಾದಿಸಿದವರು ಖ್ಯಾತ ಇತಿಹಾಸ ತಜ್ಞ ಥಾಮಸ್ ಕಾರ್ಲೈಲ್.
- ಜೀವನ ವೃತ್ತಾಂತವೆಂದರೆ ಒಬ್ಬ ವ್ಯಕ್ತಿಯ ಜೀವನದ ಬಗ್ಗೆ ಬರೆದಿಟ್ಟ ವಿವರ.
- ಇದು ಮಹಾಪುರುಷರ ಜೀವನ ಚರಿತ್ರೆಯನ್ನು ಬೋಧಿಸುವ ಮುಖಾಂತರ ವಿದ್ಯಾರ್ಥಿಗಳಲ್ಲಿ ನೈತಿಕತೆ ಮತ್ತು ಆದರ್ಶವನ್ನು ಕಲಿಸುತ್ತದೆ.

143) ಇತಿಹಾಸ ಶಿಕ್ಷಕರಾದ ನಿಮಗೆ ಈ ಕೆಳಗಿನ ಯಾವ ವಿಷಯ ಇತಿಹಾಸ ಬೋಧನೆಗೆ ಸಹಕಾರಿಯಾಗುತ್ತದೆ?

(1) ಸಾಹಿತ್ಯ (2) ಭೌತಶಾಸ್ತ್ರ
(3) ಅರ್ಥಶಾಸ್ತ್ರ (4) ರಸಾಯನಶಾಸ್ತ್ರ

Ans: (1)

ಇತಿಹಾಸದ ಕೇಂದ್ರಬಿಂದು ಮಾನವ. ಇತಿಹಾಸವು ಎಂದು ವಿವಿಧ ಕಾಲದ ಜನತೆಯನ್ನು ಕುರಿತು ಅಧ್ಯಯನ ಮಾಡುತ್ತದೆ. ಇತಿಹಾಸವು ಆಯಾ ಕಾಲದ ಸಾಹಿತ್ಯದ ಕುರಿತು ತಿಳಿಸುತ್ತದೆ. ಆಯಾ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಂಸ್ಕೃತಿಕ, ಧಾರ್ಮಿಕ ಮತ್ತು ಬೌದ್ಧಿಕ ಕ್ಷೇತ್ರಗಳಲ್ಲಿ ಮಾನವನ ಚಟುವಟಿಕೆ ಮತ್ತು ಸಾಧನೆಗಳ ಬಗ್ಗೆ ತಿಳಿಸುತ್ತದೆ.

144) ಇತಿಹಾಸ ಪಠ್ಯವಸ್ತುವಿನ ಗುಣ–ಲಕ್ಷಣಗಳಲ್ಲಿ ಒಂದಾಗಿದೆ.

(1) ವ್ಯಾವಹಾರಿಕ ಜ್ಞಾನ ಬೆಳೆಸುವುದು
(2) ಸಂವಹನ ಕೌಶಲ ಬೆಳೆಸುವುದು
(3) ವೈಜ್ಞಾನಿಕ ಮನೋಭಾವ ಬೆಳೆಸುವುದು
(4) ಅಂತರಾಷ್ಟ್ರೀಯ ತಿಳಿವಳಿಕೆ ಮೂಡಿಸುವುದು

Ans: (4)

- ಒಂದು ನಿರ್ದಿಷ್ಟ ಭಾಷಾ ಪಠ್ಯಪುಸ್ತಕದ ಸಹಾಯದಿಂದ ಆ ಪಠ್ಯಪುಸ್ತಕ ನಿರ್ದೇಶಿಸುವ ರೀತಿ ಭಾಷೆ ಮತ್ತು ವಿಷಯಜ್ಞಾನವನ್ನು ಕಲಿಸುವ ಕ್ರಮವನ್ನು ಪಠ್ಯಪುಸ್ತಕ ಪದ್ಧತಿ ಎನ್ನುವರು.
- ಇತಿಹಾಸ ಪಠ್ಯಪುಸ್ತಕವು ಬೋಧನಾ ಗುರಿ ಮತ್ತು ಉದ್ದೇಶಗಳನ್ನು ಒಳಗೊಂಡಿರಬೇಕು.

- ಇತಿಹಾಸ ಪಠ್ಯಪುಸ್ತಕದ ಭಾಷೆ ಸರಳ, ಸ್ಪಷ್ಟ ಮತ್ತು ಆಕರ್ಷಕವಾಗಿರಬೇಕು.
- ಇತಿಹಾಸ ಪಠ್ಯಪುಸ್ತಕವೂ ಅಂತರಾಷ್ಟ್ರೀಯ ತಿಳುವಳಿಕೆಯನ್ನು ಮೂಡಿಸಬೇಕು.
- ಇತಿಹಾಸ ಪಠ್ಯಪುಸ್ತಕವೂ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಂತಿರಬೇಕು.
- ಇತಿಹಾಸ ಪಠ್ಯಪುಸ್ತಕವೂ ಪ್ರಜಾಸತ್ತಾತ್ಮಕ ತತ್ವಗಳಿಗೆ ಅನುಗುಣವಾಗಿರಬೇಕು.
- ಇತಿಹಾಸ ಪಠ್ಯಪುಸ್ತಕವು ವಿದ್ಯಾರ್ಥಿಗಳ ಆಸಕ್ತಿ, ಪರಿಪಕ್ವತೆ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ರಚನೆಯಾಗಿರಬೇಕು.

145) ಇತಿಹಾಸ ಶಿಕ್ಷಕನು ತರಗತಿಯಲ್ಲಿ ಭೂಪಟವನ್ನು ಬಳಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಈ ಸಾಮರ್ಥ್ಯವನ್ನು ಬೆಳೆಸುವುದು.

(1) ಭಾಷಾ ಸಾಮರ್ಥ್ಯ (2) ಓದುಗಾರಿಕೆ ಸಾಮರ್ಥ್ಯ

(3) ಸ್ಥಳ ಪ್ರಜ್ಞೆ ಸಾಮರ್ಥ್ಯ (4) ಕಾಲ ಪ್ರಜ್ಞೆ ಸಾಮರ್ಥ್ಯ

Ans: (3)

ಐತಿಹಾಸಿಕ ಘಟನೆಗಳು ಯಾವುದಾದರೂ ಒಂದು ಸ್ಥಳದಲ್ಲಿಯೇ ನಡೆಯುತ್ತದೆ. ಇದು ನಿರ್ವಾತದಲ್ಲಿ ಜರುಗುವ ಘಟನೆಯಲ್ಲ ಅಂದರೆ ಪ್ರತಿ ಘಟನೆಗೂ ಒಂದು ನಿರ್ದಿಷ್ಟವಾದ ಸ್ಥಳ ಇರುತ್ತದೆ ಆದುದರಿಂದ ಮಾನವನ ಸ್ಥಳ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕಾದದ್ದು ಅವಶ್ಯಕತೆ.

- ಇದನ್ನು ಐತಿಹಾಸಿಕವಾಗಿ ಸ್ಥಳ ಪ್ರಜ್ಞೆ ಎಂದು ಕರೆಯುತ್ತೇವೆ.
- ಸ್ಥಳ ಪ್ರಜ್ಞೆಯನ್ನು ಬೆಳೆಸುವ ವಿಧಾನಗಳು
  1. ಭೂಪಟಗಳು ಅಥವಾ ನಕಾಶೆಗಳು
  2. ಅಟ್ಲಾಸ್ ಪುಸ್ತಕ
  3. ಗೋಳ
  4. ಸ್ಥಳಪಟಗಳು
  5. ವಿಸ್ತರಣಾ ಪಟಗಳು

146) ಮೌರ್ಯ ಸಾಮ್ರಜ್ಯದ ಬೋಧನೆಯ ನಂತರ ಯಶಸ್ವಿಯಾಗಿ ಮೌಲ್ಯಮಾಪನ ಮಾಡಲು ಯಾವ ಬೋಧನೋಪಕರಣ ಬಳಸುವಿರಿ?

(1) ಸ್ವಾತಂತ್ರ್ಯ ಪೂರ್ವ ಭಾರತದ ಭೂಪಟ

(2) ಭಾರತದ ಭೂಪಟ

(3) ಕರ್ನಾಟಕದ ಭೂಪಟ

(4) ಗ್ಲೋಬ್

Ans: (1)

- ಸಮಾಜ ವಿಜ್ಞಾನ ಬೋಧನಾ ಸಂಪನ್ಮೂಲಗಳಲ್ಲಿ ದೃಕ್ – ಶ್ರವಣ ಉಪಕರಣಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಇವು ಶಿಕ್ಷಕರಿಗೆ ಪಾಠಗಳನ್ನು ಬೋಧಿಸಲು ಬೇಕಾಗುವ ಯುದ್ಧೋಪಕರಣಗಳು ಇದ್ದಂತೆ.
- ವಿದ್ಯಾರ್ಥಿಯ ಕಲಿಕೆಯು ಪಂಚೇಂದ್ರಿಯಗಳು ಅನುಭವವನ್ನು ಆಧರಿಸಿದೆ.
- ಮೌರ್ಯ ಸಾಮ್ರಾಜ್ಯವು ಸ್ವಾತಂತ್ರ್ಯ ಪೂರ್ವದ ಪ್ರಮುಖ ಸಾಮ್ರಾಜ್ಯವಾಗಿರುವುದರಿಂದ ಸ್ವಾತಂತ್ರ್ಯ ಪೂರ್ವ ಭಾರತದ ಭೂಪಟವನ್ನು ಶಿಕ್ಷಕರು ಬಳಸಬೇಕು. ಮೌರ್ಯ ಸಾಮ್ರಾಜ್ಯವು ಭಾರತದ ಮೊಟ್ಟ ಮೊದಲ ಸಾಮ್ರಾಜ್ಯವಾಗಿದೆ.

147) ಇತಿಹಾಸ ಶಿಕ್ಷಕರಾಗಿ ನೀವು ವಿದ್ಯಾರ್ಥಿಗಳನ್ನು ಈ ಕೆಳಗಿನ ಯಾವ ಸ್ಥಳಕ್ಕೆ ಪ್ರವಾಸ ಕರೆದುಕೊಂಡು ಹೋಗಲು ಬಯಸುತ್ತೀರಿ?

(1) ಯಾಣ (2) ಮಂಗಳೂರು ಬೀಚ್

(3) ಹಂಪೆ (4) ಹಟ್ಟಿ ಚಿನ್ನದ ಗಣಿ

Ans: (3)

- ಹಂಪೆ – ಹಂಪಿ ಭಾರತದ ಕರ್ನಾಟಕ ರಾಜ್ಯದಲ್ಲಿದೆ. ಇದು ಬೆಂಗಳೂರಿನಿಂದ 340 ಕಿ.ಮೀ ಮತ್ತು ಹೈದರಾಬಾದ್ ನಿಂದ 377 ಕಿ.ಮೀ. ದೂರದಲ್ಲಿದೆ. ಹಂಪಿ 14 ನೇ ಶತಮಾನದ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಆಗಿತ್ತು.
- ಹಂಪಿಯಲ್ಲಿ ಬಾದಾಮಿಯ ಚಾಲುಕ್ಯರ ದೇವಾಲಯಗಳು ಕಂಡುಬರುತ್ತವೆ.

148) ವಿದ್ಯಾರ್ಥಿಗಳ ಅನ್ವಯ ಸಾಮರ್ಥ್ಯವನ್ನು ಪರೀಕ್ಷಿಸಲು ಈ ಕೆಳಗಿನ ಯಾವ ಪ್ರಶ್ನೆಸಹಾಯಕವಾಗುತ್ತದೆ?

(1) ಕಳಿಂಗ ಮಹಾಯುದ್ಧ ಯಾರ ಯಾರ ಮಧ್ಯೆನಡಯಿತು?

(2) ಕಳಿಂಗ ಮಹಾಯುದ್ದದ ಪರಿಣಾಮ ವಿಶ್ಲೇಷಿಸಿ

(3) ಕಳಿಂಗ ಮಹಾಯುದ್ದದ ಬಗ್ಗೆ ವಿವರಿಸಿ.

(4) ಕಳಿಂಗ ಮಹಾಯುದ್ದದ ಎಷ್ಟರಲ್ಲಿ ನಡೆಯಿತು?

Ans: (2)

ವಿದ್ಯಾರ್ಥಿಯು ಸಾಮಾಜಿಕ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಾಯೋಗಿಕ ಕೌಶಲ್ಯವನ್ನು ಬೆಳೆಸಿಕೊಳ್ಳುತ್ತಾನೆ ಇಲ್ಲಿ ಓದುವ, ವಿಶ್ಲೇಷಸುವ, ತಯಾರಿಸುವ, ಬರೆಯುವ, ಗುರುತಿಸುವ, ಪ್ರದರ್ಶಿಸುವ, ಸಂಗ್ರಹಿಸುವ ಮತ್ತು ವೀಕ್ಷಿಸುವ ಮೊದಲಾದ ಕೌಶಲಗಳು ಬೆಳೆಯುತ್ತವೆ.

149) ಸಮಾಜ ವಿಜ್ಞಾನ ತರಗತಿಯಲ್ಲಿ ನಡೆಯುವ ಮೌಲ್ಯಮಾಪನವು ಹೀಗಿರಬೇಕು

(1) ವಿಷಯಾಧಾರಿತವಾಗಿರಬೇಕು

(2) ಸ್ಮರಣೆ ಆಧಾರಿತವಾಗಿರಬೇಕು

(3) ಮಾಹಿತಿ ಆಧಾರಿತವಾಗಿರಬೇಕು

(4) ಸಾಮರ್ಥ್ಯಾಧಾರಿತವಾಗಿರಬೇಕು

Ans: (4)

- ವಿದ್ಯಾರ್ಥಿಗಳು ವಿಷಯಗಳನ್ನು ಅರ್ಥಮಾಡಿಕೊಳ್ಳಲು ಶಕ್ತರ ಆದರೆ ಅದನ್ನು ಕಲಿಕಾ ಸಾಮರ್ಥ್ಯ ಎನ್ನುವರು. ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಮಾರ್ಗದರ್ಶನ ಮಾಡುವ ಪ್ರಕ್ರಿಯೆ ಸಾಮರ್ಥ್ಯ ಆಧಾರಿತ ಬೋಧನೆ ಎಂದು ಕರೆಯಬಹುದು. ಸಮಾಜ ವಿಜ್ಞಾನ ವಿಷಯವು ಸಾಮರ್ಥ್ಯ ಆಧಾರಿತ ಬೋಧನೆಗೆ ಅನುಗುಣವಾಗಿ ನಡೆಯಬೇಕು.
- ಇಲ್ಲಿ ವಿದ್ಯಾರ್ಥಿಗಳಲ್ಲಿ ಬೆಳೆಸಬಹುದಾದ ನಿರ್ದಿಷ್ಟ ಸಾಮರ್ಥ್ಯಗಳನ್ನು ಮೊದಲೇ ನಿರ್ಧರಿಸಿ, ಅದಕ್ಕೆ ಅನುಗುಣವಾದ ಕಲಿಕಾ ಸನ್ನಿವೇಶ, ಕಲಿಕಾ ಪದ್ಧತಿ, ಕಲಿಕಾ ಸಾಧನಗಳನ್ನು ಪೂರೈಸುವುದು, ಕಲಿಕಾ ಪ್ರಕ್ರಿಯೆ ಪೂರ್ಣವಾದಾಗ, ವಿದ್ಯೆಯಲ್ಲಿ ಪೂರ್ವ ನಿರ್ಧರಿತ ಸಾಮಾನ್ಯ ಬೆಳವಣಿಗೆ ಯಾಗಿದ್ದರೆ ಅದನ್ನು ಸಾಮರ್ಥ್ಯ ಆಧಾರಿತ ಕಲಿಕೆ ಎನ್ನುವರು.

150) ಸಮಾಜ ವಿಜ್ಞಾನ ಮೌಲ್ಯಮಾಪನದಲ್ಲಿ ಅಂಕಗಳ ಬದಲಿಗೆ ಶ್ರೇಣ ವ್ಯವಸ್ಥೆಯನ್ನು ಜಾರಿಗೆ ತಂದ ವಿನೂತನ ಕಾರ್ಯಕ್ರಮ.

(1) ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಪದ್ಧತಿ

(2) ಚೈತನ್ಯ ಪದ್ಧತಿ

(3) ತ್ರೈಮಾಸಿಕ ಪದ್ಧತಿ (4) ಸೆಮಿಸ್ಟರ್ ಪದ್ಧತಿ

Ans: (1)

- ಮೌಲ್ಯಮಾಪನವು ಶಿಕ್ಷಣದ ಅವಿಭಾಜ್ಯ ಅಂಗವಾಗಿದ್ದು ಶೈಕ್ಷಣಿಕ ಉದ್ದೇಶಗಳನ್ನು ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ, ಎಷ್ಟು ಪರಿಣಾಮಕಾರಿಯಾಗಿ, ಹೇಗೆ ಸಾಧಿಸಿದ್ದಾರೆ ಇದರಿಂದ ಜ್ಞಾನ, ವರ್ತನೆ, ಕೌಶಲ ಮತ್ತು

ಮನೋಭಾವಗಳಲ್ಲಿ ಆಗಿರುವ ಬದಲಾವಣೆ ಏನು ಎಂಬುದನ್ನು ಗುರುತಿಸುವ ನಿರಂತರವಾದ ವ್ಯಾಪಕ ಮತ್ತು ನಿರ್ದಿಷ್ಟ ಪ್ರಕ್ರಿಯೆಯನ್ನು ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಎಂದು ಕರೆಯಬಹುದು ಇದು ಪಠ್ಯ ಮತ್ತು ಸಹಪಠ್ಯ ಚಟುವಟಿಕೆ ಒಳಗೊಂಡು ಶ್ರೇಣಿ ವ್ಯವಸ್ಥೆಯಲ್ಲಿ ನಡೆಯುತ್ತದೆ.

For Regular Updates

Join

Topexams Academy
Join Telegram Group Exam Prep

Karnataka Academy
Join Telegram Group Exam Prep

ಕರ್ನಾಟಕ ಅಕಾಡೆಮಿ

K-TET SUCCESS SERIES

K-TET

6–8 ಶಿಕ್ಷಕರ ನೇಮಕಾತಿ

ಗಣಿತ–ವಿಜ್ಞಾನ

ವಿವರಣಾತ್ಮಕ ಪ್ರಶ್ನಾಕೋಶ

ಪರೀಕ್ಷೆಗೆ ಎಷ್ಟು ಬೇಕೋ ಅಷ್ಟೇ ಮಾಹಿತಿ ಒಳಗೊಂಡಿದೆ

ಡಿ.ಎಡ್ + ಡಿಗ್ರಿ/B.E or B.TECH + ಬಿ.ಎಡ್ ಅಭ್ಯರ್ಥಿಗಳಿಗಾಗಿ ಮಾತ್ರ

ಪುಸ್ತಕದ ವಿಶೇಷತೆ

- KTBS ಪಠ್ಯ ಪುಸ್ತಕಗಳ ಪರಾಮರ್ಶನದೊಂದಿಗೆ ವಿಶ್ಲೇಷಣೆ
- Blue Print ಆಧಾರಿತ ಪ್ರಶ್ನೋತ್ತರಗಳ ವಿವರಣೆ
- ಬೋಧನಾಶಾಸ್ತ್ರದ ಪ್ರಶ್ನೆಗಳ ಸಮಂಜಸ ವಿವರಣೆ
- K-TETಯಲ್ಲಿ 119 ಗರಿಷ್ಠ ಅಂಕಗಳನ್ನು ಗಳಿಸಿ 5 ಬಾರಿ TET, 2 ಬಾರಿ C-TET ಹಾಗೂ GPSTR ಪರೀಕ್ಷೆಯಲ್ಲಿ ಶೇ 78.91 ಗಳಿಕೆಯ ಅನುಭವದೊಂದಿಗೆ ರಚಿಸಲ್ಪಟ್ಟ ಏಕೈಕ ಕೃತಿ.
- KARTET ಪರೀಕ್ಷೆಯ ಸಂಪೂರ್ಣ ಮಾಹಿತಿ ಒಳಗೊಂಡಿದೆ.

6 KTET ಪ್ರಶ್ನೆ ಪತ್ರಿಕೆಗಳು
2014, 2015, 2017
2019, 2020, 2021

5 K-TET ಐದು ಮಾದರಿ ಪ್ರಶ್ನೆ ಪತ್ರಿಕೆಗಳು

Score More Target 120+

ಮಾರ್ಗದರ್ಶನ ನಮ್ಮದು, ಯಶಸ್ಸು ನಿಮ್ಮದು

IMAMSAB MULTANI

ಸಂಜೀವ ವಿ ರಾಯ್ಕರ್

ನಿಮ್ಮ ಸ್ಥಳೀಯ ಬುಕ್‌ಸ್ಟಾಲ್‌ನಲ್ಲಿ ಮೊದಲು ವಿಚಾರಿಸಿ.

https://topexamsbookhouse.com/

ರಾಜ್ಯದ ಪ್ರತಿ ಹಳ್ಳಿ-ಹಳ್ಳಿಗೂ
ಉತ್ತಮ ಪುಸ್ತಕಗಳನ್ನು ಒದಗಿಸುವ ಉದ್ದೇಶದೊಂದಿಗೆ ನಿಮ್ಮ..
10% ರಿಂದ 25% ಡಿಸ್ಕೌಂಟ್
Free Delivery
Visit For More Books
Topexams Online Book House
10% -25% OFF
Web Store
Helpline